بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


ಡಿಸೆಂಬರ್ 2015

*ಸಂಪಾದಕ : ಮುಹಮ್ಮದ್ ಯೂಸುಫ್*

| ಆರಂಭ : 1975 | ಸಂಪುಟ : 32 | ಫತಹ್ 1394 ಹಿಜರೀ ಶಮ್ಸೀ | ಸಂಚಿಕೆ : 3-4 |
| --- | --- | --- | --- |


## ಹಿಂದೂ – ಮುಸ್ಲಿಂ ಐಕ್ಯ

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಸಂಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದೂಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಅಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಛೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟುಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

ಮಿತ್ರರೇ, ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಘಟ್ಟದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಕಾಂಕ್ಷೆಯಿಂದಲೂ ಮುನ್ನಡೆಯುವುದು ಅತ್ಯಾವಶ್ಯಕವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಬಿಟ್ಟು ಅನುಕಂಪಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವಿತ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದ್ದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯವಾಗಿದೆ.

– **ಹಝ್ರತ್ ಮಿರ್ಝಾ ಗುಲಾಂ ಅಹ್ಮದ್,** ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಅಲ್ಲಾಹನು ದಯಾವಂತನೂ ಎಲ್ಲ ವಿಚಾರಗಳಲ್ಲಿ ದಯೆಯನ್ನು ಇಷ್ಟಪಡುವವನೂ ಆಗಿದ್ದಾನೆ. (ಬುಖಾರಿ, ಮುಸ್ಲಿಂ)
- ಯಾವುದೇ ವಿಚಾರದಲ್ಲಿ ದಯೆ ಅಲಂಕಾರವಾಗಿದೆ. ಅದು ನೀಗಿಸಲ್ಪಟ್ಟರೆ, ವಿಕೃತವಾಗುವುದು. (ಮುಸ್ಲಿಂ)
- ನೀವು ಸುಲಭ ಮಾರ್ಗವನ್ನು ಅವಲಂಬಿಸಿರಿ. ಪ್ರಯಾಸಕರವಾದುದನ್ನು ಕೈಬಿಡಿರಿ. ಹಾಗೆಯೇ ನೀವು ಸಂತೋಷಕರವಾದ ಮಾತುಗಳನ್ನಾಡಿರಿ; ಸಿಟ್ಟುಗೊಳ್ಳಬೇಡಿರಿ. (ಬುಖಾರಿ, ಮುಸ್ಲಿಂ)
- ಯಾರಾದರೂ ಕರುಣೆಯನ್ನು ಸ್ವಯಂ ನಿಷೇಧಿಸಿದರೆ, ಸರ್ವ ಒಳಿತುಗಳೂ ಅವನಿಗೆ ನಿಷೇಧಿಸಲ್ಪಡುವುವು. (ಕರುಣೆಯಿಲ್ಲದವನು ಎಷ್ಟು ಸದ್ವರ್ತನೆ ಮಾಡಿದರೂ ಅವನು ಒಳ್ಳೆಯವನೆಂದು ಗಣಿಸಲ್ಪಡಲಾರನು) (ಮುಸ್ಲಿಂ)
- ಜನರಿಗೆ ಹತ್ತಿರವಾಗಿರುವವನಿಗೂ ಸೌಮ್ಯಶೀಲನಿಗೂ ಸಹಿಷ್ಣುತೆ ತೋರಿಸುವವನಿಗೂ ಕ್ಷಮಾಶೀಲನಿಗೂ ನರಕ ನಿಷಿದ್ಧವಾಗಿದೆ. (ತಿರ್ಮಿಧೀ)
- ಒಬ್ಬನಿಗೆ ಅಲ್ಲಾಹನು ಆಡಳಿತಾಧಿಕಾರವನ್ನು ನೀಡಿದನು. ಅವನು ಜನರನ್ನು ವಂಚಿಸುತ್ತಾ ಮೃತಪಟ್ಟನು. ಆಗ ಅಲ್ಲಾಹನು ಅವನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸದಿರಲಿಕ್ಕಿಲ್ಲ. (ಬುಖಾರಿ, ಮುಸ್ಲಿಂ)
- ನೀಚನಾದ ಆಡಳಿತಾಧಿಕಾರಿ ಪ್ರಜೆಗಳ ಮೇಲೆ ಮಮತೆಯಿಲ್ಲದವನಾಗಿದ್ದಾನೆ. ಆದ್ದರಿಂದ ಅಂತಹವರ ಜತೆ ಸೇರದಿರಲಿಕ್ಕೆ ಜಾಗರೂಕತೆವಹಿಸಬೇಕು. (ಬುಖಾರಿ, ಮುಸ್ಲಿಂ)
- ನನ್ನನ್ನು ಅನುಸರಿಸುವವನು ಅಲ್ಲಾಹನನ್ನು ಅನುಸರಿಸಿದನು. ನನ್ನನ್ನು ಧಿಕ್ಕರಿಸುವವನು ಅಲ್ಲಾಹನನ್ನು ಧಿಕ್ಕರಿಸಿದನು. ಅದೇ ಪ್ರಕಾರ, ಅಮೀರನ್ನು ಅನುಸರಿಸಿದವನು ನನ್ನನ್ನು ಅನುಸರಿಸಿದನು. ಅಮೀರನ್ನು ಧಿಕ್ಕರಿಸಿದವನು ನನ್ನನ್ನು ಧಿಕ್ಕರಿಸಿದನು. (ಬುಖಾರಿ, ಮುಸ್ಲಿಂ)
- ನಾನೊಂದು ವಿಷಯವನ್ನು ನಿಮಗೆ ತಿಳಿಸುವೆನು. ಅದನ್ನು ಕೈಗೊಂಡರೆ ನೀವು ಪರಸ್ಪರ ಸ್ನೇಹಿಸುವವರಾಗುವಿರಿ. ನಿಮ್ಮೆಡೆಯಲ್ಲಿ ಸಲಾಂ ವ್ಯಾಪಿಸುವುದಾಗಿದೆ ಅದು. (ಮುಸ್ಲಿಂ)
- ನಾಲ್ಕು ಸ್ವಭಾವಗಳು ಯಾರಲ್ಲಿ ಇವೆಯೋ ಅವನು ಸಾಕ್ಷಾತ್ ಕಪಟ ವಿಶ್ವಾಸಿಯಾಗಿದ್ದಾನೆ. 1. ವಿಶ್ವಾಸ ವಂಚನೆ 2. ಸುಳ್ಳು ಹೇಳುವುದು. 3. ಒಪ್ಪಂದವನ್ನು ಮುರಿಯುವುದು. 4. ತಪ್ಪು ಹೊರಿಸುವಾಗ ಕೆಟ್ಟ ಮಾತು ಪ್ರಯೋಗಿಸುವುದು. (ಬುಖಾರಿ, ಮುಸ್ಲಿಂ)


**ಯುಗರಶ್ಮಿಗೆ ಚಂದಾದಾರರಾಗಿರಿ**

**ವಾರ್ಷಿಕ ಚಂದಾ: ರೂ. 60/–, ಅಂಚೆ ಮೂಲಕ : ರೂ. 70/–**

ಸಂಪರ್ಕಿಸಿರಿ : 99 00 410 789

# ನೈಜ ಇಸ್ಲಾಮ್ ಮತ್ತು ಉಗ್ರಗಾಮಿ ಗುಂಪುಗಳ ಮಧ್ಯೆ ಇರುವ ವ್ಯತ್ಯಾಸ



**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫರು 8–11–2014ರಂದು ಲಂಡನ್‌ನಲ್ಲಿ ಜರಗಿದ 11ನೇ ನ್ಯಾಶನಲ್ ಪೀಸ್ ಸಿಂಪೋಸಿಯಮ್(ಶಾಂತಿ ವಿಚಾರಗೋಷ್ಠಿ)ನಲ್ಲಿ ಮಾಡಿದ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ಈ ವರ್ಷದ ಪೀಸ್ ಸಿಂಪೋಸಿಯಮ್‌ಗೆ ನೀವೆಲ್ಲರೂ ಆಗಮಿಸಿದುದಕ್ಕೋಸ್ಕರ ನಿಮಗೆ ನಾನು ಮೊದಲನೆಯದಾಗಿ ಕೃತಜ್ಞತೆ ಅರ್ಪಿಸುತ್ತೇನೆ. ನಿಮ್ಮ ಪೈಕಿ ಅನೇಕರಿಗೆ ತಿಳಿದಿರುವ ಹಾಗೆ ಕಳೆದ ಒಂದು ದಶಕದಲ್ಲಿ ಪ್ರತಿವರ್ಷ ಈ ಪೀಸ್ ಸಿಂಪೋಸಿಯಮ್ ಜರಗಿಸುವುದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಾರ್ಷಿಕ ಕಾರ್ಯಕ್ರಮಗಳ ಒಂದು ಸ್ಥಿರವಾದ ಭಾಗವಾಗಿದೆ. ಸಾಮಾನ್ಯವಾಗಿ ಮಾರ್ಚ್ ತಿಂಗಳಲ್ಲಿ ಇದನ್ನು ನಡೆಸಲಾಗುತ್ತಿದೆಯಾದರೂ ಈ ವರ್ಷ ವಿವಿಧ ಕಾರಣಗಳಿಂದ ನವೆಂಬರ್‌ನಲ್ಲಿ ನಡೆಸಲಾಗುತ್ತಿದೆ. ಈ ದಿನ ನೇಶನಲ್ ರಿಮೆಂಬರೆನ್ಸ್ ದಿನಾಚರಣೆ ನಡೆಸಲಾಗುತ್ತಿದೆಯಾದ ಕಾರಣ ನಾವು ಆಮಂತ್ರಿಸಿದ ಅನೇಕ ಅತಿಥಿಗಳಿಗೆ ನಮ್ಮ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗದಿರಬಹುದು.

ಇಲ್ಲಿಗೆ ಆಗಮಿಸಿದ ನಿಮ್ಮೆಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ. ಒಂದು ಮುಸ್ಲಿಮ್ ಪಂಗಡ ಶಾಂತಿಯ ಬಗ್ಗೆ ಏನು ಹೇಳುತ್ತಿದೆ ಎಂದು ತಿಳಿಯಲು ನೀವು ಬಯಸುತ್ತೀರೆಂದು ನೀವು ಇಲ್ಲಿಗೆ ಬಂದು ಉಪಸ್ಥಿತರಾಗಿರುವುದು ಸಾಬೀತುಗೊಳಿಸುತ್ತಿದೆ. ಇಂದಿನ ಕಾಲದಲ್ಲಿ ವಿಶ್ವಶಾಂತಿಯ ಬಗ್ಗೆ ಮತ್ತು ತಲೆದೋರಿರುವ ಸಂಘರ್ಷಗಳ ಬಗ್ಗೆ ಬಹಳ ಚರ್ಚೆ ನಡೆಯುತ್ತಿದೆ.

ಇಂದಿನ ಕಾಲದ ಲೋಕದ ಸ್ಥಿತಿ ಭಯಾನಕವೂ ಆತಂಕದಾಯಕವೂ ಆಗಿದೆ. ಇಂದು ತಲೆದೋರಿರುವ ಅಸ್ತವ್ಯಸ್ತತೆಗೆ ಕಾರಣ ಕೆಲವು ಮುಸ್ಲಿಮ್ ನಾಮಧಾರಿಗಳ ಕೃತ್ಯಗಳು ಎಂದು ಹೇಳಲು ನನಗೆ ಹಿಂಜರಿಕೆ ಇಲ್ಲ. ಇದು ಅತ್ಯಂತ ದುಃಖಕರವಾಗಿದೆ. ತನ್ನ ಧರ್ಮ ತತ್ವಗಳನ್ನು ಮನವರಿಕೆ ಮಾಡಿಕೊಂಡ ಪ್ರತಿಯೊಬ್ಬ ಶಾಂತಿ ಪ್ರಿಯನಾದ ಮುಸ್ಲಿಮನಿಗೆ ಇದು ಬಹಳ ದುಃಖಕರವೂ ನಿರಾಶಾದಾಯಕವೂ ಆಗಿದೆ. ಕಳೆದ ಒಂದು ವರ್ಷದಲ್ಲಿ ಒಂದು ಗುಂಪು ತನ್ನ ಭೀಕರ ಕೃತ್ಯಗಳ ನಿಷ್ಕರುಣ ಶೃಂಖಲೆಯನ್ನು ಜಾರಿಗೊಳಿಸಿರುವುದು ಲೋಕಕ್ಕೆ ಬಹಳ ಹೆಚ್ಚು ಆತಂಕದಾಯಕ ವಾಗಿದೆ. ನಾನು ಪ್ರಸ್ತಾಪಿಸುತ್ತಿರುವುದು ಸಾಮಾನ್ಯವಾಗಿ ISIS (ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಆ್ಯಂಡ್ ಸಿರಿಯಾ) ಅಥವಾ

IS ಎಂದು ಪ್ರಸಿದ್ಧವಾಗಿರುವ ಗುಂಪಿನ ಬಗ್ಗೆಯಾಗಿದೆ.

ಈ ಭೀಕರವಾದಿ ಗುಂಪಿನ ಕೃತ್ಯಗಳು ಮುಸ್ಲಿಮ್ ದೇಶಗಳ ಮೇಲೆ ಮಾತ್ರವಲ್ಲ, ಯುರೋಪಿನ ದೇಶಗಳ ಮೇಲೆಯೂ ಇತರ ದೇಶಗಳ ಮೇಲೆಯೂ ಬಲವಾದ ಪರಿಣಾಮ ಬೀರಿದೆ ಮತ್ತು ಅದರ ಬರ್ಬರ ಕೃತ್ಯಗಳಿಂದ ಬಾಧಿತವಾಗಿವೆ. ವ್ಯಾಕುಲಪಡಿಸುವಷ್ಟು ಸಂಖ್ಯೆಯಲ್ಲಿ ಯುರೋಪಿನಿಂದಲೂ ಇತರ ದೇಶಗಳಿಂದಲೂ ಮುಸ್ಲಿಮ್ ಯುವಜನರು, ಇಸ್ಲಾಮ್ ಧರ್ಮದ ನೈಜ ಚಿತ್ರವನ್ನು ಐಸಿಸ್ ಪ್ರತಿನಿಧಿಸುತ್ತದೆ ಎಂದು ಹೇಗೆಯೋ ನಂಬಿಕೊಂಡು ಅದರ ಸಿದ್ಧಾಂತವನ್ನು ಬೆಂಬಲಿಸುತ್ತಿದ್ದಾರೆ. ಈ ಕಾರಣದಿಂದ ಈ ಯುವ ಜನರು ಐಸಿಸ್‌ಗೆ ಸಹಾಯ ನೀಡಲು ಮತ್ತು ಅವರಿಗೋಸ್ಕರ ಹೋರಾಡಲು ಸಹ ನಿರ್ಧರಿಸಿದ್ದಾರೆ.

ಯು.ಕೆ.ಯಿಂದ ಅಂದಾಜು ಐನೂರು ಜನರು – ಬಹುತೇಕ ಯುವ ಮುಸ್ಲಿಮರು– ಭೀಕರವಾದಿಗಳಾದ ಐಸಿಸ್ ತಪ್ಪಾಗಿ ಇಸ್ಲಾಮ್ ಹೆಸರಿನಲ್ಲಿ ಮಾಡುತ್ತಿರುವ ಯುದ್ಧಗಳಲ್ಲಿ ಭಾಗವಹಿಸಲು ಸಿರಿಯಾ ಮತ್ತು ಇರಾಖ್‌ಗೆ ಹೋಗಿದ್ದಾರೆಂದು ತಿಳಿದುಬಂದಿದೆ. ಈ ತಥಾಕಥಿತ ಜಿಹಾದ್‌ನಲ್ಲಿ ಹೋರಾಡಲು ಯುರೋಪಿನಿಂದ ಹೋದ ಮುಸ್ಲಿಮರ ಸಂಖ್ಯೆಯನ್ನು ವೀಕ್ಷಿಸುವುದಾದರೆ, ಜರ್ಮನಿ ಮತ್ತು ಇತರ ಯುರೋಪಿಯನ್ ದೇಶಗಳಿಂದ ಇರಾಕ್ ಮತ್ತು ಸಿರಿಯಾ ದೇಶಗಳಿಗೆ ಹೋದ ಮುಸ್ಲಿಮರ ಪ್ರಮಾಣಕ್ಕಿಂತ ಯು.ಕೆ.ಯಿಂದ ಹೋದವರ ಪ್ರಮಾಣ ಹೆಚ್ಚಾಗಿದೆ.

ಇದು ಯುನೈಟೆಡ್ ಕಿಂಗ್‌ಡಮ್‌ಗೆ ಅತ್ಯಂತ ಬೆದರಿಕೆ ಒಡ್ಡುವುದಾಗಿದೆ. ಏಕೆಂದರೆ ಐಸಿಸ್ ಮತ್ತು ಅದರ ತಥಾಕಥಿತ ಖಲೀಫರ ಕಾರ್ಯಸೂಚಿ ಮತ್ತು ಉದ್ದೇಶ ಲಕ್ಷ್ಯ ಅತ್ಯಂತ ಭೀಕರವೂ ಬರ್ಬರವೂ ಆಗಿದೆ.

ಅವರ ಖಲೀಫ ಪ್ರತೀಕಾರ ಮಾಡಲು ಬಯಸುವುದಾಗಿ ಮತ್ತು ದೇಶಗಳನ್ನು ಜಯಿಸಿ ಸ್ವಾಧೀನಪಡಿಸಲು ಇಚ್ಛಿಸುವುದಾಗಿ ವರದಿಯಾಗಿದೆ. ಖಲೀಫ ಮುಸ್ಲಿಮರನ್ನು ಲೋಕದ ಒಡೆಯರನ್ನಾಗಿ ಮಾಡಲು ಬಯಸುತ್ತಾರೆಂದೂ ಎಲ್ಲ ಮುಸ್ಲಿಮೇತರರನ್ನು ಗುಲಾಮರನ್ನಾಗಿ ಪರಿವರ್ತಿಸಿ ಮುಸ್ಲಿಮರ 'ಸ್ವತ್ತ'ನ್ನಾಗಿ ಮಾಡಲು ಬಯಸುತ್ತಾರೆಂದೂ ವರದಿಯಾಗಿದೆ. ಮುಸ್ಲಿಮನಿಗೆ ನೋವನ್ನುಂಟು ಮಾಡುವವನನ್ನು ಶಿಕ್ಷಿಸಬೇಕೆಂದೂ ಶರೀಅತ್ ನಿಯಮಗಳು ಪ್ರತಿಯೊಂದು ದೇಶದ ಪ್ರತಿಯೊಬ್ಬನಿಗೆ ಅನ್ವಯಿಸಬೇಕೆಂದೂ ಅವರು ಹೇಳುತ್ತಾರೆ. ಅನ್ಯ ಧರ್ಮದವರ ಮತ್ತು ಅನ್ಯ ಪಂಗಡಗಳ ಮಹಿಳೆಯರ ಹಕ್ಕುಗಳನ್ನು ಕಿತ್ತುಕೊಂಡು ಅವರನ್ನು ಸ್ವಾಧೀನಪಡಿಸಿ ಉಪಪತ್ನಿಯರನ್ನಾಗಿ ಅಥವಾ ಪತ್ನಿಯರನ್ನಾಗಿ ಮಾಡಲು ಬಲಾತ್ಕಾರ ಪ್ರಯೋಗಿಸಲು ಬಯಸುತ್ತಾರೆ. ಐಸಿಸ್ ತನ್ನ ಸಿದ್ಧಾಂತಕ್ಕೆ ವಿರೋಧವಾಗಿರುವ ಪ್ರತಿಯೊಂದು ಧರ್ಮ ಮತ್ತು ಪಂಗಡವನ್ನು ನಾಶ ಮಾಡಲು ಬಯಸುತ್ತದೆ. ಇಂದಿನ ಮುಸ್ಲಿಮ್ ಸರಕಾರಗಳ ಅಧಿಕಾರಗಳನ್ನು ಕಿತ್ತುಕೊಂಡು ಅವುಗಳನ್ನು ನಿರ್ಮೂಲ ಮಾಡಲು ಬಯಸುತ್ತದೆ. ಇದು ಸತ್ಯವಾಗಿದ್ದರೆ ಅವರ ಕಾರ್ಯತಂತ್ರ ಮತ್ತು ಧ್ಯೇಯ ವಿಶಾಲವಾಗಿದ್ದು ಅವರ ಮುಖ್ಯೋದ್ದೇಶ ಲೋಕದಲ್ಲಿ ಶಾಂತಿಯನ್ನು ಕೆಡಿಸುವುದಾಗಿದೆ.

ಐಸಿಸ್ ಅಥವಾ ಬೇರೆ ಯಾವುದೇ ಉಗ್ರವಾದಿ ಗುಂಪು ಕೊನೆಗೆ ಜಯಶಾಲಿಯಾಗಿ ಲೋಕವನ್ನು ಸ್ವಾಧೀನಪಡಿಸುವುದು ಎಂದು ಸೂಚಿಸುವುದು ಅಸಂಬದ್ಧವಾಗಿದೆ. ಏಕೆಂದರೆ ಅದರ ಯೋಜನೆಗಳು ಸಂಪೂರ್ಣವಾಗಿ ಬುದ್ಧಿಹೀನವಾಗಿದೆ ಮತ್ತು ಪೊಳ್ಳು ವಿಚಾರವಾಗಿದೆ; ವಾಸ್ತವಿಕವಾದುದೇನೂ ಅಲ್ಲ. ಆದರೆ ಅವರನ್ನು ಅವರ ದಾರಿಯಲ್ಲಿ ಈಗಲೇ ತಡೆಯದಿದ್ದರೆ ಅವರು ಸ್ವಯಂ ನಾಶಹೊಂದುವ ಮೊದಲು ಬಹಳ ವಿನಾಶವುಂಟುಮಾಡಲು ಸಾಧ್ಯತೆಗಳಿವೆ.

ನಾವು ಅನೇಕ ಭೀಕರ ಕೃತ್ಯಗಳನ್ನು ಕಂಡಿದ್ದೇವೆ. ಯಾವುದೇ ಸಹಾಯವಿಲ್ಲದೆ ಏಕವ್ಯಕ್ತಿ ಅನಾಹುತಗಳನ್ನು ಮಾಡಿದ್ದಾನೆ. ಅಮೇರಿಕದಲ್ಲಿ (ಯು.ಎಸ್.ಎ) ಕೆಲವು ತಿಂಗಳಗಳ ಅಂತರದಲ್ಲಿ ಶಾಲೆಯಲ್ಲಿ ಗುಂಡು ಹೊಡೆತದ ವರದಿಗಳು ಬರುತ್ತಿವೆ. ಡಜನ್‌ಗಟ್ಟಲೆ ನಿಷ್ಕಳಂಕ ವಿದ್ಯಾರ್ಥಿಗಳು ಕೊಲ್ಲಲ್ಪಡುತ್ತಾರೆ– ಒಬ್ಬನೇ ಒಬ್ಬ ವ್ಯಕ್ತಿಯ ನೀಚ ಕೃತ್ಯದ ಕಾರಣದಿಂದ. ಆದುದರಿಂದ ಭೀಕರವಾದಿ ಸಂಘಟನೆ ಎಷ್ಟು ಹಾನಿ ಉಂಟು ಮಾಡಬಹುದು ಎಂದು ಯೋಚಿಸಿರಿ. ಅಂದು ನಿರಾಶೆಗೊಂಡ ದುಗುಡ ಮನೋಭಾವದ ಅನ್ಯಾಯಭರಿತ ಉದ್ದೇಶಕ್ಕಾಗಿ ಜೀವತೆರಲು ಸಿದ್ಧರಾದ ಜನರನ್ನು ಲೋಕದ ಎಲ್ಲ ಭಾಗಗಳಿಂದಲೂ ಜಮಾಯಿಸುತ್ತಾ ಇರುತ್ತದೆ.

ಈ ಭೀಕರವಾದಿ ಸಂಘಟನೆ ನಿಷ್ಠಾವಂತರಾದ ಸದಸ್ಯರನ್ನು ಹೊಂದಿದೆ. ಮಾತ್ರವಲ್ಲ ಆಧುನಿಕ ಯದ್ಧೋಪಕರಣಗಳನ್ನು ಹೊಂದಿರುವುದು ಒಂದು ವಾಸ್ತವವಾಗಿದೆ. ಅವರು ಕೊನೆಗೆ ಅಣು ಆಯುಧಗಳನ್ನು ಕೈವಶಪಡಿಸಬಹುದೆಂಬುದು ಅಸಾಧ್ಯವಾದುದೇನೂ ಅಲ್ಲ. ನಾನು ಇದರ ಮೊದಲು ಹೇಳಿದ ಹಾಗೆ ಇಂತಹ ಅಸ್ತವ್ಯಸ್ತಗೊಂಡ ಗುಂಪುಗಳು ದೀರ್ಘಕಾಲದ ಜಯ ಗಳಿಸದು. ಆದರೆ ಅದು ಅಲ್ಪಾವಧಿಯ ಕೆಲವು ಪ್ರದೇಶಗಳನ್ನು ಸ್ವಾಧೀನಪಡಿಸಿ ಬೃಹತ್ ಪ್ರಮಾಣದಲ್ಲಿ ನಾಶವನ್ನು ಉಂಟು ಮಾಡಬಹುದು. ಇವುಗಳನ್ನೆಲ್ಲ ಗಮನಿಸುವಾಗ ಐಸಿಸ್ ಮತ್ತು ಅಂತಹ ಸಿದ್ಧಾಂತವನ್ನು ಹೊಂದಿದ ಇತರ ಗುಂಪುಗಳು ಲೋಕಕ್ಕೆ ಭೀಕರ ಬೆದರಿಕೆ ಒಡ್ಡುತ್ತದೆ ಎನ್ನುವುದರ ಬಗ್ಗೆ ಸಂಶಯವಿಲ್ಲ.

ಈ ಭೀಕರ ಸಂಘಟನೆಗಳು ಎಲ್ಲವನ್ನೂ ಇಸ್ಲಾಮಿನ ಹೆಸರಿನಲ್ಲಿ ಮಾಡುತ್ತಿರುವುದು ಶಾಂತಿ ಪ್ರೇಮಿಗಳಾದ ನೈಜ ಮುಸ್ಲಿಮರಿಗೆ ದುಃಖವನ್ನೂ ನೋವನ್ನೂ ಉಂಟುಮಾಡುತ್ತಿದೆ. ಯಾಕೆಂದರೆ, ಇಂತಹ ಕ್ರೂರ ಮಾನವೀಯತೆ ರಹಿತ ಸಿದ್ಧಾಂತಗಳು ಯಾವ ಧರ್ಮದೊಂದಿಗೂ ಸಂಬಂಧ ಹೊಂದಿಲ್ಲ. ಎಲ್ಲ ರೀತಿಗಳಲ್ಲೂ ಎಲ್ಲ ಹಂತಗಳಲ್ಲೂ ಇಸ್ಲಾಮ್ ಧರ್ಮದ ನೈಜ ತತ್ವಗಳು ಎಲ್ಲ ಜನರಿಗೆ ಶಾಂತಿ ಮತ್ತು ಸಂರಕ್ಷಣೆ ನೀಡುವುದಾಗಿದೆ. ನಾವು ಪವಿತ್ರ

ಖುರ್‌ಆನ್ ಮತ್ತು ಇಸ್ಲಾಮಿನ ಪ್ರವಾದಿ ಮುಹಮ್ಮದ್ ಪೈಗಂಬರರ(ಸ) ಜೀವಿತದ ಕಡೆಗೆ ದೃಷ್ಟಿ ಹಾಯಿಸಿದರೆ ತಿಳಿಯುವುದೇನೆಂದರೆ, ಆದ್ಯ ಕಾಲದ ಮುಸ್ಲಿಮರು ಯುದ್ಧವನ್ನು ಮತ್ತು ಹಿಂಸಾಚಾರವನ್ನು ಪ್ರಾರಂಭಿಸಿರಲಿಲ್ಲ. ಮುಸ್ಲಿಮರು ಎಂದಾದರೂ ಯುದ್ಧದಲ್ಲಿ ಭಾಗವಹಿಸಿದ್ದರೆ ಅದು ಪೂರ್ಣವಾಗಿ ಪ್ರತಿರೋಧಕ್ಕಾಗಿತ್ತು. ಅವರು ದೌರ್ಜನ್ಯಗಾರರನ್ನು ತಡೆಯಲು ಯುದ್ಧ ಮಾಡಿದರು. ಅವರು ತಮ್ಮ ಅಧಿಕಾರ ಸ್ಥಾಪಿಸಲು ಅಥವಾ ಅನ್ಯಾಯದಿಂದ ವರ್ತಿಸಲು ಯುದ್ಧ ಮಾಡಲಿಲ್ಲ. ಅವರು ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಅಥವಾ ಜನಾಂಗಗಳನ್ನು ವಶಪಡಿಸಿಕೊಳ್ಳಲು ಎಂದೂ ಯುದ್ಧ ಮಾಡಿರಲಿಲ್ಲ.

ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ ಹೀಗೆ ಸಾಕ್ಷ್ಯ ಹೇಳುತ್ತದೆ: ತಾನು ಪ್ರವಾದಿ ಎಂದು ತನ್ನ ನಗರವಾದ ಮಕ್ಕದಲ್ಲಿ ವಾದಿಸಿದಾಗ ಅವರು ಇಸ್ಲಾಮ್ ಧರ್ಮವನ್ನು ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಹರಡಲು ಪ್ರಯತ್ನಿಸಿದರು. ಆದರೆ ಮಕ್ಕದ ಜನರು ಅವರ ವಾದವನ್ನು ತಿರಸ್ಕರಿಸಿದರಲ್ಲದೆ ಅವರೊಂದಿಗೆ ಕ್ರೂರವಾಗಿಯೂ ನಿರ್ದಯವಾಗಿಯೂ ವರ್ತಿಸಿದರು. ಅವರನ್ನು ಮತ್ತು ಅವರ ಅನುಯಾಯಿಗಳನ್ನು ಕ್ರೂರ ಹಿಂಸಾಚಾರಗಳಿಗೆ ಗುರಿಪಡಿಸಲಾಯಿತು. ಕೊನೆಗೆ ದೇವಾಜ್ಞೆ ಪ್ರಕಾರ ಅವರು ಮಕ್ಕದಿಂದ ಮದೀನಕ್ಕೆ ವಲಸೆ ಹೋಗಬೇಕಾಯಿತು. ಆದರೆ ಮದೀನಕ್ಕೆ ವಲಸೆ ಹೋದ ಮುಸ್ಲಿಮರನ್ನು ಮಕ್ಕದ ನಿವಾಸಿಗಳು ಆಕ್ರಮಿಸಲು ಶಸ್ತ್ರಸಜ್ಜಿತರಾದ ಸೈನಿಕರನ್ನು ಕಳುಹಿಸಿದರು. ಇಂತಹ ಸಂದರ್ಭದಲ್ಲಿ ಪ್ರಥಮ ಬಾರಿ ಮುಸ್ಲಿಮರಿಗೆ ತಮ್ಮನ್ನು ರಕ್ಷಿಸಲು ಪ್ರತಿರೋಧಾತ್ಮಕ ಯುದ್ಧ ಮಾಡಲು ಅಲ್ಲಾಹನು ಅನುಮತಿ ನೀಡಿದನು.

ಅನುಮತಿ ನೀಡಿದುದರ ಕಾರಣವನ್ನು ಸ್ಪಷ್ಟವಾಗಿ ಪವಿತ್ರ ಖುರ್‌ಆನಿನ ಅಧ್ಯಾಯ 22 ವಚನ 40–41ರಲ್ಲಿ ಹೀಗೆ ವಿವರಿಸಲಾಗಿದೆ: ಅಲ್ಲಾಹನು ಮುಸ್ಲಿಮರಿಗೆ ತಮ್ಮನ್ನು ರಕ್ಷಿಸಲು ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿ ನೀಡಿದುದು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲಿಕ್ಕಾಗಿದೆ. ವಿರೋಧಿಗಳು ಇಸ್ಲಾಮನ್ನು ಮಾತ್ರವಲ್ಲ, ಎಲ್ಲ ಧರ್ಮಗಳನ್ನು ಲೋಕದಿಂದ ಅಳಿಸಿ ಬಿಡಲು ಇಚ್ಛಿಸಿದ್ದರು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: ಈ ಅನುಮತಿ ನೀಡದಿರುತ್ತಿದ್ದರೆ ಇಗರ್ಜಿಗಳೂ ಯಹೂದಿ ದೇವಾಲಯಗಳೂ ಇತರ ದೇವಾಲಯಗಳೂ ಮಸ್ಜಿದ್‌ಗಳೂ ಆರಾಧನೆಯ ಬೇರೆ ಸ್ಥಳಗಳೂ ಸುರಕ್ಷಿತವಾಗಿರುತ್ತಿರಲಿಲ್ಲ. ಮುಸ್ಲಿಮರಿಗೆ ಯುದ್ಧ ಮಾಡಲು ಅನುಮತಿ ನೀಡಿದುದು, ಇಸ್ಲಾಮನ್ನು ಮಾತ್ರ ರಕ್ಷಿಸಲು ಆಗಿರಲಿಲ್ಲ. ಧರ್ಮವನ್ನು ರಕ್ಷಿಸಲಿಕ್ಕಾಗಿತ್ತು ಎಂದು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನ ಸೂಚಿಸುತ್ತದೆ.

ಮುಸ್ಲಿಮೇತರರನ್ನು ಕೊಂದು ಅವರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು ಮತ್ತು ಅವರನ್ನು ಗುಲಾಮರನ್ನಾಗಿ ಮಾಡಬಹುದು. ಇದು ಅನುಮತಿಸಲ್ಪಟ್ಟಿದೆ ಎಂದು ಮುಸ್ಲಿಮ್ ನಾಮಧಾರಿಗಳು ಹೇಳುವುದು ಸಂಪೂರ್ಣ ತಪ್ಪೆಂದು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದ ಬೆಳಕಿನಲ್ಲಿ ನೀವು ಮನವರಿಕೆ ಮಾಡಿಕೊಳ್ಳಬಹುದು. ವಾಸ್ತವಿಕವಾಗಿ, ಇಸ್ಲಾಮ್ ಪ್ರತಿಯೊಬ್ಬ ವ್ಯಕ್ತಿಗೆ ಸ್ವತಂತ್ರನಾಗಿರಲು ಹಕ್ಕು ನೀಡಿದ ಧರ್ಮವಾಗಿದೆ. ವ್ಯಕ್ತಿಯ ಧರ್ಮ ಮತ್ತು ಹಿನ್ನೆಲೆಯನ್ನು ಪರಿಗಣಿಸದೆ ಪ್ರತಿಯೊಬ್ಬ ವ್ಯಕ್ತಿ ಶಾಂತಿಯಿಂದಲೂ ಸೌಹಾರ್ದದಿಂದಲೂ ಜೀವಿಸಲು ಹಕ್ಕು ನೀಡಿದ ಧರ್ಮ ಇಸ್ಲಾಮ್ ಆಗಿದೆ.

ಮುಹಮ್ಮದ್ ಪೈಗಂಬರ್(ಸ) ತನ್ನ ಅನುಯಾಯಿಗಳ ಜೊತೆಯಲ್ಲಿ ಮದೀನಕ್ಕೆ ವಲಸೆ ಹೋದ ಬಗ್ಗೆ ನಾನು ಇದರ ಮೊದಲು ಪ್ರಸ್ತಾಪಿಸಿದ್ದೇನೆ. ಅವರು ಮದೀನದ ಜನರೊಂದಿಗೆ ಭಾವೈಕ್ಯ ಹೊಂದಿದ ರೀತಿ ಪರಿಪೂರ್ಣ ಮಾದರಿಯಾಗಿದೆ. ಮುಸ್ಲಿಮರು ಮದೀನಕ್ಕೆ ಆಗಮಿಸುವ ಮೊದಲು ಅಲ್ಲಿ ಎರಡು ಮುಖ್ಯ ಗುಂಪುಗಳಿದ್ದವು. ಯಹೂದಿಯರು ಮತ್ತು ಅರಬಿಗಳ ಗುಂಪುಗಳು. ಮುಸ್ಲಿಮರ ಆಗಮನ ನಂತರ ಮೂರು ಗುಂಪುಗಳು ಅಲ್ಲಿದ್ದವು. ಮುಸ್ಲಿಮರ, ಯಹೂದಿಯರ ಮತ್ತು ಮುಸ್ಲಿಮೇತರ ಅರಬಿಗಳ ಗುಂಪುಗಳು. ಪೈಗಂಬರರು ಅಲ್ಲಿಗೆ ಹೋದ ಕೂಡಲೆ ಹೇಳಿದರು: "ನಾವೆಲ್ಲರೂ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಬೇಕು." ಅವರು ಒಂದು ಶಾಂತಿಯ ಒಪ್ಪಂದವನ್ನು ಸಿದ್ಧಪಡಿಸಿದರು. ಈ ಒಪ್ಪಂದ ಪ್ರಕಾರ ಪ್ರತಿಯೊಂದು ಗುಂಪು ಮತ್ತು ಪ್ರತಿಯೊಂದು ಗೋತ್ರಕ್ಕೆ ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡಲಾಯಿತು. ಎಲ್ಲ ಗುಂಪುಗಳ ಜೀವ ಮತ್ತು ಸಂಪತ್ತಿಗೆ ಸಂರಕ್ಷಣೆಯ ಖಾತರಿ ನೀಡಲಾಯಿತು. ಹಿಂದೆ ಆಚರಿಸಲಾಗುತ್ತಿದ್ದ ಗೋತ್ರಗಳ ಮಧ್ಯೆ ಇರುವ ಸಂಪ್ರದಾಯಗಳನ್ನು ಗೌರವಿಸಲಾಯಿತು. ಮಕ್ಕದಿಂದ ಯಾರಾದರೂ ಬಂದು ಹಾನಿಯನ್ನುಂಟು ಮಾಡಲು ಬಯಸಿದರೆ ಅವನಿಗೆ ಮದೀನದಲ್ಲಿ ಯಾರೂ ಆಶ್ರಯ ನೀಡಬಾರದೆಂದೂ ಅಂತಹ ವ್ಯಕ್ತಿಗಳೊಂದಿಗೆ ಒಪ್ಪಂದ ಮಾಡಬಾರದೆಂದೂ ಒಮ್ಮತದಿಂದ ನಿರ್ಧರಿಸಲಾಯಿತು. ಶತ್ರುಗಳು ಆಕ್ರಮಿಸಿದರೆ ಮದೀನದ ಎಲ್ಲರೂ ಜೊತೆ ಸೇರಿ ಪ್ರತಿರೋಧಿಸಬೇಕೆಂದು ನಿರ್ಧರಿಸಲಾಯಿತು. ಆದರೆ ಮುಸ್ಲಿಮೇತರರನ್ನು ಮುಸ್ಲಿಮರ ಜೊತೆ ಸೇರಿ ಯುದ್ಧಮಾಡಲು ಬಲವಂತ ಮಾಡಲಿಕ್ಕಿಲ್ಲ ಎಂದು ನಿರ್ಧರಿಸಲಾಗಿತ್ತು. ಅಥವಾ ಮದೀನದ ಹೊರಗೆ ಯುದ್ಧದಲ್ಲಿ ಭಾಗವಹಿಸಲು ನಿರ್ಬಂಧಿಸಲಾಗದು ಎಂದು ಸಹ ನಿರ್ಧರಿಸಲಾಗಿತ್ತು. ಯಹೂದಿಯರು ಇತರ ಗುಂಪುಗಳೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಮುಸ್ಲಿಮರು ಅಂಗೀಕರಿಸುವರು; ಯಹೂದಿಯರು ತಮ್ಮ ಧರ್ಮ ಪ್ರಕಾರ ಮತ್ತು ಮುಸ್ಲಿಮರು ತಮ್ಮ ಧರ್ಮದ ಪ್ರಕಾರ ಜೀವಿಸುವರೆಂದು ಒಪ್ಪಂದ ಮಾಡಲಾಗಿತ್ತು.

ಮೂರು ಗುಂಪುಗಳು ಒಪ್ಪಂದ ಶರತ್ತುಗಳನ್ನು ಅಂಗೀಕರಿಸಿದ

ನಂತರ ಪೈಗಂಬರರು(ಸ) ಮದೀನದ ಮುಖ್ಯ ಆಡಳಿತಾಧಿಕಾರಿ ಯಾಗಬೇಕೆಂದು ಒಮ್ಮತದಿಂದ ಅಂಗೀಕರಿಸಲಾಯಿತು. ಆದರೆ ಯಹೂದಿಯರು ಮುಸ್ಲಿಮ್ ಶರೀಅತ್ ಪ್ರಕಾರ ಜೀವಿಸಬೇಕಾಗಿಲ್ಲ; ಅವರು ಯಹೂದಿಯರ ನಿಯಮಗಳನ್ನೂ ಸಂಪ್ರದಾಯಗಳನ್ನೂ ಪಾಲಿಸಬಹುದೆಂದು ಒಪ್ಪಂದವಾಗಿತ್ತು. ಇದು ಇಸ್ಲಾಮಿನ ಪುಣ್ಯ ಪ್ರವಾದಿ ತೋರಿಸಿದ ಸಹಿಷ್ಣು ಮನೋಭಾವ ಮತ್ತು ಪರಸ್ಪರ ಗೌರವಾಗಿದೆ. ಆದರೆ ಇಂದು ಐಸಿಎಸ್ ಹೇಳುವುದೇನೆಂದರೆ, ವ್ಯಕ್ತಿ ಯಾವ ಧರ್ಮ ಅಥವಾ ಹಿನ್ನೆಲೆಯುಳ್ಳವನಾದರೂ ಅವನ ಮೇಲೆ ಶರೀಅತ್ ನಿಯಮಗಳನ್ನು ಹೇರಬೇಕು.

ಪೈಗಂಬರರು(ಸ) ಆ ಒಪ್ಪಂದದ ಮೂಲಕ ಮಹಿಳೆಯರ ಹಕ್ಕುಗಳನ್ನು ಸಹ ಸಂರಕ್ಷಿಸಿದ್ದರು. ಮಹಿಳೆಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಮನೆಯಿಂದ ಬಲಾತ್ಕಾರವಾಗಿ ಹೊರಹಾಕಬಾರದೆಂದು ಸ್ಪಷ್ಟವಾಗಿ ಬರೆಯಲಾಗಿತ್ತು. ಹೀಗಿರುವಾಗ ಮುಸ್ಲಿಮೇತರ ಮಹಿಳೆಯರನ್ನು ತಮ್ಮ ಸ್ವತ್ತೆಂದು ಪರಿಗಣಿಸಬಹುದೆಂದು ಐಸಿಸ್ ವಾದಿಸುವುದು ಹೇಗೆ? ಯಾರನ್ನೂ ಮುಸ್ಲಿಮನಾಗಲು ಬಲಾತ್ಕಾರ ಮಾಡಲಾಗದೆಂದೂ ಮದೀನದ ಯಹೂದಿಯರೊಂದಿಗೆ ಮತ್ತು ಮುಸ್ಲಿಮೇತರರೊಂದಿಗೆ ಪ್ರೀತಿ, ಕರುಣೆ ಮತ್ತು ಸಹೋದರ ಭಾವನೆಯಿಂದ ಮುಸ್ಲಿಮರು ವರ್ತಿಸುವರೆಂದೂ ಸ್ಪಷ್ಟವಾಗಿ ಒಪ್ಪಂದದಲ್ಲಿ ಬರೆಯಲಾಗಿತ್ತು.

ಮೇಲೆ ವಿವರಿಸಿದುದು ಒಪ್ಪಂದದ ಸಾರಂಶವಾಗಿದೆ. ಮುಸ್ಲಿಮರು ಮದೀನಕ್ಕೆ ಆಗಮಿಸಿದ ನಂತರ ಮದೀನದ ಸಮಾಜವನ್ನು ಹೀಗೆ ಒಗ್ಗೂಡಿಸಲಾಗಿತ್ತು.

ಮುಸ್ಲಿಮರು ಈ ಒಪ್ಪಂದವನ್ನು ಅಕ್ಷರಶಃ ಪಾಲಿಸಿದರೆಂದು ಚರಿತ್ರೆ ಸಾಕ್ಷ್ಯ ಹೇಳುತ್ತದೆ. ಈ ಒಪ್ಪಂದ ಎಂದಾದರೂ ಭಂಗಗೊಳಿಸಲ್ಪಟ್ಟಿದ್ದರೆ ಅದನ್ನು ಮಾಡಿದುದು ಮುಸ್ಲಿಮರಲ್ಲದ ಗುಂಪಾಗಿತ್ತು. ಮದೀನದ ಆಡಳಿತಾಧಿಕಾರಿಯಾಗಿ ಒಮ್ಮತದಿಂದ ಆರಿಸಲ್ಪಟ್ಟ ಪೈಗಂಬರರು ಒಪ್ಪಂದವನ್ನು ಭಂಗಪಡಿಸಿದ ಅಥವಾ ಬೇರೆ ತಪ್ಪು ಕೃತ್ಯಗಳನ್ನು ಮಾಡಿದ ವ್ಯಕ್ತಿಗಳು ಮತ್ತು ಗುಂಪುಗಳೊಂದಿಗೆ ವ್ಯವಹರಿಸಲಿಕ್ಕಿದ್ದಿತು. ಅವರಿಗೆ ವಾಗ್ದಂಡನೆ ಒಪ್ಪಂದ ಪ್ರಕಾರ ನೀಡಲಾಗುತ್ತಿತ್ತು. ಯಾವುದೇ ಅನ್ಯಾಯ ಮಾಡುತ್ತಿರಲಿಲ್ಲ. ಇದು ಇಸ್ಲಾಮಿ ಆಡಳಿತೆಯ ನೈಜ ಪ್ರಕಟನೆಯಾಗಿತ್ತು. ಇದಕ್ಕೆ ಆಸ್ತಿಭಾರವನ್ನು ಪೈಗಂಬರರು ಹಾಕಿದರು. ಅವರನ್ನು ಅವರ ನಂತರ ಅಧಿಕಾರ ವಹಿಸಿದ ನಾಲ್ವರು ನೇರಮಾರ್ಗದಲ್ಲಿ ಚಲಿಸಿದ ಖಲೀಫರು ಇಸ್ಲಾಮಿನ ಪ್ರಥಮ ಶತಮಾನದಲ್ಲಿ ಮುಂದುವರಿಸಿದರು.

ಇಂದಿನ ಕಾಲದಲ್ಲಿ ಐಸಿಸ್ ಅಥವಾ ಬೇರೆ ಯಾವುದೇ ಮುಸ್ಲಿಮ್ ಸರಕಾರ ಮೇಲೆ ವಿವರಿಸಿದ ತತ್ವಗಳಿಗೆ ವಿರುದ್ಧವಾಗಿ ವರ್ತಿಸುವುದಾದರೆ ಅವರು ಹಾಗೆ ಮಾಡುವುದು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಅಥವಾ ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಲಿಕ್ಕಾಗಿದೆ.

ಈ ಜನರು ತಾವು ಇಸ್ಲಾಮ್ ಪ್ರಕಾರ ವರ್ತಿಸುತ್ತಿರುವುದಾಗಿ ವಾದಿಸುತ್ತಾರಾದರೂ ಅವರ ಕೃತ್ಯಗಳಿಗೆ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ ಅಥವಾ ಪೈಗಂಬರರ ಉಪದೇಶಗಳೊಂದಿಗೂ ಯಾವ ಸಂಬಂಧವೂ ಇರುವುದಿಲ್ಲ.

ಪೈಗಂಬರರ(ಸ) ಆಗಮನದ ಮುಂಚೆ ಅರಬ್ ದೇಶದ ಚರಿತ್ರೆಯ ಕಡೆಗೆ ನೋಡುವುದಾದರೆ, ಅದು ಎಂತಹ ಸಮಾಜವನ್ನು ಹೊಂದಿತ್ತೆಂದರೆ, ಪ್ರತಿಯೊಂದು ಗೋತ್ರ ತನ್ನ ಅಧಿಕಾರವನ್ನು ಯುದ್ಧ ಮತ್ತು ರಕ್ತಪಾತ ಮೂಲಕ ಚಲಾಯಿಸುತ್ತಿತ್ತು. ಇಂತಹ ಸಮಾಜದಲ್ಲಿ ಪೈಗಂಬರರು ಕ್ರಾಂತಿಯನ್ನುಂಟು ಮಾಡಿದರು. ಅವರು ನ್ಯಾಯಪಾಲನೆ ವ್ಯವಸ್ಥೆ ಮಾಡಿದರು. ಪ್ರತಿಯೊಂದು ಗುಂಪಿಗೆ ಅದರ ಸಂಪ್ರದಾಯ ಮತ್ತು ಧಾರ್ಮಿಕ ನಂಬಿಕೆಗಳ ಪ್ರಕಾರ ನ್ಯಾಯದಾನ ನೀಡಲಾಯಿತು. ಇಸ್ಲಾಮ್ ಧರ್ಮದ ಚರಿತ್ರೆಯನ್ನು ಪಕ್ಷಪಾತ ರಹಿತವಾಗಿ ಅಧ್ಯಯನ ಮಾಡಿದರೆ ಪೈಗಂಬರರ ಮತ್ತು ಅನಂತರ ನಾಲ್ವರು ನೇರ ಮಾರ್ಗದಲ್ಲಿ ಚಲಿಸಿದ ಖಲೀಫರ ಕಾಲದಲ್ಲಿ ಮುಸ್ಲಿಮರ ಸ್ವಭಾವ ಗುಣಗಳು ಕಳಂಕ ರಹಿತವಾಗಿದ್ದುವು. ಅವರು ಯಾವುದೇ ಯುದ್ಧವನ್ನು ಆಕ್ರಮಣಗಾರರಾಗಿ ಪ್ರಾರಂಭಿಸಿರಲಿಲ್ಲ. ಅವರು ಅನ್ಯ ದೇಶಗಳನ್ನು ವಶಪಡಿಸಲು ಇಚ್ಛಿಸಿರಲಿಲ್ಲ. ಅವರು ಇಸ್ಲಾಮ್ ಧರ್ಮದ ಸಂದೇಶಗಳನ್ನು ಸಂಪೂರ್ಣವಾಗಿ ಶಾಂತಿಯಿಂದ ಪ್ರಚಾರಗೊಳಿಸಿದರು. ಉದಾಹರಣೆಗೆ, ದಕ್ಷಿಣ ಭಾರತದಲ್ಲೂ ಚೀನಾ ದೇಶದಲ್ಲೂ ಇಸ್ಲಾಮ್ ಹರಡಿತು. ಆದರೆ ಈ ದೇಶಗಳನ್ನು ಮುಸ್ಲಿಮ್ ಸೈನ್ಯ ಆಕ್ರಮಿಸಿತೆಂದು ಚರಿತ್ರೆ ಹೇಳುವುದಿಲ್ಲ. ಆ ಪ್ರದೇಶಗಲ್ಲಿ ಇಸ್ಲಾಮ್ ಧರ್ಮ ಹರಡಿದ್ದು ಶಾಂತಿಯ ಮಾರ್ಗದ ಮೂಲಕವಾಗಿದೆ. ಅನಂತರದ ಕಾಲಘಟ್ಟಗಳಲ್ಲಿ ಮುಸ್ಲಿಮ್ ದೊರೆಗಳು ವಿವಿಧ ಕಾರಣಗಳಿಂದ ಯುದ್ಧವನ್ನು ಪ್ರಾರಂಭಿಸಿದ್ದರು. ಅದಕ್ಕೋಸ್ಕರ ಅವರನ್ನು ಮಾತ್ರ ದೂಷಿಸಬಾರದು. ಅಂತಹ ಯುದ್ಧಗಳ ಮೂಲಕ ವಶಪಡಿಸಿಕೊಂಡ ದೇಶಗಳ ನಿವಾಸಿಗಳನ್ನು ಮುಸ್ಲಿಮರಾಗಲು ಆ ದೊರೆಗಳು ಎಂದೂ ಬಲಾತ್ಕಾರ ಮಾಡಿರಲಿಲ್ಲ. ನಿಶ್ಚಯವಾಗಿಯೂ ಪವಿತ್ರ ಖುರ್‌ಆನ್ ಅಂತಹ ಪ್ರಯತ್ನ ಮಾಡುವುದನ್ನು ತಿರಸ್ಕರಿಸುತ್ತದೆ ಮತ್ತು ಧರ್ಮ ಪ್ರಚಾರ ಶಾಂತಿಯುತವಾಗಿ ನಡೆಸಬೇಕೆಂದು ಉಪದೇಶಿಸುತ್ತದೆ.

ನಾನು ಇದರ ಮೊದಲು ಹೇಳಿದ ಹಾಗೆ ಅಲ್ಲಾಹನು ಪ್ರತಿರೋಧಕ ಧಾರ್ಮಿಕ ಯುದ್ಧಗಳಿಗೆ ಅನುಮತಿ ನೀಡಿದುದು ಎಲ್ಲ ಧರ್ಮಗಳನ್ನು ಸಂರಕ್ಷಿಸಲಿಕ್ಕಾಗಿತ್ತೇ ಹೊರತು ಕೇವಲ ಇಸ್ಲಾಮನ್ನು ಸಂರಕ್ಷಿಸಲಿಕ್ಕಾಗಿರಲಿಲ್ಲ. ಪವಿತ್ರ ಖುರ್‌ಆನ್ ವಿವಿಧ ವಚನಗಳಲ್ಲಿ ಸರ್ವ ಶಕ್ತನಾದ ಅಲ್ಲಾಹನು ಯುದ್ಧಗಳಲ್ಲಿ ಪಾಲಿಸಬೇಕಾದ ನಿಯಮಗಳನ್ನು ವಿವರಿಸಿರುವನು. ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 191ರಲ್ಲಿ ಅಲ್ಲಾಹನು ಪ್ರತಿರೋಧಕ ಯುದ್ಧದ ನಿಯಮಗಳನ್ನು ಹೀಗೆ ವಿವರಿಸಿರುವನು: ನಿಮ್ಮ ವಿರುದ್ಧ ಯುದ್ಧ ಮಾಡುವವರೊಂದಿಗೆ ಮಾತ್ರ ಯುದ್ಧ

ಮಾಡಬೇಕೆಂದೂ ಅತಿಕ್ರಮಣ ಮಾಡಬಾರದೆಂದೂ ಕ್ರೂರತೆಯಿಂದ ವರ್ತಿಸಬಾರದೆಂದೂ ಅನ್ಯಾಯದಿಂದ ವರ್ತಿಸುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲವೆಂದೂ ಹೇಳಿರುವನು.

ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 127ರಲ್ಲಿ ಅಲ್ಲಾಹನು ಮುಸ್ಲಿಮರಿಗೆ, ಯುದ್ಧ ಮಾಡುವಾಗ ಎಂದೂ ಪರಿಮಿತಿ ಮೀರಿ ಆಕ್ರಮಣ ಮಾಡಬಾರದೆಂದೂ ಶಿಕ್ಷೆಯು ನಿಮ್ಮ ಮೇಲೆ ಉಂಟಾದ ಅಕ್ರಮಕ್ಕೆ ಸಮಾನವಾಗಿರಬೇಕೆಂದೂ ಆಜ್ಞಾಪಿಸಿದ್ದಾನೆ.

ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 194ರಲ್ಲಿ ಅಲ್ಲಾಹನು ಹೇಳುತ್ತಾನೆ: ಹಿಂಸಾಚಾರ ಕೊನೆಗೊಂಡು ಧರ್ಮ ಸ್ವೀಕಾರ ಅಲ್ಲಾಹನಿಗೋಸ್ಕರವಾಗುವ ತನಕ ಮಾತ್ರ ಯುದ್ಧ ಮಾಡಬೇಕು. ದುಷ್ಕರ್ಮಿಗಳು ಯುದ್ಧದಿಂದ ಹಿಂದೆ ಸರಿದರೆ ಮತ್ತು ಅಸ್ತವ್ಯಸ್ತತೆ ಕೊನೆಗೊಂಡರೆ ಅವರ ವಿರುದ್ಧ ಯುುದ್ಧವನ್ನು ಮುಂದುವರಿಸಬಾರದು.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 62ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ವಿರೋಧಿಗಳು ಶಾಂತಿಯ ಕಡೆಗೆ ವಾಲಿದರೆ ಮತ್ತು ಸೌಹಾರ್ದಕ್ಕೆ ಕೈ ಚಾಚಿದರೆ ಮುಸ್ಲಿಮರು ಅದಕ್ಕೆ ಒಪ್ಪಬೇಕು. ಅವರು ಪ್ರಾಮಾಣಿಕರಾಗಿ ಹಾಗೆ ಮಾಡುತ್ತಿರುವರೋ ಎಂದು ಪ್ರಶ್ನಿಸಬಾರದು.

ಪವಿತ್ರ ಖುರ್‌ಆನ್ ಅಧ್ಯಾಯ 9 ವಚನ 4ರಲ್ಲಿ ಹೀಗೆ ಹೇಳಲಾಗಿದೆ: ಮುಸ್ಲಿಮರು ಬಹುದೇವಾರಾಧಕರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಅವರು ಅತಿಕ್ರಮಣ ಮಾಡದೆ ಒಪ್ಪಂದದ ಶರತ್ತುಗಳನ್ನು ಪಾಲಿಸಿದ್ದರೆ ಅದನ್ನು ಸಂಪೂರ್ಣವಾಗಿ ಪೂರ್ತಿಗೊಳಿಸಬೇಕು. ಸಾತ್ವಿಕರಾದವರು ಅವಶ್ಯವಾಗಿ ಹೀಗೆ ಮಾಡಬೇಕು. ಅಲ್ಲಾಹನು ಸಾತ್ವಿಕರನ್ನು ಪ್ರೀತಿಸುತ್ತಾನೆ.

ಪವಿತ್ರ ಖುರ್‌ಅನ್ ಅಧ್ಯಾಯ 5 ವಚನ 9ರಲ್ಲಿ ಹೀಗೆ ಹೇಳಲಾಗಿದೆ: ಯುದ್ಧ ಕಾಲದಲ್ಲಿಯೂ ಮುಸ್ಲಿಮರು ಶತ್ರುಗಳೊಂದಿಗೆ ನ್ಯಾಯೋಚಿತವಾಗಿ ವರ್ತಿಸಬೇಕು. ಒಂದು ಜನಾಂಗದವರ ಶತ್ರುತ್ವ ಅವರ ವಿರುದ್ಧ ಅನ್ಯಾಯದಿಂದ ವರ್ತಿಸಲು ಮುಸ್ಲಿಮರನ್ನು ಪ್ರೇರೇಪಿಸಬಾರದು. ಅನ್ಯಾಯದಿಂದ ವರ್ತಿಸುವುದು ಸಾತ್ವಿಕತೆಗೆ ವಿರುದ್ಧವಾದುದಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 68ರಲ್ಲಿ ಹೀಗೆ ಹೇಳಲಾಗಿದೆ: ಯುದ್ಧ ಮಾಡಿ ಶತ್ರುಗಳನ್ನು ಸೋಲಿಸುವ ಮೂಲಕ ಹೊರತು ಯುದ್ಧ ಕೈದಿಗಳನ್ನು ಹೊಂದುವುದು ಒಬ್ಬ ಪ್ರವಾದಿಗೆ ಸಲ್ಲದು. ಹಾಗೆ ಮಾಡುವುದು ದೇವನ ಪ್ರೀತಿಯನ್ನು ಗಳಿಸುವುದಕ್ಕೆ ಬದಲಾಗಿ ಸಂಪತ್ತು ಮತ್ತು ಅಧಿಕಾರ ಗಳಿಸಲು ಆದ್ಯತೆ ನೀಡುತ್ತೀರಿ ಎಂದಾಗುತ್ತದೆ.

ಪವಿತ್ರ ಖುರ್‌ಆನಿನ ಈ ವಚನ ಸಾಬೀತುಗೊಳಿಸು ವುದೇನೆಂದರೆ, ಯುದ್ಧದ ಸಂದರ್ಭದಲ್ಲಿ ಹೊರತು ಬೇರೆ ಸಂದರ್ಭದಲ್ಲಿ ಯಾರನ್ನಾದರೂ ಬಂಧಿಸಿಡುವುದು ನಿಷಿದ್ಧವಾಗಿದೆ. ಆದರೆ ಇಂದಿನ ಕಾಲದಲ್ಲಿ 'ಇಸ್ಲಾಮಿಸ್ಟ್' ನಾಮಧಾರಿಗಳು ಅಸಂಖ್ಯಾತ ನಿರಪರಾಧಿಗಳಾದ ಜನರನ್ನು ಬಂಧಿಸಿಡುತ್ತಾರೆ ಮತ್ತು ಸಂರಕ್ಷಣೆ ರಹಿತ ಮಹಿಳೆಯರನ್ನು ಉಪಪತ್ನಿಯರನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

ಪವಿತ್ರ ಖುರ್‌ಆನ್ ಅಧ್ಯಾಯ 47 ವಚನ 5ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: ಯುದ್ಧವು ಮುಕ್ತಾಯಗೊಂಡ ನಂತರ ಯುದ್ಧ ಕೈದಿಗಳನ್ನು ಸ್ವತಂತ್ರರನ್ನಾಗಿ ಮಾಡಬೇಕು. ಅವರಿಂದ ಪರಿಹಾರ ಧನ ಪಡೆದು ಬಿಡುಗಡೆ ಮಾಡಬಹುದು ಅಥವಾ ಅವರ ಮೇಲೆ ದಯೆದೋರಿ ಬಿಡುಗಡೆ ಮಾಡಬಹುದು.

ಯುದ್ಧ ಮುಕ್ತಾಯವಾದ ನಂತರ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದು ಪುರುಷರಿಗೂ ಮಹಿಳೆಯರಿಗೂ ಅನ್ವಯಿಸುತ್ತದೆ. ಹಿಂದಿನ ಕಾಲದಲ್ಲಿ ಮಹಿಳೆಯರು ಪುರುಷರಿಗೆ ಸಹಾಯ ಮಾಡಲು ಮತ್ತು ಹೋರಾಟವನ್ನು ಉತ್ತೇಜಿಸಲು ರಣಾಂಗಣಕ್ಕೆ ಹೋಗುತ್ತಿದ್ದರು. ಆದುದರಿಂದ ಮಹಿಳೆಯರೂ ಬಂಧಿಸಲ್ಪಡುತ್ತಿದ್ದರು. ಪವಿತ್ರ ಖುರ್‌ಆನ್ ಮಹಿಳೆಯರ ಜೊತೆ ಕ್ರೂರವಾಗಿಯೂ ಅವರ ಚಾರಿತ್ರ್ಯಕ್ಕೆ ಭಂಗವುಂಟಾಗುವಂತೆಯೂ ವರ್ತಿಸಬಾರದೆಂದು ಸ್ಪಷ್ಟವಾಗಿ ಆಜ್ಞಾಪಿಸಿದೆ.

ಯುದ್ಧ ಕೈದಿಯನ್ನು ಬಿಡುಗಡೆಗೊಳಿಸುವ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 24 ವಚನ 34ರಲ್ಲಿ ಹೀಗೆ ಹೇಳಲಾಗಿದೆ: ಬಿಡುಗಡೆಗೊಳಿಸಲು ಪರಿಹಾರದ ಧನವನ್ನು ಕಂತುಗಳಲ್ಲಿ ಪಡೆಯುವ ಒಪ್ಪಂದ ಮಾಡಿ ಯುದ್ಧ ಕೈದಿಯನ್ನು ಬಿಡುಗಡೆಗೊಳಿಸಬೇಕು.

ಯುದ್ಧ ಕೈದಿಗಳನ್ನು ಬಿಡುಗಡೆಗೊಳಿಸುವ ಬಗ್ಗೆ ಪವಿತ್ರ ಖುರ್‌ಆನಿನ ವಚನಗಳನ್ನು ಸರಿಯಾಗಿ ಮನವರಿಕೆ ಮಾಡಲು ಆ ಕಾಲಘಟ್ಟದ ಯುದ್ಧಗಳ ಬಗ್ಗೆ ತಿಳಿದುಕೊಳ್ಳಬೇಕು. ಆ ಕಾಲಘಟ್ಟದಲ್ಲಿ ಯೋಧರು ಸ್ವಂತ ಆಯುಧಗಳನ್ನು ತಂದು ತಮ್ಮ ಸ್ವಂತ ಖರ್ಚಿನಲ್ಲಿ ಯುದ್ಧ ಮಾಡುತ್ತಿದ್ದರು. ಆದುದರಿಂದ ಅವರು ಸೆರೆಹಿಡಿದ ಕೈದಿಗಳನ್ನು ಬಿಡುಗಡೆಗೊಳಿಸಲು ಪರಿಹಾರ ದ್ರವ್ಯ ಪಡೆಯಲು ಅನುಮತಿ ನೀಡಲಾಗಿತ್ತು. ಆದರೆ ಇಂದಿನ ಕಾಲದಲ್ಲಿ ಸರಕಾರಗಳು ಯುದ್ಧ ನಡೆಸುತ್ತಿವೆ ಮತ್ತು ಅದಕ್ಕೆ ಖರ್ಚು ಮಾಡುತ್ತವೆ. ಆದುದರಿಂದ ಸೈನಿಕರಿಗೆ ವೈಯಕ್ತಿಕವಾಗಿ ಖರ್ಚು ಮಾಡುವ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಈಗ ಯುದ್ಧ ಕೈದಿಗಳೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ಸರಕಾರಗಳು ಮತ್ತು ಅಂತರ್‍ರಾಷ್ಟ್ರೀಯ ಸಂಘಟನೆಗಳು ನಿರ್ಧರಿಸುತ್ತವೆ. ಸೈನಿಕರಿಗೆ ಅದರಲ್ಲಿ ಪಾತ್ರವಿರುವುದಿಲ್ಲ. ಯುದ್ಧಕೈದಿಗಳ ಪರಸ್ಪರ ಹಂಚಿಕೆ ಮತ್ತು ಬದಲಾವಣೆ ಸರಕಾರಗಳು ನಿರ್ಧರಿಸುತ್ತವೆ ಮತ್ತು ದೀರ್ಘಕಾಲೀನ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತವೆ. ವ್ಯಕ್ತಿಗಳು ಕೈದಿಗಳನ್ನು ಹೊಂದುವ ಪರಿಸ್ಥಿತಿ ಖಂಡಿತವಾಗಿಯೂ ಇಂದು ಇಲ್ಲ. ಹಾಗೆ ಯಾರಾದರೂ ಮಾಡುವು ದಾದರೆ ಅದು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿರುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: "ನೀವು ಅನ್ಯರ ಸಂಪತ್ತಿನ ಕಡೆಗೆ ಅಸೂಯೆಯಿಂದ ದೃಷ್ಟಿಸಬಾರದು." ಇದು ಜಾಗತಿಕ ಶಾಂತಿ ಸ್ಥಾಪನೆಗೆ ಅನುಕೂಲವಾದ ಸುವರ್ಣ ಸತ್ಯವಾಗಿದೆ. ಇಸ್ಲಾಮಿನ ಈ ಒಂದು ಆಜ್ಞೆಯನ್ನು ಅನುಷ್ಠಾನಕ್ಕೆ ತರುವುದಾದರೆ ಮುಸ್ಲಿಮನು ಅನ್ಯರ ಭೂಸ್ವತ್ತು ಮತ್ತು ಸಂಪತ್ತನ್ನು ವಶಪಡಿಸಿಕೊಳ್ಳುವ ಪ್ರಶ್ನೆಯೇ ತಲೆದೋರದು.

ಪವಿತ್ರ ಖುರ್‌ಆನ್ ಅಧ್ಯಾಯ 10 ವಚನ 100ರಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಅಲ್ಲಾಹನು ಸರ್ವಶಕ್ತನಾಗಿರುವುದರಿಂದ ಅವನು ಇಚ್ಛಿಸಿದ್ದರೆ ಭೂಲೋಕದಲ್ಲಿರುವ ಎಲ್ಲರೂ ಮುಸ್ಲಿಮರಾಗುತ್ತಿದ್ದರು. ಆದರೆ ಅಲ್ಲಾಹನು ಮಾನವರನ್ನು ಅದಕ್ಕೋಸ್ಕರ ನಿರ್ಬಂಧಿಸಲಿಲ್ಲ. ಅಲ್ಲಾಹನು ಪೈಗಂಬರರಿಗೆ ಉಪದೇಶಿಸಿದನು: ಇಸ್ಲಾಮಿನ ಸಂದೇಶವನ್ನು ಹರಡಲು ಬಲಪ್ರಯೋಗ ಮಾಡಬಾರದು. ಧರ್ಮವು ಪ್ರತಿಯೊಬ್ಬ ಮನುಷ್ಯನ ಹೃದಯ ಮತ್ತು ಮನಸ್ಸಾಕ್ಷಿಗೆ ಸಂಬಂಧಿಸಿದುದಾಗಿರುತ್ತದೆ.

ಆದುದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಯಾವುದೇ ಸಂದರ್ಭದಲ್ಲಿ ಇಸ್ಲಾಮನ್ನು ಅಂಗೀಕರಿಸುವಂತೆ ಮಾಡಲು ಅಥವಾ ಬೇರೆ ಯಾವುದೇ ಧರ್ಮವನ್ನು ಅಂಗೀಕರಿಸುವಂತೆ ಮಾಡಲು ಬಲಪ್ರಯೋಗ ಮಾಡುವುದು ಎಂದೂ ಅನುಮತಿಸಲ್ಪಟ್ಟಿಲ್ಲ. ಆದರೆ ಮುಸ್ಲಿಮರು ಇಸ್ಲಾಮಿನ ಸಂದೇಶವನ್ನು ಪ್ರಚಾರಗೊಳಿಸಬೇಕೆಂದು ಆದೇಶಿಸಲಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 18 ವಚನ 30ರಲ್ಲಿ ಅಲ್ಲಾಹನು ಪೈಗಂಬರರೊಂದಿಗೆ ಹೀಗೆ ಹೇಳಿದ್ದಾನೆ:

ಹೇಳು : ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯವಾಗಿದೆ. ಆದುದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.

ಈ ವಚನ ಅತ್ಯಂತ ಸ್ಪಷ್ಟವಾಗಿದೆ. ನಂಬಲು ಮತ್ತು ನಂಬದಿರಲು ಎಲ್ಲ ಜನರಿಗೆ ಸ್ವಾತಂತ್ರ್ಯ ನೀಡಲಾಗಿದೆ. ಪೈಗಂಬರರೊಂದಿಗೆ ಇಸ್ಲಾಮಿನ ಸಂದೇಶವನ್ನು ಮಾತ್ರ ಜನರಿಗೆ ತಲುಪಿಸಲು ಅನುಮತಿಸಲಾಗಿದೆ. ಹೀಗಿರುವಾಗ ಇಂದಿನ ಕಾಲದ ಮುಸ್ಲಿಮ್ ನಾಮಧಾರಿಗಳು ಇದಕ್ಕಿಂತ ಮುಂದೆ ಸಾಗಿ ತಮಗೆ ಇಸ್ಲಾಮಿನ ಪ್ರವಾದಿಗಿಂತ ಹೆಚ್ಚಿನ ಅಧಿಕಾರ ಇದೆ ಎಂದು ಚಿಂತಿಸುವುದಾದರೂ ಹೇಗೆ?

ನಾನು ಇಸ್ಲಾಮ್ ಧರ್ಮ ತತ್ವಗಳ ಸಾರಾಂಶವನ್ನೂ ಸಂಕ್ಷಿಪ್ತವಾಗಿ ಖುರ್‌ಆನ್‌ನಿನ ವಿವಿಧ ವಚನಗಳನ್ನೂ ಆಧಾರವಾಗಿಟ್ಟುಕೊಂಡು ವಿವರಿಸಿದ್ದೇನೆ. ಕೆಲವು ಮುಸ್ಲಿಮ್ ಗುಂಪುಗಳು ಮತ್ತು ಸರಕಾರಗಳು ನಡೆಸುವ ಕ್ರೂರ ಕೃತ್ಯಗಳು ಇಸ್ಲಾಮಿಗೆ ಸಂಪೂರ್ಣ ವಿರುದ್ಧವಾಗಿವೆ ಎಂದು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಿಂದ ಸಾಬೀತಾಗುತ್ತದೆ.

ನೀವು ಆಶ್ಚರ್ಯ ಪಡಬಹುದು. ಈ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿದ್ದರೆ ಈ ಜನರು ಹೀಗೆ ಕ್ರೂರ ಕೃತ್ಯಗಳನ್ನು ಏಕೆ ಮಾಡುತ್ತಾರೆ? ಇದಕ್ಕಿರುವ ಸರಳ ಉತ್ತರ ನಾನು ಹಿಂದೆ ಹೇಳಿದ ಹಾಗೆ: ಅವರು ತಮ್ಮ ಲೌಕಿಕ ಹಿತಾಸಕ್ತಿಗಳನ್ನು ಈಡೇರಿಸಲು ಹೀಗೆ ಮಾಡುತ್ತಾರೆ. ಅವರು ಆಧ್ಯಾತ್ಮಿಕ ಅಥವಾ ಧಾರ್ಮಿಕ ಉದ್ದೇಶ ಲಕ್ಷ್ಯಗಳನ್ನು ಹೊಂದಿಲ್ಲ. ಅವರು ಧರ್ಮದ ನಾಮದಲ್ಲಿ ಕ್ರೂರಕೃತ್ಯಗಳನ್ನೂ ರಕ್ತಪಾತಗಳನ್ನೂ ಮಾಡಿ ಲೌಕಿಕ ಲಾಭಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ನಾನು ಪುನಃ ಹೇಳುತ್ತೇನೆ: ಅಹ್ಮದೀ ಮುಸ್ಲಿಮರು ಮತ್ತು ಶಾಂತಿ ಪ್ರಿಯರಾದ ಮುಸ್ಲಿಮರು, ಈ ಜನರು ಇಸ್ಲಾಮ್ ಎಂಬ ಪವಿತ್ರ ಧರ್ಮಕ್ಕೆ, ಅನ್ಯಾಯದಿಂದ ಅದನ್ನು ದುರುಪಯೋಗಪಡಿಸಿ ಅದಕ್ಕೆ ಕಳಂಕ ಉಂಟುಮಾಡುವ ಬಗ್ಗೆ ಬಹಳ ನೋವನ್ನು ಅನುಭವಿಸುತ್ತಿದ್ದಾರೆ. ಭೀಕರವಾದಿ ಗುಂಪುಗಳು ನಡೆಸುವ ಕ್ರೂರ ಕೃತ್ಯಗಳನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮ್ ಹಿಂಸಾತ್ಮಕ ಧರ್ಮವೆಂದು ಪ್ರತಿಪಾದಿಸುವ ಜನರನ್ನೂ ಸಂಘಟನೆಗಳನ್ನೂ ರಾಜಕಾರಣಿಗಳನ್ನೂ ನಾನು ಪ್ರಶ್ನಿಸಲು ಬಯಸುತ್ತೇನೆ. ನಾನು ಅವರೊಂದಿಗೆ ಕೇಳಲು ಬಯಸುತ್ತೇನೆ. ಈ ಭೀಕರವಾದಿ ಗುಂಪುಗಳು ತಮ್ಮ ಭೀಕರ ಚಟುವಟಿಕೆಗಳನ್ನು ಮತ್ತು ಹೋರಾಟಗಳನ್ನು ಇಷ್ಟು ದೀರ್ಘಕಾಲ ಮುಂದುವರಿಸುತ್ತಾ ಹೋಗಲು ಅವರಿಗೆ ಸಂಪತ್ತು ಗಳಿಸಲು ಸಾಧ್ಯವಾದುದು ಹೇಗೆ? ಅವರಿಗೆ ಆಧುನಿಕ ಶಸ್ತ್ರಗಳು ಲಭಿಸಿದುದು ಹೇಗೆ? ಅವರಿಗೆ ಶಸ್ತ್ರ ನಿರ್ಮಾಣ ಕಾರ್ಖಾನೆಗಳು ಇವೆಯೋ? ಈ ಜನರು ಕೆಲವು ಶಕ್ತಿ ರಾಷ್ಟ್ರಗಳಿಂದ ನೆರವು ಪಡೆಯುತ್ತಿದ್ದಾರೆ ಎಂಬುದು ಸುಲಭ ಗ್ರಾಹ್ಯವಾದ ವಿಷಯವಾಗಿದೆ. ತೈಲ ಸಮೃದ್ಧವಾದ ಮುಸ್ಲಿಮ್ ದೇಶಗಳು ನೇರವಾಗಿ ಸಹಾಯ ನೀಡುತ್ತಿರಬಹುದು ಅಥವಾ ಬೇರೆ ಮಹಾಶಕ್ತಿಗಳು ರಹಸ್ಯವಾಗಿ ಬೆಂಬಲ ನೀಡುತ್ತಿರಬಹುದು.

ಐಸಿಸ್ ಮೊದಲ ಬಾರಿ ಪ್ರಸಿದ್ಧಿ ಗಳಿಸಿದಾಗ ಅದರ ಬಗ್ಗೆ ಅವರು ದೇಶದ ಸೈನಿಕರ ಆಯುಧಗಳನ್ನು ವಶಪಡಿಸಿಕೊಂಡರು ಮತ್ತು ಕೆಲವು ಶಸ್ತ್ರಾಗಾರಗಳನ್ನು ಸ್ವಾಧೀನಪಡಿಸಿಕೊಂಡರೆಂದು ಹೇಳಲಾಗಿತ್ತು. ಇದು ಸತ್ಯವಾಗಿರಲೂಬಹುದು. ಆದರೆ ಇವು ಮಾತ್ರ ಅವರಿಗೆ ತಮ್ಮ ಕೃತ್ಯಗಳನ್ನು ಈಗಿನ ತನಕ ಮುಂದುವರಿಸಲು ಸಾಕಾಗಲಾರದು. ಒಂದು ಕ್ರಮಬದ್ಧ ಸೈನ್ಯಕ್ಕೆ ಪೂರೈಕೆ ಕಡಿಯಲ್ಪಟ್ಟರೆ ಅವರಿಗೆ ಯುದ್ಧ ಮುಂದುವರಿಸಲು ಅಸಾಧ್ಯವಾಗುತ್ತದೆ. ಆದರೆ ಐಸಿಸ್ ಭೀಕರರ ಪೂರೈಕೆ ಶೃಂಖಲೆ ವರ್ಧಿಸುತ್ತಾ ಇರುವುದಾಗಿ ಕಾಣಿಸುತ್ತದೆ. ಅವರ ಬಳಿ ಈಗ ವಿಮಾನ ಧ್ವಂಸಕ ಕ್ಷಿಪಣಿಗಳಿವೆ ಮತ್ತು ಇತರ ಆಧುನಿಕ ಶಸ್ತ್ರಗಳಿವೆ ಎಂದು ಹೇಳಲಾಗುತ್ತದೆ. ಇವೆಲ್ಲ ಅವರಿಗೆ ಪೂರೈಕೆ ಶೃಂಖಲೆ ಜಾರಿಯಲ್ಲಿದೆ ಎಂದು ಸ್ಪಷ್ಟಪಡಿಸುತ್ತದೆ.

ಈ ಭೀಕರ ಸಂಘಟನೆಯ ವಶದಲ್ಲಿ ಮಿಲಿಯಗಟ್ಟಲೆ ಡಾಲರ್ ಸಂಪತ್ತಿದೆ ಎಂದು ತಿಳಿದು ಬಂದಿದೆ. ಇದರಿಂದ ಅವರಿಗಿರುವ ಬಾಹ್ಯ ಬೆಂಬಲದ ಬಗ್ಗೆ ಸ್ಪಷ್ಟವಾಗುತ್ತದೆ. ಅನೇಕ ಅಧಿಕಾರಿಗಳು,

ವಿಮರ್ಶಕರು, ಬಹಿರಂಗವಾಗಿ ಅಭಿಪ್ರಾಯ ಸೂಚಿಸಿದ್ದಾರೆ. ಉದಾಹರಣೆಗೆ, ಯು.ಎಸ್.ಎ. ಸರಕಾರದ ಹಿರಿಯ ಪ್ರತಿನಿಧಿ ಡೇವಿಡ್ ಕೋಹೆನ್ (ಅವರು ಅಂಡರ್ ಸೆಕ್ರೆಟರಿ ಫೋರ್ ಟೆರರಿಸಮ್ ಎಂಡ್ ಫೈನಾನ್ಸಿಯಲ್ ಇಂಟೆಲಿಜೆನ್ಸ್) ಹೀಗೆ ಹೇಳಿದ್ದಾರೆ: ಐಸಿಸ್ ನಾವು ಎದುರಿಸುತ್ತಿರುವ ಅತ್ಯಂತ ಹೆಚ್ಚು ಸಂಪತ್ತನ್ನು ಹೊಂದಿದ ಭೀಕರ ಸಂಘಟನೆಯಾಗಿದೆ. ಅವರು ಪ್ರತಿ ತಿಂಗಳು ಮಿಲಿಯಗಟ್ಟಲೆ ಡಾಲರ್ ಖರ್ಚುಮಾಡುತ್ತಾರೆ ಮತ್ತು ಪ್ರತಿದಿನ ಒಂದು ಮಿಲಿಯ ಡಾಲರ್ ಬೆಲೆಯ ತೈಲವನ್ನು ಕಾಳಸಂತೆಯಲ್ಲಿ ವಿಕ್ರಯಿಸುತ್ತಾರೆ.

ಅವರು ಇಷ್ಟು ಬೃಹತ್ ಗಾತ್ರದ ತೈಲವನ್ನು ಯಾವುದೇ ತಡೆಯಿಲ್ಲದೆ ಎಲ್ಲಿಂದ ಹೇಗೆ ಗಳಿಸುತ್ತಾರೆಂದು ನಾವು ಕೇಳಲು ಬಯಸುತ್ತೇವೆ. ಲೋಕದ ಬೇರೆ ಪ್ರದೇಶಗಳಲ್ಲಿ ತೈಲ ಸಾಗಣೆ ಮತ್ತು ಮಾರಾಟವನ್ನು ವೀಕ್ಷಣೆಗೆ ಒಳಪಡಿಸಲಾಗುತ್ತಿದೆ. ಕೆಲವು ತೈಲ ಸಮೃದ್ಧ ದೇಶಗಳ ವಿರುದ್ಧ ಪ್ರತಿಬಂಧಗಳನ್ನು ಹೇರಲಾಗಿದೆ. ಆದರೆ ಐಸಿಸ್ ಎಲ್ಲ ರೀತಿಯ ನಿಯಮಗಳನ್ನು ಕಡೆಗಣಿಸಿ ತೈಲವನ್ನು ಪಡೆಯಲು ಮತ್ತು ಮಾರಾಟಮಾಡಲು ಶಕ್ತವಾಗಿದೆ. ಇಷ್ಟು ಬೃಹತ್ ಗಾತ್ರದ ತೈಲವನ್ನು ಸಾಗಾಟ ಮಾಡುವುದು ಮತ್ತು ಮಾರಾಟ ಮಾಡುವುದನ್ನು ಸುಲಭವಾಗಿ ಅಡಗಿಸಿಡಲು ಸಾಧ್ಯವಿಲ್ಲವೆಂದು ನಮಗೆಲ್ಲರಿಗೂ ತಿಳಿದಿದೆ. ಐಸಿಸ್ ಒತ್ತೆಯಾಳು ಬಿಡುಗಡೆಗೆ ಪರಿಹಾರಕ್ಕಾಗಿ ಹಣ ಪಡೆಯುತ್ತಾ ಇರುತ್ತದೆ ಎಂದು ಹೇಳಲಾಗುತ್ತಿದೆ. ಆದರೆ ಅದಕ್ಕೆ ದೊರಕಿರುವ ಇತರ ಸಂಪನ್ಮೂಲಗಳಿಗೆ ಹೋಲಿಸಿದರೆ ಇದು ಚಿಕ್ಕದಾಗಿದೆ.

ಈ ಭೀಕರ ಗುಂಪುಗಳು ನೀಡುತ್ತಿರುವ ಧನ ಸಹಾಯ ಬಹಳ ಮುಖ್ಯ ಸಮಸ್ಯೆಯಾಗಿದೆ. ಅವರು ಧನ ಸಹಾಯ ನೀಡಿ ದುರ್ಬಲ ಗುಂಪುಗಳನ್ನೂ ವ್ಯಕ್ತಿಗಳನ್ನೂ ಹಿಡಿಗೂಡಲು ಸಮರ್ಥರಾಗುತ್ತಿದ್ದಾರೆ. ಇತ್ತೀಚೆಗಿನ ಒಂದು ವರದಿ ಹೀಗೆ ಹೇಳುತ್ತಿದೆ: ಒಂದು ಕುಟುಂಬ ಒಬ್ಬ ಸದಸ್ಯನನ್ನು ಐಸಿಸ್ ಸೇರಲು ಕಳುಹಿಸಿದರೆ ಆ ಕುಟುಂಬಕ್ಕೆ ಸಾವಿರಗಟ್ಟಲೆ ಡಾಲರ್ ಮೊದಲ ಕಂತಾಗಿ ನೀಡಲಾಗುತ್ತದೆ. ಅನಂತರ ನೂರುಗಟ್ಟಲೆ ಡಾಲರ್ ಕ್ರಮಬದ್ಧವಾಗಿ ನೀಡಲಾಗುತ್ತಿದೆ.

ಈ ಗುಂಪುಗಳಿಗೆ ಧನವನ್ನು ಒದಗಿಸುವುದನ್ನು ತಡೆಯಲು ತುರ್ತಾಗಿ ಏನನ್ನಾದರೂ ಮಾಡಬೇಕಾಗಿದೆ. ಪಶ್ಚಿಮ ದೇಶಗಳು ಈಗ ಮನವರಿಕೆ ಮಾಡಿಕೊಂಡಿವೆ – ಭೀಕರವಾದಿಗಳ ಹೋರಾಟ ತಮ್ಮನ್ನೂ ಬಾಧಿಸುವುದೆಂದು. ಆದರೆ ಇದು ಸಹ ಸರಿಯಾದ ಅಂದಾಜು ಅಲ್ಲ. ವಾಸ್ತವಿಕವಾಗಿ ಭೀಕರವಾದಿಗಳ ಹೋರಾಟ ಇಡೀ ಲೋಕದ ವಿರುದ್ಧವಾಗಿದೆ.

ಮಹಾಶಕ್ತಿಗಳು ಮುಸ್ಲಿಮ್ ದೇಶಗಳ ಧೋರಣೆಗಳ ಮೇಲೆ ಬಹಳ ಪ್ರಭಾವಬೀರುತ್ತವೆ ಮತ್ತು ಕೆಲವು ಸಾರಿ ಆದೇಶ ನೀಡುತ್ತವೆ ಎಂದು ನಾವು ಕಾಣುತ್ತೇವೆ. ಈಗ ಪ್ರಶ್ನೆ ಏನೆಂದರೆ, ಈ ಮಹಾಶಕ್ತಿಗಳು ವಾಸ್ತವಿಕವಾಗಿ ಅವಶ್ಯಕವಾದ ಪ್ರಭಾವವನ್ನು ಏಕೆ ಬೀರುತ್ತಾ ಇಲ್ಲ? ಈಗ ಅವು ಪ್ರಾರಂಭಿಸಿವೆ. ಆದರೆ ಬಹಳ ತಡವಾಗಿ ಹೀಗೆ ಮಾಡಿವೆ.

ಎಲ್ಲ ವಿಧ ಭೀಕರ ಕೃತ್ಯಗಳನ್ನು ತಡೆಯಲು ಒಗ್ಗೂಡಿದ ಮತ್ತು ಸಂಘಟಿತ ಪ್ರಯತ್ನ ಏಕೆ ಮಾಡುವುದಿಲ್ಲ? ಈ ಗುಂಪು ಮಾಡಬಹುದಾಗ ವಿನಾಶಕ್ಕೆ ಹೋಲಿಸಿದರೆ ಅದನ್ನು ತಡೆಗಟ್ಟಲು ಪ್ರಯತ್ನಗಳು ಬಹಳ ಕಡಿಮೆಯಾಗಿವೆ. ನನ್ನ ಅಭಿಪ್ರಾಯ ಪ್ರಕಾರ, ಈಗ ಸಂಭವಿಸುತ್ತಿರುವುದು ಕೇವಲ ಮುಸ್ಲಿಮ್ ಲೋಕ ಮಾಡಿದ ತಪ್ಪುಗಳಿಂದ ಮಾತ್ರವಲ್ಲ, ಬಾಹ್ಯ ಶಕ್ತಿಗಳು ಸಹ ಈ ವಿನಾಶಕರ ಪರಿಸ್ಥಿತಿ ಉಂಟುಮಾಡಲು ಸಹಾಯ ಮಾಡುತ್ತಿವೆ.

ಸಿರಿಯಾ, ಇರಾಖ್ ಮೊದಲಾದ ದೇಶಗಳಲ್ಲಿ ಆಂತರಿಕ ಸಂಘರ್ಷಗಳು ಅನೇಕ ವರ್ಷಗಳಿಂದ ಜಾರಿಯಲ್ಲಿವೆ. ಬಾಹ್ಯ ಶಕ್ತಿಗಳು ವಿದ್ರೋಹಿ ಗುಂಪುಗಳಿಗೆ ಮತ್ತು ಪಂಗಡಗಳಿಗೆ ಧನ ಮತ್ತು ಆಯುಧಗಳ ಸಹಾಯ ನೀಡುತ್ತಾ ಇದ್ದುವು. ಆದರೆ ಈ ವಿದ್ರೋಹಿ ಗುಂಪುಗಳು ಅವರಿಗೆ ಧನಸಹಾಯ ನೀಡುತ್ತಿದ್ದವರ ನಿಯಂತ್ರಣದಿಂದ ವೇಗವಾಗಿ ದೂರ ಸರಿದು ಹೋಗಿವೆ. ಅವರು ಭೀಕರವಾದಿ ಸಿದ್ಧಾಂತಗಳನ್ನು ಆಧಾರವಾಗಿಟ್ಟುಕೊಂಡು ವಿನಾಶಕರ ಕೃತ್ಯಗಳನ್ನು ಮಾಡುತ್ತಿದ್ದಾರೆ. ನಾನು ಹೇಳುತ್ತಿರುವುದು ಸಂಪರ್ಕ ಮಾಧ್ಯಮಗಳು ಬಹಿರಂಗಪಡಿಸಿರುವುವುಗಳಿಗೆ ಮತ್ತು ಸಾರ್ವತ್ರಿಕವಾಗಿ ತಿಳಿದು ಬಂದುದಕ್ಕೆ ವಿರುದ್ಧವಾಗಿ ಏನೂ ಅಲ್ಲ. ಐಸಿಸ್ ಮೊದಲಾದ ಗುಂಪುಗಳು ಇಂತಹ ಧೋರಣೆಗಳ ಫಲ ಸ್ವರೂಪಗಳಾಗಿವೆ. ಅವರು ತಮ್ಮ ಭಯೋತ್ಪಾದಕ ಕಾರ್ಯಕ್ಷೇತ್ರವನ್ನು ದೂರದೂರದವರೆಗೆ ಹರಡಿದ್ದು ಲೋಕದ ಮೇಲೆಲ್ಲ ತೊಂದರೆ ಮಾಡುತ್ತಿದ್ದಾರೆ.

ಈ ಭೀಕರ ಕೃತ್ಯಗಳು ಇಸ್ಲಾಮ್‌ನೊಂದಿಗೆ ಸಂಬಂಧಿಸಿವೆ ಎಂದು ಆಪಾದಿಸುವುದು ನನಗೆ ಬಹಳ ನೋವನ್ನುಂಟು ಮಾಡುವ ವಿಷಯವಾಗಿದೆ ಎಂದು ನಾನು ಪುನಃ ಹೇಳಲು ಬಯಸುತ್ತೇನೆ. ಇಂದಿನ ಕಾಲದಲ್ಲಿ ಪಶ್ಚಿಮದ ದೇಶಗಳಿಂದ ಮುಸ್ಲಿಮ್ ಯುವ ಜನರು ಸಿರಿಯಾ ಮತ್ತು ಇರಾಖ್‌ಗೆ ಹೋಗಿ ತೀವ್ರವಾದಿಗಳಾಗುವುದು ಅತ್ಯಂತ ಆತಂಕಜನಕವಾಗಿದೆ. ಈ ಯುವ ಜನರು ತಮ್ಮ ವಾಸದ ದೇಶಗಳಿಗೆ ಮರಳಿಬಂದು ಆಕ್ರಮಣ ಮಾಡುವುದು ಮತ್ತು ಲೋಕದ ಈ ಭಾಗದಲ್ಲಿ ಅಸ್ತವ್ಯಸ್ತತೆ ಸೃಷ್ಟಿಸುವುದು ಸಂಭವನೀಯವಾಗಿದೆ. ಆದುದರಿಂದ ಇದೊಂದು ಸ್ಥಳೀಯ ಅಥವಾ ಮುಸ್ಲಿಮ್ ಸಮಸ್ಯೆ ಅಲ್ಲ, ಇದು ಜಾಗತಿಕವಾದ ಒಂದು ಸಮಸ್ಯೆಯಾಗಿದೆ. ಈ ಭೀಕರವಾದಿ ಸಂಘಟನೆಗಳನ್ನು ತಡೆಯಲು ಜಾಗತಿಕ ಪ್ರಬಲ ಪ್ರಯತ್ನ ಮಾಡುವ ಅವಶ್ಯಕತೆ ಇದೆ.

ಕೆಲವು ಪ್ರಸಿದ್ಧ ವ್ಯಕ್ತಿಗಳು ಭೀಕರವಾದ ವಿರುದ್ಧ ಯುದ್ಧ ಕೊನೆಗೊಳ್ಳಲು ಮೂವತ್ತು ಅಥವಾ ನೂರು ವರ್ಷಗಳು ಬೇಕಾಗಬಹುದೆಂದು ಹೇಳಿದ್ದಾರೆ. ಆದರೆ ನಾನು ನಂಬುವು ದೇನೆಂದರೆ, ಲೋಕವು ಈ ಭೀಕರ ಗುಂಪುಗಳನ್ನು ನಿರ್ಮೂಲ




ಮಾಡಲು ದೃಢನಿರ್ಧಾರ ಮಾಡಿದರೆ ಬಹಳ ಕಡಿಮೆ ಕಾಲಾವಧಿಯಲ್ಲಿ ಈ ನಿರ್ಧಾರವನ್ನು ಈಡೇರಿಸಬಹುದು. ಈ ಹೋರಾಟ ಕೊನೆಗೊಳ್ಳಲು ದಶಕಗಳು ಬೇಕಾಗಿವೆ ಎಂದು ಹೇಳಿ ನಾವು ನಮ್ಮ ವೈಯಕ್ತಿಕ ಹೊಣೆಗಾರಿಕೆಗಳಿಂದ ಮುಕ್ತರಾಗಿದ್ದೇವೆ ಎಂದು ಯೋಚಿಸಬಾರದು. ಜಾಗತಿಕ ಭೀಕರತೆಯನ್ನು ಎದುರಿಸುವ ಪ್ರಯತ್ನದಲ್ಲಿ ಪ್ರತಿಯೊಬ್ಬನು ಭಾಗವಹಿಸಬೇಕು. ಇಸ್ಲಾಮಿನ ವಿರುದ್ಧ ಅಥವಾ ನಿರ್ದಿಷ್ಟ ಗುಂಪಿನ ವಿರುದ್ಧ ದೋಷಾರೋಪ ಮಾಡುವುದು ನಮ್ಮನ್ನು ಯುದ್ಧದಿಂದಾಗಲೀ ನಮ್ಮ ಹೊಣೆಗಾರಿಕೆಗಳಿಂದಾಗಲೀ ಸ್ವತಂತ್ರರನ್ನಾಗಿ ಮಾಡಲಾರರು.

ಆದುದರಿಂದ ಎಲ್ಲ ಶಾಂತಿಪ್ರಿಯ ಜನರು ತಮ್ಮ ಸರಕಾರಗಳ ಮೇಲೆ ಒತ್ತಡ ಹೇರಬೇಕು. ಎಲ್ಲ ರಾಜಕಾರಣಿಗಳೂ ಪ್ರಭಾವಶಾಲಿಗಳಾದ ಜನರೂ ಇದರ ಬಗ್ಗೆ ಚಿಂತಿಸಬೇಕು ಮತ್ತು ತಮ್ಮ ಕ್ಷೇತ್ರಗಳಲ್ಲಿ ಸತ್ಯವಾಗಿಯೂ ನ್ಯಾಯಪಾಲನೆ ಮಾಡಬೇಕು. ಲೋಕಶಾಂತಿ ಕೆಡಿಸುವ ಚಟುವಟಿಕೆಗಳನ್ನು ಸಂಪೂರ್ಣವಾಗಿ ತಡೆಯಲು ದೃಢನಿಶ್ಚಯದ ಕ್ರಮಗಳನ್ನು ಕೈಗೊಳ್ಳಬೇಕು. ನಾವು ಲೋಕವನ್ನು ರಕ್ಷಿಸಲು ಬಯಸುವುದಾದರೆ, ಸತ್ಯವಾಗಿಯೂ ಸಮಾಜದ ಎಲ್ಲ ಹಂತಗಳಲ್ಲೂ ನ್ಯಾಯಪಾಲನೆ ಮಾಡಬೇಕು. ಪ್ರತಿಯೊಂದು ದೇಶದಲ್ಲಿ ತಲೆದೋರುವ ಸಮಸ್ಯೆಗಳನ್ನು ನ್ಯಾಯಬದ್ಧವಾಗಿ ಪರಿಹರಿಸಬೇಕು ಮತ್ತು ನಿರಾಶೆ ತಲೆದೋರದಂತೆ ಜಾಗರೂಕರಾಗಬೇಕು.

ಯಾವುದೇ ದೇಶದ ಸಂಪತ್ತನ್ನು ಅಸೂಯೆಯಿಂದ ನೋಡಬಾರದು. ಪರಸ್ಪರ ಸಹಾಯ ಮಾಡುವ ಧೋರಣೆಯನ್ನು ಎಲ್ಲರೂ ಹೊಂದಬೇಕು. ಅತ್ಯಂತ ಮುಖ್ಯ ವಿಷಯವೇನೆಂದರೆ, ಲೋಕವು ಅದರ ಸೃಷ್ಟಿಕರ್ತನನ್ನು ಮರೆತಿದೆ ಎಂಬುದನ್ನು ತಿಳಿದುಕೊಳ್ಳಬೇಕು ಮತ್ತು ಅವನ ಕಡೆಗೆ ಮರಳಬೇಕು.

ಹೀಗೆ ಸಂಭವಿಸುವಾಗ ಮಾತ್ರ ನಿಜವಾದ ಶಾಂತಿ ಲೋಕದಲ್ಲಿ ಸ್ಥಾಪಿತವಾಗುವುದು. ಹೀಗೆ ಆಗದಿದ್ದರೆ, ಜಾಗತಿಕ ಶಾಂತಿಯ ಬಗ್ಗೆ ಯಾವ ಖಾತರಿಯನ್ನೂ ನೀಡಲು ಸಾಧ್ಯವಾಗದು.

ನಾನು ಇದರ ಮೊದಲು ಅನೇಕ ಸಲ ಇನ್ನೊಂದು ಜಾಗತಿಕ ಯುದ್ಧದ ಭಯಾನಕ ಪರಿಣಾಮಗಳ ಬಗ್ಗೆ ಪ್ರಸ್ತಾಪಿಸಿದ್ದೇನೆ. ಪ್ರಾಯಶಃ ಇಂತಹ ಜಾಗತಿಕ ಮಹಾಯುದ್ಧ ಸಂಭವಿಸಿದ ನಂತರ ಮಾತ್ರ ಲೋಕವು ವೈಯಕ್ತಿಕ ಹಂಬಲಗಳನ್ನು ಮತ್ತು ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ರೂಪಿಸಲಾಗುವ ಅನ್ಯಾಯ ಭರಿತ ಧೋರಣೆಗಳ ವಿನಾಶಕಾರಿ ಪರಿಣಾಮಗಳನ್ನು ಅರಿತು ಕೊಳ್ಳುವುದೆಂದು ತೋರುತ್ತದೆ. ನಾನು ಪ್ರಾರ್ಥಿಸುತ್ತೇನೆ ಮತ್ತು ಪ್ರತೀಕ್ಷಿಸುತ್ತೇನೆ –ಅಂತಹ ವಿನಾಶ ಸಂಭವಿಸುವ ಮೊದಲು ಲೋಕವು ಅದರ ಬಗ್ಗೆ ಪ್ರಜ್ಞೆ ಹೊಂದುವುದೆಂದು.

ನಾನು ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ – ಲೋಕವು ತನ್ನ ಸೃಷ್ಟಿಕರ್ತನನ್ನು ಗುರುತಿಸಿ ಅಂಗೀಕರಿಸಲಿ ಎಂದು. ಈ ಮಾತುಗಳೊಂದಿಗೆ ನಾನು ಮುಕ್ತಾಯಗೊಳಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು. ★

**(The Review of Religions, January 2015 ಸಂಚಿಕೆಯಿಂದ. ಅನುವಾದಕ: ಯಮ್. ಉಬೈದುಲ್ಲಾ)**

# ಶಾಂತಿಯನ್ನು ಪ್ರತಿಪಾದಿಸುವ ಇಸ್ಲಾಮ್ ಬಗ್ಗೆ ಹೆದರಬೇಕೇ?




**2015 ಜೂನ್ ತಿಂಗಳಲ್ಲಿ ಜರ್ಮನಿಯಲ್ಲಿ ಜರಗಿದ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ)ದಲ್ಲಿ ಜರಗಿದ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಅಹ್ಮದಿಯೇತರ ಅತಿಥಿಗಳನ್ನು ಸಂಬೋಧಿಸಿ ಮಾಡಿದ ಭಾಷಣ)**

ಸಾಂಪ್ರದಾಯಿಕ ಪ್ರಾರ್ಥನೆ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು:

ಎಲ್ಲ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು– ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ಮೊದಲನೆಯದಾಗಿ, ನಮ್ಮ ಜಮಾಅತಿನ ಸದಸ್ಯರಾಗಿರದಿದ್ದರೂ ನಮ್ಮ ವಾರ್ಷಿಕ ಸಮ್ಮೇಳನಕ್ಕೆ ಆಗಮಿಸಿದ ಅಹ್ಮದಿಯೇತರ ಅತಿಥಿಗಳಾದ ನಿಮಗೆಲ್ಲರಿಗೂ ಪ್ರಾಮಾಣಿಕವಾಗಿ ಕೃತಜ್ಞತೆ ಅರ್ಪಿಸುತ್ತೇನೆ.

ಈ ದಿನ ನನ್ನ ಭಾಷಣದಲ್ಲಿ ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್(ಸ) ಅವರ ಬಗ್ಗೆ ಮತ್ತು ಅವರು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಕೈಗೊಂಡ ಅದ್ವಿತೀಯ ಪ್ರಯತ್ನಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು.

ಇಂದಿನ ಕಾಲದಲ್ಲಿ ಅನೇಕ ಮುಸ್ಲಿಮ್ ನಾಮಧಾರಿಗಳು ಲೋಕದಲ್ಲಿ ಶಾಂತಿಯನ್ನು ಕೆಡಿಸುವ ಕೃತ್ಯಗಳನ್ನು ಮಾಡುತ್ತಾ ಇದ್ದಾರೆ ಮತ್ತು ತಮ್ಮ ಉಗ್ರಗಾಮಿ ಚಟುವಟಿಕೆಗಳನ್ನು ಪವಿತ್ರ ಖುರ್‌ಆನ್ ಮತ್ತು ಪುಣ್ಯ ಪೈಗಂಬರ್ ಮುಹಮ್ಮದ್‌ರವರ(ಸ) ಹೆಸರು ಹೇಳಿ ನ್ಯಾಯೀಕರಿಸುತ್ತಾ ಇದ್ದಾರೆ. ಹೀಗಿರುವಾಗ ನನ್ನ ಹೇಳಿಕೆ ಆಲಿಸಿ ನೀವು ಆಶ್ಚರ್ಯಚಕಿತರಾಗಬಹುದು. ಉಗ್ರವಾದಿಗಳು ಭೀಕರ ಕೃತ್ಯಗಳನ್ನು ಅತ್ಯಂತ ಬರ್ಬರ ಶೈಲಿಯಲ್ಲಿ ನಡೆಸುತ್ತಾರೆ ಮತ್ತು ತಾವು ಇಸ್ಲಾಮ್ ಧರ್ಮ ಪ್ರಕಾರವೇ ಈ ಕೃತ್ಯಗಳನ್ನು ಮಾಡುತ್ತಿರುವುದಾಗಿ ವಾದಿಸುತ್ತಾ ಇರುತ್ತಾರೆ.

ಲೋಕದಲ್ಲಿ ತಲೆದೋರಿರುವ ಈ ಅಸ್ತವ್ಯಸ್ತತೆ ಮತ್ತು ಮುಸ್ಲಿಮ್ ನಾಮಧಾರಿಗಳು ನಡೆಸುವ ಭೀಕರ ಕೃತ್ಯಗಳ ಕಾರಣದಿಂದ ಇಸ್ಲಾಮ್ ಧರ್ಮದ ಬಗ್ಗೆ ನನ್ನ ವಿಶ್ವಾಸ ಮತ್ತು ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನ ವಿಶ್ವಾಸ ವರ್ಧಿಸಲು ಕಾರಣವಾಗುತ್ತಿದೆ ಎಂದು ನಾನು ಹೇಳುವಾಗ ನಿಮ್ಮ ಆಶ್ಚರ್ಯ ಇನ್ನಷ್ಟು ವರ್ಧಿಸಬಹುದು. ನನ್ನ ಮಾತು ಆಲಿಸಿ ನೀವು ತಬ್ಬಿಬ್ಬಾಗಬಹುದು. ಅಹ್ಮದಿಯೇತರ ಮುಸ್ಲಿಮರು ನಡೆಸುವ ಭೀಕರ ಕೃತ್ಯಗಳಿಂದ ಅಹ್ಮದೀ ಮುಸ್ಲಿಮರ ಧಾರ್ಮಿಕ ವಿಶ್ವಾಸ ವರ್ಧಿಸುವುದು ಹೇಗೆಂದು ನೀವು ಆಶ್ಚರ್ಯಚಕಿತರಾಗಬಹುದು. ಅಹ್ಮದೀ ಮುಸ್ಲಿಮರ ಬಗ್ಗೆ ನೀವು ಭಯಭೀತರಾಗಿ ಅವರು ಸಹ ಭೀಕರ ಕೃತ್ಯಗಳನ್ನು ಬೆಂಬಲಿಸುವವರೆಂದು ನೀವು ತಪ್ಪು ಗ್ರಹಿಕೆ ಹೊಂದಬಹುದು. ಆದರೆ ನೀವು ಹಾಗೆ ಭಾವಿಸುವುದು ಸಂಪೂರ್ಣ ತಪ್ಪಾಗಿದೆ.

ನಾನು ಮೊತ್ತ ಮೊದಲು ಸ್ಪಷ್ಟಪಡಿಸಲು ಬಯಸುತ್ತೇನೆ. ಅಹ್ಮದೀ ಮುಸ್ಲಿಮರು ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡುವ ಪ್ರಯತ್ನವನ್ನು ಪರಿಪೂರ್ಣ ಪ್ರಾಮಾಣಿಕತೆಯೊಂದಿಗೆ ಮಾಡುತ್ತಾರೆ. ಅವರು ತಾವು ಪ್ರತಿಪಾದಿಸುವುದನ್ನು ಕೃತ್ಯರೂಪಕ್ಕೆ ಇಳಿಸುತ್ತಾರೆ. ನಮ್ಮ ಅಂತರಂಗ

ಮತ್ತು ಬಹಿರಂಗ ಒಂದೇ ತರದ್ದಾಗಿದೆ. ಇಸ್ಲಾಮ್ ಧರ್ಮದ ನೈಜ ತತ್ವಗಳೆಂದು ಹೃತ್ಪೂರ್ವಕವಾಗಿ ನಾವು ನಂಬುವುದನ್ನು ನಾವು ಅನುಷ್ಠಾನಕ್ಕೆ ತರುತ್ತೇವೆ. ನಾನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಅಹ್ಮದೀ ಮುಸ್ಲಿಮರು ಶಾಂತಿ, ಭದ್ರತೆ ಮತ್ತು ಪ್ರೀತಿಯ ತತ್ವಗಳನ್ನು ಎಲ್ಲರಿಗೂ ಉಪದೇಶಿಸುವಾಗ ಅವರು ಹೊಸದಾದ ಯಾವು ದಾದರೂ ವಿಷಯವನ್ನು ಹೇಳುತ್ತಾ ಇಲ್ಲ. ಅವರು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಮಾತ್ರ ಪ್ರಕಟಿಸುತ್ತಿದ್ದಾರೆ. ಎಲ್ಲ ರೀತಿಗಳಲ್ಲೂ ಇಸ್ಲಾಮ್ ಧರ್ಮ ಶಾಂತಿ, ಸೌಹಾರ್ದ, ಸಹನೆ ಮತ್ತು ಅನುಕಂಪ ಪ್ರತಿಪಾದಿಸುವ ಧರ್ಮವಾಗಿದೆ.

ಖಂಡಿತವಾಗಿಯೂ ಇಸ್ಲಾಮ್ ತತ್ವಗಳ ಏಕಮಾತ್ರ ಕಾರಣದಿಂದ ಅಹ್ಮದೀ ಮುಸ್ಲಿಮರು ಎಲ್ಲ ಜನರನ್ನು, ಮುಸ್ಲಿಮರಾಗಿರಲೀ ಮುಸ್ಲಿಮೇತರರಾಗಿರಲೀ ಎಲ್ಲರನ್ನೂ ಪ್ರೀತಿಸುವವರಾಗಿದ್ದಾರೆ. ಇಸ್ಲಾಮ್ ಧರ್ಮದ ನೈಜ ಉಪದೇಶ ಪ್ರಕಾರವೇ ನಾವು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಬಯಸುತ್ತೇವೆ ಮತ್ತು ಇದಕ್ಕೋಸ್ಕರ ನಮಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ.

ನಾನು ಇದರ ಮೊದಲು ಹೇಳಿದ ಮಾತುಗಳಿಂದ ನೀವು ಅನಾವಶ್ಯಕವಾಗಿ ಗೊಂದಲಕ್ಕೊಳಗಾಗಿರಲು ನಾನು ಬಯಸುವುದಿಲ್ಲ. ಅಹ್ಮದೀ ಮುಸ್ಲಿಮರು ಅನ್ಯ ಮುಸ್ಲಿಮರ ಭೀಕರ ಕೃತ್ಯಗಳನ್ನು ಖಂಡಿಸುತ್ತಾರೆ. ಆದರೆ ಈ ಕೃತ್ಯಗಳಿಂದ ಅಹ್ಮದೀ ಮುಸ್ಲಿಮರ ಧಾರ್ಮಿಕ ವಿಶ್ವಾಸ ವರ್ಧಿಸುತ್ತದೆ ಎಂದು ನಾನು ಹೇಳಿದುದನ್ನು ಸ್ಪಷ್ಟಪಡಿಸಲು ಒಂದು ಸಾವಿರದ ನಾಲ್ಕು ನೂರು ವರ್ಷಗಳ ಹಿಂದೆ ಮುಹಮ್ಮದ್ ಪೈಗಂಬರ್[ಸ] ಪ್ರಕಟಿಸಿದ ಒಂದು ಭವ್ಯ ಭವಿಷ್ಯವಾಣಿಯನ್ನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಪೈಗಂಬರರು[ಸ] ಹೀಗೆ ಭವಿಷ್ಯ ನುಡಿದಿದ್ದರು: ಮುಂದೆ ಒಂದು ಕಾಲಘಟ್ಟದಲ್ಲಿ ಆಧ್ಯಾತ್ಮಿಕ ಅಂಧಕಾರವು ಮುಸ್ಲಿಮರನ್ನು ಆವರಿಸುವುದು. ಅವರು ಸಂಪೂರ್ಣ ಭ್ರಷ್ಟರಾಗುವರು. ಆ ಸಮಯದಲ್ಲಿ ಮುಸ್ಲಿಮರು ಮಾಡುವ ಕೃತ್ಯಗಳು ಇಸ್ಲಾಮ್ ಧರ್ಮದ ಮೂಲ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿರುವುವು. ಆ ಕಾಲದ ಮುಸ್ಲಿಮ್ ಮತಪಂಡಿತರು ಇಸ್ಲಾಮ್ ಧರ್ಮ ತತ್ವಗಳನ್ನು ಸಂಪೂರ್ಣವಾಗಿ ತಪ್ಪಾಗಿ ವ್ಯಾಖ್ಯಾನಿಸುವರು ಮತ್ತು ಅವರ ಮನೋಭಾವದ ಕಾರಣದಿಂದ ಲೋಕದಲ್ಲಿ ಅಸ್ತವ್ಯಸ್ತತೆಯೂ ಅನ್ಯಾಯವೂ ವ್ಯಾಪಿಸುವುದು ಎಂದು ಹಝ್ರತ್ ಪೈಗಂಬರರು[ಸ] ಎಚ್ಚರಿಕೆ ನೀಡಿದ್ದರು.

ಹಝ್ರತ್ ಪೈಗಂಬರರು[ಸ] ಎಚ್ಚರಿಕೆ ನೀಡುವುದರ ಜೊತೆಗೆ ಒಂದು ಶುಭ ವಾರ್ತೆ ಸಹ ನೀಡಿದ್ದಾರೆ. ಅಸ್ತವ್ಯಸ್ತತೆ ಮತ್ತು ಸಂಘರ್ಷದ ಆ ಕಾಲಘಟ್ಟದಲ್ಲಿ ಸರ್ವಶಕ್ತನಾದ ಅಲ್ಲಾಹನು ಇಸ್ಲಾಮ್ ಧರ್ಮವನ್ನು ಪುನಶ್ಚೇತಗೊಳಿಸಿ ನೈಜ ಇಸ್ಲಾಮ್ ಧರ್ಮ ತತ್ವಗಳನ್ನು ಪ್ರಚಾರ ಮಾಡಲು ಒಬ್ಬ ಮಹಾನುಭಾವರನ್ನು ನಿಯೋಜಿಸುವನು. ಆ ಮಹಾನುಭಾವರು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದೀ ಆಗಿ ಆಗಮಿಸುವರು. ಅವರು ಇಸ್ಲಾಮ್ ಧರ್ಮದ ಮೂಲತತ್ವಗಳನ್ನು ಲೋಕದಾದ್ಯಂತ ಪುನಃ ಸ್ಥಾಪಿಸುವರು. ಅವರು ಮಾನವರೆಲ್ಲರಿಗೂ ಇಸ್ಲಾಮ್ ಧರ್ಮದ ಸತ್ಯವಾದ ಆಧ್ಯಾತ್ಮಿಕ ಪ್ರಕಾಶವನ್ನು ಸುರಿಸುವರು.

ಅಲ್ಲಾಹನ ಅನುಗ್ರಹದಿಂದ ಮೇಲೆ ವಿವರಿಸಿದ ಎರಡು ಭವಿಷ್ಯವಾಣಿಗಳೂ ಈಡೇರಿರುವುದಾಗಿ ನಾವು ಕಾಣುತ್ತೇವೆ. ಒಂದು ಕಡೆ, ಇಸ್ಲಾಮ್ ಧರ್ಮವನ್ನು ಭ್ರಷ್ಟಗೊಳಿಸಲಾಗಿದೆ, ಅದರ ಮೂಲತತ್ವಗಳನ್ನು ವಿರೂಪಗೊಳಿಸಲಾಗಿದೆ. ಇನ್ನೊಂದು ಕಡೆ, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರನ್ನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿಯಾಗಿ ಅಲ್ಲಾಹನು ಕಳುಹಿಸಿರುವನು. ವಾಗ್ದತ್ತ ಮಸೀಹರು ತಮ್ಮ ಜೀವಿತ ಕಾಲದಲ್ಲಿ ಇಸ್ಲಾಮ್ ಧರ್ಮದ ತತ್ವಗಳ ಮೇಲೆ ಬೆಳಕು ಹರಿಸಿ ವೈಭವಶಾಲಿ ತತ್ವಗಳನ್ನು ಲೋಕಕ್ಕೆ ತೋರಿಸಿಕೊಟ್ಟರು. ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಮಾನವ ಚರಿತ್ರೆಯಲ್ಲಿ ಶಾಂತಿಯ ದೀವಟಿಗೆಯನ್ನು ಎತ್ತಿಹಿಡಿದವರಲ್ಲಿ ಅತ್ಯಂತ ಶ್ರೇಷ್ಠರು ಎಂದು ಅವರು ಸಾಬೀತುಗೊಳಿಸಿದರು. ಮುಹಮ್ಮದ್ ಪೈಗಂಬರ್[ಸ] ನುಡಿದ ಭವ್ಯ ಭವಿಷ್ಯವಾಣಿ ಈಡೇರಿದುದನ್ನು ಕಾಣುವಾಗ ಅಹ್ಮದೀ ಮುಸ್ಲಿಮರ ಧಾರ್ಮಿಕ ವಿಶ್ವಾಸ ವರ್ಧಿಸುತ್ತಿದೆ.

ಈ ಪ್ರಾಸ್ತಾವಿಕ ಮಾತುಗಳ ನಂತರ ಹಝ್ರತ್ ಪೈಗಂಬರರ[ಸ] ನೈಜ ಉಪದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಅವರು ಲೋಕದಲ್ಲಿ ಶಾಶ್ವತ ಶಾಂತಿ ಸ್ಥಾಪಿಸಲು ಮಾಡಿದ ಅತುಲ್ಯ ಪ್ರಯತ್ನಗಳನ್ನು ವಿವರಿಸುವೆನು.

ಹಝ್ರತ್ ಪೈಗಂಬರರು[ಸ] ನಮಗೆ ಕಲಿಸಿದ ಒಂದು ಮುಖ್ಯ ವಿಷಯವೇನೆಂದರೆ ಪ್ರತಿಯೊಬ್ಬ ಮನುಷ್ಯನ ಮನೋಭಾವ ಮತ್ತು ಆದ್ಯತೆಗಳು ಬೇರೆ ಬೇರೆಯಾಗಿರುತ್ತವೆ. ಬಹುತೇಕ ಜನರು ಶಾಂತಿಯನ್ನು ಬಯಸುತ್ತಾರೆಂಬುದು ಸತ್ಯವಾಗಿದ್ದರೂ ಅನೇಕ ಜನರು ತಮ್ಮ ಸ್ವಂತ ಶಾಂತಿ ಮತ್ತು ಸುರಕ್ಷತೆಗೆ ಆದ್ಯತೆ ನೀಡುತ್ತಾರೆ ಎಂಬುದು ಸಹ ಸತ್ಯವಾಗಿದೆ. ಅವರಿಗೆ ಅನ್ಯರ ಹಿತದ ಬಗ್ಗೆ ಯಾವ ಕಾಳಜಿಯೂ ಇರುವುದಿಲ್ಲ. ಮಾನವರ ಮನಶ್ಶಾಸ್ತ್ರದ ಅಧ್ಯಯನದಿಂದ ತಿಳಿದು ಬರುವುದು ಏನೆಂದರೆ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ ತಾನು ಶಾಂತಿಯಿಂದ ಮತ್ತು ಸಮಾಧಾನದಿಂದ ಜೀವಿಸಲು ಇಚ್ಛಿಸುತ್ತಾರಾದರೂ ಅನೇಕ ಮಂದಿ ತಮ್ಮ ವಿರೋಧಿಗಳು ಸುಖದಿಂದಲೂ ಶಾಂತಿಯಿಂದಲೂ ಜೀವಿಸಲಿ ಎಂದು ಇಚ್ಛಿಸುವುದಿಲ್ಲ.

ಜನರು ಬೇರೆ ಬೇರೆ ರೀತಿಯ ಶಾಂತಿಯನ್ನು ಬಯಸು ತ್ತಾರೆಂಬುದು ಸಹ ಸತ್ಯವಾಗಿದೆ. ಉದಾಹರಣೆಗೆ, ಕೆಲವರು ತಮ್ಮ ಹೃದಯ ಮತ್ತು ಮನಸ್ಸಿನ ಶಾಂತಿಯನ್ನು ಮಾತ್ರ ಬಯಸುತ್ತಾರೆ.

ಕೆಲವರು ತಮ್ಮ ಕುಟುಂಬದಲ್ಲಿ ಶಾಂತಿಯನ್ನು ಆಶಿಸುತ್ತಾರೆ. ಬೇರೆ ಕೆಲವರು ನೆರೆಹೊರೆಯಲ್ಲಿ ಶಾಂತಿಯನ್ನು ಬಯಸುತ್ತಾರೆ. ಕೆಲವರು ತಮ್ಮ ಪಟ್ಟಣ ಅಥವಾ ನಗರದ ಶಾಂತಿ ಬಗ್ಗೆ ಕಾಳಜಿ ಹೊಂದಿರುತ್ತಾರೆ. ಬೇರೆ ಕೆಲವರು ತಮ್ಮ ದೇಶದಲ್ಲಿ ಶಾಂತಿ ಇರಲಿ ಎಂದು ಇಚ್ಛಿಸುತ್ತಾರೆ. ಈ ಜನರು ತಮಗೆ ಆಸಕ್ತಿ ಇರುವ ಸ್ಥಳಗಳ ಹೊರತು ಬೇರೆ ನಗರಗಳಲ್ಲಿ ಅಥವಾ ದೇಶಗಳಲ್ಲಿ ವಾಸಿಸುವವರ ಬಗ್ಗೆ ಯಾವ ಪರಿವೆಯನ್ನೂ ಹೊಂದಿರುವುದಿಲ್ಲ. ಲೋಕದ ಬೇರೆ ಪ್ರದೇಶಗಳಲ್ಲಿರುವ ಜನರು ಅನುಭವಿಸುವ ಕಷ್ಟನಷ್ಟಗಳ ಬಗ್ಗೆ ಅವರಿಗೆ ಯಾವ ಸಹಾನುಭೂತಿಯೂ ಪ್ರೀತಿಯೂ ಇರುವುದಿಲ್ಲ.

ಹಿಂದಿನ ಕಾಲದಲ್ಲಿ ವಿವಿಧ ಸಮಾಜಗಳು ಮತ್ತು ದೇಶಗಳು ಇಂದಿನ ಹಾಗೆ ಪರಸ್ಪರ ಸಂಬಂಧ ಜೋಡಿಸಿರಲಿಲ್ಲದುದರಿಂದ ಈ ರೀತಿಯ ಅನುಕಂಪಹೀನತೆ ಮತ್ತು ನಿರಾಸಕ್ತಿಯನ್ನು ಸಮರ್ಥಿಸ ಬಹುದಾಗಿತ್ತು. ಅವರ ಮಧ್ಯೆ ಇದ್ದ ಸಂಪರ್ಕ ಮಾಧ್ಯಮಗಳು ಸೀಮಿತವಾಗಿದ್ದವು. ಒಂದು ದೇಶದ ಸಮಾಚಾರ ಇನ್ನೊಂದು ದೇಶವನ್ನು ತಲುಪಲು ದೀರ್ಘಕಾಲ ಬೇಕಾಗುತ್ತಿತ್ತು. ಮಧ್ಯಾವಧಿಯಲ್ಲಿ ಈ ಸಮಾಚಾರ ಅಪ್ರಸ್ತುತವೂ ಸ್ಥಿತಿ ಬದಲಾವಣೆ ಹೊಂದಿದ್ದೂ ಆಗುತ್ತಿತ್ತು. ಆ ಕಾಲದಲ್ಲಿ ಅನ್ಯರ ದುಃಖವನ್ನು ತಕ್ಷಣ ಅನುಭವಿಸುವುದು ಮತ್ತು ದೂರಪ್ರದೇಶದ ಜನರಿಗೆ ನೆರವು ತಲುಪುವುದು ಬಹಳ ಕಷ್ಟಕರವಾಗಿತ್ತು. ಆದರೆ ಇಂದು ಲೋಕದ ಸ್ಥಿತಿ ಬೇರೆಯೇ ಆಗಿದೆ. ಅದು ಒಂದು ವಿಶ್ವ ಗ್ರಾಮವಾಗಿ ಮಾರ್ಪಟ್ಟಿದೆ. ಲೋಕವು ಒಗ್ಗೂಡಿದ್ದರೂ ದೂರದ ಮತ್ತು ಸಂಪರ್ಕದ ತಡೆಗಳು ನೀಗಿದ್ದರೂ ನಾವೆಲ್ಲರೂ ಪರಸ್ಪರ ಸಂಬಂಧ ಹೊಂದಿದ್ದೇವೆ ಎಂಬ ಭಾವನೆ ನಿರಾಕರಿಸಲ್ಪಡುತ್ತದೆ. ಉದಾಹರಣೆಗೆ ಹೇಳುವುದಾದರೆ, ಮಧ್ಯಪೂರ್ವ ದೇಶಗಳಲ್ಲಿ ಅಥವಾ ಆಫ್ರಿಕಾದ ದೇಶಗಳಲ್ಲಿ ನಡೆಯುವ ಘಟನೆಗಳು ಯುರೋಪ್ ಅಥವಾ ಉತ್ತರ ಅಮೇರಿಕಾವನ್ನು ಬಾಧಿಸದು ಎಂದು ಅನೇಕ ಜನರು ಭಾವಿಸುತ್ತಾರೆ. ಇದೇ ರೀತಿ ಆಸ್ಟ್ರೇಲಿಯಾ ಅಥವಾ ದೂರಪೂರ್ವದ ದೇಶಗಳ ಜನರು ಭಾವಿಸುವುದೇನೆಂದರೆ, ಅನ್ಯ ಪ್ರದೇಶಗಳಲ್ಲಿರುವ ಸಂಘರ್ಷ, ಉದಾಹರಣೆಗೆ ಉಕ್ರೈನ್ ಮತ್ತು ರಷ್ಯಾದ ಸಂಘರ್ಷ ತಮ್ಮ ಜೀವಿತವನ್ನು ಬಾಧಿಸದು ಎಂದು. ಸಾಮಾನ್ಯವಾಗಿ ಹೇಳುವುದಾದರೆ, ಜನರ ಅಭಿಪ್ರಾಯವೇನೆಂದರೆ ನಾವು ಇಂದು ಲೋಕದ ವಿವಿಧ ಭಾಗಗಳಲ್ಲಿ ಕಾಣುವ ಅಶಾಂತಿ ಮತ್ತು ಅಸ್ತವ್ಯಸ್ತತೆ ಅವು ತಲೆದೋರಿರುವ ಪ್ರದೇಶಗಳಿಗೆ ಸೀಮಿತವಾಗುವುದು ಮತ್ತು ಹೊರಗೆ ಹರಡಲಾರದು.

ಆದರೆ ಒಂದು ತೀವ್ರ ಸಮಸ್ಯೆ ಜನರ ಮನೋಭಾವನೆಯಲ್ಲಿ ಮಾರ್ಪಾಡನ್ನು ಉಂಟುಮಾಡುತ್ತಿದೆ. ಅದು ವಲಸೆ ಬರುವಿಕೆ ಮತ್ತು ವಲಸೆ ಬಂದವರೊಂದಿಗೆ ಭಾವೈಕ್ಯಕ್ಕೆ ಸಂಬಂಧಿಸಿದೆ. ವಿವಿಧ ದೇಶಗಳಿಂದ ವಲಸೆ ಬಂದ ಸಮುದಾಯಗಳಲ್ಲಿರುವ ಯುವಜನರಲ್ಲಿ ನಿರಾಶೆಯ ಮನೋಭಾವ ಮತ್ತು ಅಸ್ವಸ್ಥತೆ ಕಂಡುಬರುತ್ತಿದೆ. ಇಂತಹ ಯುವಕರಲ್ಲಿ ಹಲವರು ಉಗ್ರವಾದಿ ಗುಂಪುಗಳನ್ನು ಸೇರಿದ್ದಾರೆ. ಇದು ವಾಸ್ತವಿಕವಾದ ಭಯವನ್ನು ಉಂಟುಮಾಡಿದೆ. ಅಭಿವೃದ್ಧಿ ಹೊಂದಿದ ದೇಶಗಳು ಮನವರಿಕೆ ಮಾಡಿಕೊಂಡಿವೆ– ತಮ್ಮ ಯುವಜನರಲ್ಲಿ ಕೆಲವರು ಕೆಟ್ಟ ಪ್ರಭಾವಗಳಿಗೆ ಗುರಿಯಾಗಿ ದೇಶಕ್ಕೆ ಅಪಾಯಕಾರಿಗಳಾಗುತ್ತಿದ್ದಾರೆಂದು.

ಇದನ್ನು ತಡೆಯಲು ಅಭಿವೃದ್ಧಿ ಹೊಂದಿದ ದೇಶಗಳ ಸರಕಾರಗಳು ಏಶ್ಯನ್ ಮೂಲದ ಜನರ ಜೀವಿತದಲ್ಲಿ ನಿಯಂತ್ರಣಗಳನ್ನು ಹೇರಲು ಮುಂದಾಗಿವೆ. ಹೀಗೆ ಮಾಡಿದರೆ ಸ್ವದೇಶ ವಾಸಿಗಳ ಜೀವಿತ ಮತ್ತು ಸುರಕ್ಷತೆಗೆ ಖಾತರಿ ದೊರಕುವುದು ಎಂದು ಅವರು ಭಾವಿಸುತ್ತಾರೆ. ಆದರೆ ಇದು ಸರಿಯಾದ ಕ್ರಮವಲ್ಲ. ಅವಶ್ಯಕವಾದುದು ವಾಸ್ತವಿಕ ಮತ್ತು ಸಮಗ್ರ ಪರಿಹಾರವಾಗಿದೆ. ಇಸ್ಲಾಮ್ ಧರ್ಮದ ಪ್ರವಾದಿ ಇಂತಹ ಸಮಸ್ಯೆಗಳಿಗೆ ನೀಡಿದ ಪರಿಹಾರ ಮಾರ್ಗಗಳನ್ನು ನಾನು ವಿವರಿಸುವೆನು.

ಹಝ್ರತ್ ಪೈಗಂಬರರು(ಸ) ತಮ್ಮ ತೇಜೋಮಯ ಉಪದೇಶಗಳ ಮೂಲಕ ಶಾಂತಿ ಸ್ಥಾಪನೆಗೆ ಬಂಗಾರದ ಕೀಲಿಗೈ ನೀಡಿದ್ದಾರೆ. ಕೇವಲ ಲೌಕಿಕ ಅಭಿಲಾಷೆಗಳ ಮೇಲೆ ಮಾತ್ರ ಕೇಂದ್ರೀಕರಿಸುವುದರಿಂದ ಜಾಗತಿಕ ಶಾಂತಿ ಸ್ಥಾಪನೆಯಾಗದು ಎಂದು ಅವರು ಹೇಳಿದರು. ಅಸ್ತವ್ಯಸ್ತತೆಯಿಂದ ಮುಕ್ತರಾಗಲು ಮತ್ತು ಅಸೂಯೆ ಹಾಗೂ ನಿರಾಶೆಯ ಜ್ವಲಂತ ಅಗ್ನಿಯಿಂದ ರಕ್ಷಣೆ ಪಡೆಯಲು ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಒಂದೇ ಒಂದು ಮಾರ್ಗವಿದೆ ಎಂದು ಅವರು ಕಲಿಸಿದರು.

ಹಝ್ರತ್ ಪೈಗಂಬರರು(ಸ) ಹೇಳಿದರು: ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪಿತವಾಗಲು ಮಾನವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಿ ಅವನ ಮುಂದೆ ಬಾಗಬೇಕು. ಅವರು ಎಚ್ಚರಿಕೆ ನೀಡಿದರು: ಮುಂದೆ ಒಂದು ಕಾಲದಲ್ಲಿ ಮುಸ್ಲಿಮರು ತಮ್ಮ ಧರ್ಮದ ನೈಜ ತತ್ವಗಳನ್ನು ಮರೆತುಬಿಡುವರು ಮತ್ತು ಅವರು ದೇವನಿಗೆ ಅರ್ಹವಾದ ಲಕ್ಷ್ಯ ನೀಡಲಾರರು. ಅವರು ಕೇವಲ ನಾಲಗೆಯಿಂದ ತಮ್ಮ ವಿಶ್ವಾಸ ಸೂಚಿಸುವರು. ಇದೇ ರೀತಿ ಅನ್ಯ ಧರ್ಮಗಳ ಜನರು ಸಹ ದೇವನ ಅಸ್ತಿತ್ವದಲ್ಲಿ ನಂಬಿಕೆ ಹೊಂದಿರಲಾರರು. ಬೇರೆ ಕೆಲವರು ಧರ್ಮದಲ್ಲಿ ನಂಬಿಕೆ ಹೊಂದದವರೂ ದೇವನ ಅಸ್ತಿತ್ವವನ್ನೇ ನಿರಾಕರಿಸುವವರೂ ಆಗುವರು.

ಹಝ್ರತ್ ಪೈಗಂಬರರು(ಸ) ಪ್ರಸ್ತಾವಿಸಿದ ದೇವನು ವಿಶ್ವದ ಸೃಷ್ಟಿಕರ್ತನಾಗಿದ್ದಾನೆ. ಅವನ ಅನೇಕ ಗುಣವಿಶೇಷಗಳಲ್ಲಿ "ಸಲಾಮ್" – ಶಾಂತಿಯ ಉದ್ಭವ ಸ್ಥಾನ ಎಂಬ ಗುಣವಿದೆ. ಪವಿತ್ರ ಖುರ್‌ಆನ್ ಅಧ್ಯಾಯ 59 ವಚನ 24ರಲ್ಲಿ ಅಲ್ಲಾಹನು ಪೈಗಂಬರರಿಗೆ ಸೂಚಿಸಿದನು–ಸಾರ್ವಭೌಮನೂ ಪರಮ ಪರಿಶುದ್ಧನೂ ಶಾಂತಿಯ ಉದ್ಭವ ಸ್ಥಾನವೂ ಆಗಿರುವ ದೇವನಿಗೆ ಬಾಗಬೇಕೆಂದು ಲೋಕಕ್ಕೆ ತಿಳಿಸೆಂದು. ಸಲಾಮ್ ಪದದ ಇನ್ನೊಂದು ಅರ್ಥ, ಜಗತ್ತಿಗೆ ಶಾಂತಿ ದಯಪಾಲಿಸುವವನು ಮತ್ತು ಶಾಂತಿಯು ಉದ್ಭವಿಸುವ ಪ್ರಕಾಶ.

ಶಾಂತಿಯ ಮೂಲ ಉದ್ಭವ ಸ್ಥಾನವಾಗಿರುವ ದೇವನು ಎಲ್ಲ ಮಾನವರಿಗೆ ಶಾಂತಿ ಮತ್ತು ಸೌಹಾರ್ದವನ್ನು ಬಯಸುತ್ತಾನೆ. ತಂದೆ-ತಾಯಂದಿರು ಮನೆಯಲ್ಲಿ ತಮ್ಮ ಮಕ್ಕಳು ಜಗಳ ಮಾಡಿ ಮನೆಯ ಶಾಂತಿಯನ್ನು ಕೆಡಿಸುವುದನ್ನು ಬಯಸದಂತೆ ಸರ್ವಶಕ್ತನಾದ ಅಲ್ಲಾಹನು ತನ್ನ ಸೃಷ್ಟಿಗಳ ಮಧ್ಯೆ ಅಸ್ತವ್ಯಸ್ತತೆ ಮತ್ತು ಸಂಘರ್ಷ ಇಷ್ಟಪಡುವುದಿಲ್ಲ. ಉತ್ತಮ ಸ್ವಭಾವ ಗುಣಗಳನ್ನು ಹೊಂದಿ ಶಾಂತಚಿತ್ತವಾಗಿರುವ ಮಕ್ಕಳನ್ನು ತಂದೆ-ತಾಯಂದಿರು ಇಷ್ಟಪಡುತ್ತಾರೆ. ಇದೇ ರೀತಿ ದೇಶಗಳ ಸರಕಾರಗಳು ಶಾಂತಿ ಪ್ರಿಯರನ್ನು ಇಷ್ಟಪಡುತ್ತವೆ.

ನಮ್ಮ ಧರ್ಮ ಪ್ರಕಾರ, ಸರ್ವಶಕ್ತನಾದ ಅಲ್ಲಾಹನು ಆತ್ಮನಿಯಂತ್ರಣ ಹೊಂದಿದವರನ್ನೂ ಶಾಂತರಾಗಿರುವವರನ್ನೂ ಇಷ್ಟಪಡುತ್ತಾನೆ. ನಾವು ಈ ಅಂಶದ ಬಗ್ಗೆ ಚಿಂತಿಸುವುದಾದರೆ ನಮಗೆ ಸ್ಪಷ್ಟವಾಗುವುದೇನೆಂದರೆ, ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರು ಖಡ್ಗ ಬಳಸುವ ಜಿಹಾದ್ ಮಾಡಬೇಕೆಂದೂ ರಕ್ತಪಾತ ಮಾಡಬೇಕೆಂದೂ ಇಚ್ಛಿಸುತ್ತಾನೆಂದು ಭೀಕರವಾದಿಗಳಾದ ನಾಮಧಾರಿ ಮುಸ್ಲಿಮರು ವಾದಿಸುವುದು ಸಂಪೂರ್ಣ ತಪ್ಪಾಗಿದೆ.

ಹಝ್ರತ್ ಪೈಗಂಬರರ(ಸ) ಕಾಲದ ಯುದ್ಧಗಳನ್ನು ಅವುಗಳ ಸಂದರ್ಭವನ್ನು ಪರಿಶೀಲಿಸಿ ನೋಡಬೇಕು. ಇಸ್ಲಾಮ್ ಧರ್ಮದ ಆರಂಭದ ಕೆಲವು ವರ್ಷಗಳ ಕಾಲದಲ್ಲಿ ಹಝ್ರತ್ ಪೈಗಂಬರರು(ಸ) ಮತ್ತು ಅವರ ಅನುಯಾಯಿಗಳು ಅತ್ಯಂತ ಕ್ರೂರವಾಗಿ ಹಿಂಸಿಸಲ್ಪಟ್ಟರು ಮತ್ತು ಅವರ ವಿರುದ್ಧ ನಿರ್ದಯವಾಗಿ ವಿರೋಧಿಗಳು ವರ್ತಿಸಿದ್ದಾರೆಂಬುದು ವಿವಾದಾಸ್ಪದವಾದ ವಿಷಯವೇನೂ ಅಲ್ಲ. ಅನೇಕ ವರ್ಷಕಾಲ ಶತ್ರುಗಳ ಹಿಂಸಾಚಾರ ಸಹಿಸಿದ ನಂತರ ಪೈಗಂಬರರಿಗೆ ಶತ್ರುಗಳ ವಿರುದ್ಧ ಪ್ರತಿರೋಧಕ ಯುದ್ಧ ಮಾಡಲು ಅನುಮತಿಯನ್ನು ಅಲ್ಲಾಹನು ನೀಡಿದನು. ಪವಿತ್ರ ಖುರ್‌ಆನಿನ ಅಧ್ಯಾಯ 22 ವಚನ 40ರಲ್ಲಿ ಈ ಅನುಮತಿ ನೀಡಲಾಗಿದೆ. ಮುಸ್ಲಿಮರ ಮೇಲೆ ಅವಿಶ್ವಾಸಿಗಳು ಯುದ್ಧವನ್ನು ಹೇರಿದ ಕಾರಣ ಈ ಅನುಮತಿ ನೀಡಲಾಗಿದೆ ಎಂದೂ ಮುಸ್ಲಿಮರಿಗೆ ಪ್ರತಿರೋಧಕ ಯುದ್ಧ ಮಾಡದಿರಲು ಸಾಧ್ಯವಿಲ್ಲವೆಂದೂ ಅಲ್ಲಾಹನು ಸೂಚಿಸಿರುವನು.

ಈ ರೀತಿಯ ಪ್ರತಿಕ್ರಿಯೆ ನೀಡುವುದು ಏಕೆ ಅವಶ್ಯವಾಯಿತು ಎನ್ನುವುದರ ಬಗ್ಗೆ ವಚನ 41ರಲ್ಲಿ ಹೀಗೆ ಅಲ್ಲಾಹನು ಹೇಳಿರುವನು: ಮುಸ್ಲಿಮರನ್ನು ಅವರ ಮನೆಗಳಿಂದ ಕ್ರೂರಿಗಳಾದ ಅಕ್ರಮಿಗಳು ಹೊರಗೆ ಅಟ್ಟಿದರು. ದೌರ್ಜನ್ಯಗಾರರನ್ನು ತಡೆಯಲು ಅನುಮತಿ ನೀಡದಿದ್ದರೆ ಯಾರಿಗೂ ಶಾಂತಿಯಿಂದ ಜೀವಿಸಲು ಸಾಧ್ಯವಾಗುತ್ತಿರಲಿಲ್ಲ. ಮುಸ್ಲಿಮರು ಪ್ರತಿರೋಧಕ ಯುದ್ಧ ಮಾಡದಿರುತ್ತಿದ್ದರೆ ಅವರು, ಇತರ ಜನರು ಮತ್ತು ಬೇರೆ ಧರ್ಮದ ಜನರು ಸುರಕ್ಷಿತರಾಗಿ ಜೀವಿಸಲು ಸಾಧ್ಯವಾಗುತ್ತಿರಲಿಲ್ಲ. ಇದೇ ವಚನದಲ್ಲಿ ಅಲ್ಲಾಹನು ಹೀಗೆ ಸಹ ಹೇಳಿರುವನು: ಮುಸ್ಲಿಮರು ಪ್ರತಿರೋಧಾತ್ಮಕ ಯುದ್ಧ ಮಾಡದಿರುತ್ತಿದ್ದರೆ ಇಗರ್ಜಿಗಳೂ ಯಹೂದಿ ದೇವಾಲಯಗಳೂ ಇತರ ದೇವಾಲಯಗಳೂ ಮಸ್‌ಜಿದ್‌ಗಳೂ ಅವುಗಳಲ್ಲಿ ಜನರು ಸೇರಿ ದೇವನಾಮಸ್ಮರಣೆ ಮಾಡುತ್ತಿದ್ದರೂ ಶಾಂತಿ ಹರಡಲು ಮತ್ತು ಎಲ್ಲ ವಿಧ ಕೆಡುಕುಗಳನ್ನು ತಮ್ಮ ಹೃದಯಗಳಿಂದ ನಿವಾರಿಸಲು ಪ್ರಯತ್ನಿಸುತ್ತಿದ್ದರೂ ಸುರಕ್ಷಿತವಾಗುತ್ತಿರಲಿಲ್ಲ. ಆದುದರಿಂದ ಯುದ್ಧವನ್ನು ಹೇರಿದ ದೌರ್ಜನ್ಯಗಾರರ ಕೈಗಳನ್ನು ತಡೆಯಲು ಪ್ರತಿರೋಧಾತ್ಮಕ ಯುದ್ಧ ಮಾಡಲು ಮುಸ್ಲಿಮರಿಗೆ ಅನುಮತಿ ನೀಡಲಾಯಿತು. ಹೀಗೆ ಮಾಡದಿರುತ್ತಿದ್ದರೆ ದೇವಾರಾಧನೆಯ ಸ್ಥಳಗಳು ಮತ್ತು ಲೋಕಶಾಂತಿ ಸಂಪೂರ್ಣ ನಾಶವಾಗುತ್ತಿದ್ದವು.

ಹೀಗೆ ದೌರ್ಜನ್ಯವನ್ನು ಮತ್ತು ಅನ್ಯಾಯವನ್ನು ಕೊನೆಗೊಳಿಸಲು ಅಲ್ಲಾಹನು ಪೈಗಂಬರರಿಗೆ ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿ ನೀಡಿದ್ದನು. ಎಲ್ಲ ಮೂಲಭೂತ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಇಚ್ಛಿಸಿದವರನ್ನು ತಡೆಯಲು ಅಲ್ಲಾಹನು ಅನುಮತಿ ನೀಡಿದನು.

ಧಾರ್ಮಿಕ ಸ್ವಾತಂತ್ರ್ಯದ ಅಸ್ತಿಭಾರವನ್ನು ನಾಶಮಾಡಲು ಪ್ರಯತ್ನಿಸುವವರನ್ನು ತಡೆಯಲು ಅಲ್ಲಾಹನು ಅನುಮತಿ ನೀಡಿದನು. ಇಸ್ಲಾಮ್ ಧರ್ಮವನ್ನು ಮಾತ್ರವಲ್ಲ, ಎಲ್ಲ ಧರ್ಮಗಳನ್ನೂ ಎಲ್ಲ ನಂಬಿಕೆಗಳನ್ನೂ ಆಕ್ರಮಣಗಳಿಂದ ಪ್ರತಿರೋಧಿಸಲು ಅನುಮತಿ ನೀಡಲಾಯಿತು. ಮಸ್‌ಜಿದ್‌ಗಳು ಮತ್ತು ಇತರ ಧರ್ಮದ ಆರಾಧನಾಲಯಗಳು ಶಾಂತಿಯ ದೀಪಗಳಾಗಿ ನಿರ್ಮಿಸಲ್ಪಟ್ಟಿದ್ದು ಪ್ರೀತಿ ಮತ್ತು ಅನುಕಂಪದ ಉಪದೇಶ ಪ್ರಸಾರ ಮಾಡುವುದೇ ಅವುಗಳ ನಿರ್ಮಾಣೋದ್ದೇಶ ಹೊರತು ಉಗ್ರವಾದ ಮತ್ತು ದ್ವೇಷವನ್ನು ಯಾವುದೇ ರೀತಿಯಲ್ಲಿ ಹರಡುವುದಲ್ಲ.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 62ರಲ್ಲಿ ಅಲ್ಲಾಹನು ಪೈಗಂಬರರಿಗೆ ಎಂತಹ ಸುಂದರ ಉಪದೇಶ ಅವತೀರ್ಣಗೊಳಿಸಿರುವನೆಂದರೆ, ಯುದ್ಧ ಮತ್ತು ಸಂಘರ್ಷದ ಕಾಲದಲ್ಲಿ ಶಾಂತಿ ಮತ್ತು ಸುರಕ್ಷೆ ಸ್ಥಾಪಿಸುವ ಬಗ್ಗೆ ಅದು ಮುಸ್ಲಿಮರಿಗೆ ಮಾರ್ಗದರ್ಶನ ನೀಡುತ್ತದೆ. ಈ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ನಿಮ್ಮ ಶತ್ರುಗಳು ಶಾಂತಿಯ ಕಡೆಗೆ ವಾಲಿದರೆ ಮತ್ತು ಶಾಂತಿಯ ಕಡೆಗೆ ಕೈಚಾಚುವುದಾದರೆ ನೀನು ಸಹ ಅದಕ್ಕೆ ಒಪ್ಪಿಗೆ ನೀಡು ಮತ್ತು ಅಲ್ಲಾಹನ ಮೇಲೆ ಭರವಸೆಯನ್ನಿಡು ಮುಸ್ಲಿಮರಿಗೆ ಹೀಗೆ ಹೇಳಲಾಗಿದೆ: ಶತ್ರುಗಳು ತಮ್ಮನ್ನು ವಂಚಿಸಲು ಪ್ರಯತ್ನಿಸುತ್ತಾರೆಂದು ಭಾವಿಸದೆ ಅಲ್ಲಾಹನ ಮೇಲೆ ಭರವಸೆ ಇಡಬೇಕು. ಅಲ್ಲಾಹನು ಉಪದೇಶಿಸಿರುವುದೇನೆಂದರೆ, ಮುಸ್ಲಿಮರು ಯಾವಾಗಲೂ ಅನ್ಯರೊಂದಿಗೆ ಸಂಪರ್ಕ ಸ್ಥಾಪಿಸಲು ಪ್ರಯತ್ನಿಸಬೇಕು. ಧಾರ್ಮಿಕ ಭಾವನೆ ಇಲ್ಲದವರೊಂದಿಗೂ ನಾಸ್ತಿಕರೊಂದಿಗೂ ಇಸ್ಲಾಮಿನ ವಿರುದ್ಧ ಹಗೆತನ ಹೊಂದಿರುವವರೊಂದಿಗೂ ಸಾಧ್ಯವಿರುವಲ್ಲೆಲ್ಲ ಶಾಂತಿಯನ್ನು ಸ್ಥಾಪಿಸಲು

ಪ್ರಯತ್ನಿಸಬೇಕು.

ವಾಸ್ತವಿಕವಾಗಿ ಅಲ್ಲಾಹನು ಒತ್ತಿ ಹೇಳಿರುವುದೇನೆಂದರೆ ಲೋಕದಲ್ಲಿ ಸೌಹಾರ್ದ ಸ್ಥಾಪಿಸಲು ಶಾಂತಿಯನ್ನು ಸಂರಕ್ಷಿಸುವ ಸಂದರ್ಭವನ್ನು ಎರಡು ಕೈಗಳಿಂದಲೂ ಹಿಡಿದುಕೊಳ್ಳಬೇಕು. ಪವಿತ್ರ ಖುರ್‌ಆನ್ ಅಧ್ಯಾಯ 41 ವಚನ 35ರಲ್ಲಿ ಅಲ್ಲಾಹನು ಹಝ್ರತ್ ಪೈಗಂಬರರೊಂದಿಗೆ ಹೀಗೆ ಆಜ್ಞಾಪಿಸಿದ್ದಾನೆ: ಅತಿ ಉತ್ತಮವಾದ ಒಳಿತಿನ ಮೂಲಕ ಕೆಡುಕನ್ನು ನೀನು ತಡೆ. ಈ ಆಜ್ಞೆಯಲ್ಲಿ ಅಡಕವಾದ ಜಾಣ್ಮೆ ಏನೆಂದರೆ, ದ್ವೇಷವನ್ನು ಪ್ರೀತಿಯಿಂದ ಎದುರಿಸಿದರೆ ಆಗ ಎಂತಹ ಸಾಧ್ಯತೆ ಇರುವುದೆಂದರೆ ಹಗೆತನದ ಮತ್ತು ಒಡಕಿನ ತಳದಿಂದ ಪ್ರಾಮಾಣಿಕ ಸ್ನೇಹ ಮತ್ತು ಐಕ್ಯತೆ ಉದ್ಭವಿಸಬಹುದು. ಇದೆಷ್ಟು ಸುಂದರ ಉಪದೇಶವಾಗಿದೆ!

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಶಾಂತಿ, ರಾಜಿ, ಸುರಕ್ಷೆ ಮತ್ತು ಪ್ರೀತಿಯ ಉಪದೇಶಗಳನ್ನು ನೀಡಿದರೆಂಬ ಬಗ್ಗೆ ಅಸಂಖ್ಯಾತ ಉದಾಹರಣೆಗಳು ಖಂಡಿತವಾಗಿಯೂ ಇವೆ. ನಾನು ಕೇವಲ ಕೆಲವು ಉದಾಹರಣೆಗಳನ್ನು ಮಾತ್ರ ನೀಡಿದ್ದೇನೆ. ಇಸ್ಲಾಮ್ ಪ್ರತಿಪಾದಿಸುವ ದೇವನು, ಸರ್ವಶಕ್ತನಾದ ಅಲ್ಲಾಹನು ಶಾಂತಿ, ಸಹಾನುಭೂತಿ ಮತ್ತು ಪ್ರೀತಿಯನ್ನು ತನ್ನ ಸೃಷ್ಟಿಗಳಿಗೆ ಬಯಸುತ್ತಾನೆಂದು ಈ ಉದಾಹರಣೆಗಳಿಂದ ಸಾಬೀತಾಗುತ್ತದೆ. ಆದುದರಿಂದ ಇಸ್ಲಾಮ್ ಧರ್ಮ ತತ್ವಗಳು ಭೀಕರವಾದವನ್ನೂ ದ್ವೇಷವನ್ನೂ ಹರಡುತ್ತವೆ ಎಂದು ನಂಬುವವರು ತಮ್ಮ ತಪ್ಪು ಗ್ರಹಿಕೆಗಳನ್ನು ಮತ್ತು ಭಯವನ್ನು ತಮ್ಮ ಮನಸ್ಸಿನಿಂದ ಕೂಡಲೇ ನಿವಾರಿಸಬೇಕು. ಇಂದು ನಾವು ಕಾಣುವ ತಿಳಿಗೇಡಿತನದ ರಕ್ತಪಾತ ಮತ್ತು ಹಿಂಸೆಗೆ ಇಸ್ಲಾಮನ್ನು ದೂಷಿಸಬಾರದು. ಅವು ಮುಸ್ಲಿಮ್ ನಾಮಧಾರಿಗಳ ಕೃತ್ಯಗಳಾಗಿವೆ. ಅವರು ದ್ವೇಷ ಮತ್ತು ಸ್ವಾರ್ಥಭರಿತರಾಗಿದ್ದು ಅವರು ಇಸ್ಲಾಮಿನ ಮೂಲ ತತ್ವಗಳನ್ನು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಭ್ರಷ್ಟಗೊಳಿಸಿದ್ದಾರೆ.

ಸರ್ವಶಕ್ತನಾದ ಅಲ್ಲಾಹನ ವಾಗ್ದಾನ ಪ್ರಕಾರ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮಾತ್ರ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಲೋಕದಲ್ಲಿ ಪ್ರಚಾರ ಮಾಡುತ್ತಿದೆ. ಈ ಕಾರಣದಿಂದಲೇ ಪ್ರತಿ ವರ್ಷ ಲಕ್ಷಾಂತರ ಶಾಂತಿಪ್ರಿಯರಾದ ಜನರು – ಮುಸ್ಲಿಮರಿಂದ ಮತ್ತು ಮುಸ್ಲಿಮೇತರರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ಗೆ ಸೇರುತ್ತಾ ಇದ್ದಾರೆ. ಅವರು ಅಲ್ಲಾಹನ ಪ್ರೀತಿಯನ್ನು ಗಳಿಸಲು, ಶಾಂತಿ ಮತ್ತು ಸಮಾಧಾನ ಪಡೆಯಲು ಆಶಿಸಿ ಅಹ್ಮದೀ ಮುಸ್ಲಿಮರಾಗುತ್ತಾರೆ.

ತಮ್ಮ ಭಾವೋದ್ವೇಗಗಳನ್ನು ನಿಯಂತ್ರಿಸಲಾಗದೆ ಇಸ್ಲಾಮಿಗೆ ಅಪಕೀರ್ತಿ ಉಂಟು ಮಾಡುತ್ತಿರುವ ಉಗ್ರವಾದಿ ಸಂಘಟನೆಗೆ ಸೇರುವವರ ಹಾಗೆ ಈ ಜನರಲ್ಲ. ಇಂದಿನ ಕಾಲದಲ್ಲಿ ಇಸ್ಲಾಮ್ ಧರ್ಮ ಸಂಪೂರ್ಣವಾಗಿ ತಪ್ಪು ರೀತಿಯಲ್ಲಿ ಚಿತ್ರಿಸಲ್ಪಡುತ್ತಿರುವಾಗ ಅಹ್ಮದೀ ಮುಸ್ಲಿಮರಾದ ನಾವು ನಿರಾಶೆಗೊಂಡವರೂ ಭಗ್ನ ಹೃದಯರೂ ಆಗುವುದಿಲ್ಲ. ನಾವು ಜಯಶಾಲಿಗಳಾಗುವೆವು ಎಂದು ದೃಢವಾಗಿ ನಂಬುತ್ತೇವೆ. ಇಸ್ಲಾಮ್ ಧರ್ಮದ ವಾಸ್ತವಿಕತೆ ಏನೆಂದು ಲೋಕಕ್ಕೆ ಮನವರಿಕೆ ಆಗುವುದು. ಇಸ್ಲಾಮ್ ಧರ್ಮದ ಸುಂದರ ಉಪದೇಶಗಳನ್ನು ಎಲ್ಲ ಜನಾಂಗಗಳ ಜನರು ಅರ್ಥ ಮಾಡಿಕೊಳ್ಳುವರು.

ಈ ಮಾತುಗಳೊಂದಿಗೆ ನಾನು ನನ್ನ ಭಾಷಣ ಮುಕ್ತಾಯಗೊಳಿಸುತ್ತಿದ್ದೇನೆ. ನೀವು ಈ ದಿನ ನಮ್ಮೊಂದಿಗೆ ಸೇರಲು ಸಮಯಾವಕಾಶ ಮಾಡಿಕೊಂಡು ಬಂದು ನಾನು ಹೇಳಿದುದನ್ನು ಆಲಿಸಿರುವುದಕ್ಕಾಗಿ ನಾನು ಇನ್ನೊಮ್ಮೆ ನಿಮಗೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆ ಅರ್ಪಿಸುತ್ತೇನೆ. ನಿಮಗೆಲ್ಲರಿಗೂ ಅಲ್ಲಾಹನು ಅನುಗ್ರಹ ನೀಡಲಿ. ನಿಮಗೆಲ್ಲರಿಗೂ ಧನ್ಯವಾದಗಳು.


**ಪುಸ್ತಕ ಪರಿಚಯ**

**ಧರ್ಮದ ನಾಮದಲ್ಲಿ ರಕ್ತಪಾತ**

*ಗ್ರಂಥ ಕರ್ತ* : ಮಿರ್ಝಾ ತಾಹಿರ್ ಅಹ್ಮದ್

*ಪುಟಗಳು* : 185 *ಬೆಲೆ* : ರೂ. 50/-

**ಖತ್ಮೆ ನುಬುವ್ವತ್ - ಸತ್ಯಾಂಶಗಳು**

*ಗ್ರಂಥ ಕರ್ತ* : ಮಿರ್ಝಾ ಬಶೀರ್ ಅಹ್ಮದ್


*ಪುಟಗಳು* : 155 *ಬೆಲೆ* : ರೂ. 50/-

*ಸಂಪರ್ಕಿಸಿರಿ* :

**ಅಹ್ಮದಿಯಾ ಮುಸ್ಲಿಮ್ ಜಮಾಅತ್**

ನಂ.1, 3ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು - 560 027. Ph : 080 - 22246133

# ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸ್ಥಾನ



**1988ರ ಜಲ್ಸ ಸಾಲಾನ ಲಂಡನ್‌ನಲ್ಲಿ ಚತುರ್ಥ ಖಲೀಫರಾದ ಹಝ್‌ರತ್ ಮಿರ್ಝಾ ತಾಹಿರ್ ಅಹ್ಮದ್ ಮಹಿಳೆಯರನ್ನು ಸಂಭೋಧಿಸಿ ಮಾಡಿದ ಭಾಷಣ**

ಪ್ರಾಸ್ತಾವಿಕ ಪ್ರಾರ್ಥನೆಗಳ ನಂತರ ಖಲೀಫರು ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಓದಿದರು:

**ವ ಮನ್ ಯಅ್‌ಮಲ್ ಮಿನಸ್ಸಾಲಿಹಾತಿ ಮಿನ್ ಧ಼ಕರಿನ್ ಅವ್ ಉನ್‌ಸಾ ವ ಹುವ ಮೂಮಿನುನ್ ಫ಼ಉಲಾಇಕ ಯದ್‌ಖು಼ಲೂನಲ್‌ಜನ್ನತ ವಲಾ ಯುಝ್‌ಲಮೂನ ನಖೀರಾ.**

"ಸತ್ಯವಿಶ್ವಾಸಿಯಾಗಿರುವ ಪುರುಷನಾಗಲಿ ಸ್ತ್ರೀಯಾಗಲಿ, ಅವರು ಸತ್ಕರ್ಮಗಳನ್ನು ಮಾಡಿದರೆ, ಅವರು ಸ್ವರ್ಗವನ್ನು ಪ್ರವೇಶಿಸುವರು. ಖರ್ಜೂರದ ಬೀಜದ ಗೆರೆಯಷ್ಟು ಕೂಡ ಅನ್ಯಾಯ ಅವರಿಗೆ ಆಗಲಾರದು." (4 : 125)

ನಾನು ಇದರ ಮೊದಲು ಎರಡು ವಾರ್ಷಿಕ ಸಮ್ಮೇಳನಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿ ಇಸ್ಲಾಮಿನ ಉಪದೇಶಗಳನ್ನು ವಿವರಿಸಿರುವೆನು. ಇದು ಮೂರನೆಯ ಸಾರಿ ನಾನು ಈ ಬಗ್ಗೆ ಮಾತನಾಡುವುದಾಗಿದೆ. ಈ ಸಲ ನಾನು ಈ ವಿಷಯವನ್ನು ಮುಕ್ತಾಯಗೊಳಿಸುತ್ತೇನೆ. ನಾನು ನಿಮಗೆ ನೆನಪಿಸಲು ಬಯಸುವುದೇನೆಂದರೆ, ಇಸ್ಲಾಮ್ ಧರ್ಮವು ಮಹಿಳೆಗೆ ಒಂದು ವಿಶಿಷ್ಟ ಸ್ಥಾನ ನೀಡುತ್ತದೆ ಮತ್ತು ಅದು ಮಹಿಳೆಯರಿಗೆ ಯಾವ ರೀತಿಯಲ್ಲೂ ಅನ್ಯಾಯ ಮಾಡುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿ ನಾನು ನಿಮಗೆ ತಕ್ಕಮಟ್ಟಿಗೆ ವಿವರಣೆ ನೀಡಿದ್ದೇನೆ.

## ಮಹಿಳೆ ಮತ್ತು ಧರ್ಮ

ಕೆಲವು ಧರ್ಮಗಳಲ್ಲಿ ಮಹಿಳೆಯರ ಬಗ್ಗೆ ಯಾವ ಪ್ರಸ್ತಾಪವೂ ಇರುವುದಿಲ್ಲ. ಅವು ಕನ್‌ಫ್ಯೂಶಿಯಸ್ ಧರ್ಮ, ಶಿಂಟೋ ಧರ್ಮ, ಬೌದ್ಧ ಧರ್ಮ ಇತ್ಯಾದಿ. ಆದರೆ ಬೇರೆ ಕೆಲವು ಧರ್ಮಗಳಲ್ಲಿ ಮಹಿಳೆಯರ ಬಗ್ಗೆ ಪ್ರಸ್ತಾಪಿಸಲಾಗಿದ್ದರೂ ಬಹಳ ಹೀನೈಸುವ ರೀತಿಯಲ್ಲಿ ಪ್ರಸ್ತಾಪಿಸಲಾದುದರಿಂದ ಕೆಲವರು ಅಂತಹ ಧರ್ಮಗಳನ್ನು ದ್ವೇಷಿಸುತ್ತಾರೆ.

## ಹಿಂದೂ ಧರ್ಮ

ಧಾರ್ಮಿಕ ದೃಷ್ಟಿಯಲ್ಲಿ ಕೆಲವು ಸಲ ಮಹಿಳೆಯ ಸ್ಥಿತಿ ಹಿಂದೂ ಧರ್ಮದಲ್ಲಿ ಮೃಗಗಳಿಗಿಂತಲೂ ಕೀಳೆಂದು ವಿವರಿಸಲಾಗಿದೆ. ಹಿಂದುಗಳ ಚರಿತ್ರೆ ನಮಗೆ ಹೇಳುವುದೇನೆಂದರೆ, ದೀರ್ಘಕಾಲ ಮಹಿಳೆಯರಿಗೆ ಸಂಬಂಧಿಸಿ ಈ ಉಪದೇಶಗಳನ್ನು ಅನುಷ್ಠಾನಕ್ಕೆ ತರಲಾಯಿತು. ಈಗ ಹಿಂದೂಸ್ಥಾನದ ಸರಕಾರ ಹಿಂದುಗಳ ದುರಾಚಾರಗಳ ವಿರುದ್ಧ ಪದೇ ಪದೇ ಕ್ರಮ ಕೈಗೊಳ್ಳಬೇಕಾಗುತ್ತದೆ. ವಾಸ್ತವಿಕ ವಿಷಯವೇನೆಂದರೆ, ಸರಕಾರವನ್ನು ನಡೆಸುವವರಲ್ಲಿ ಬಹುತೇಕ ಜನರು ಹಿಂದುಗಳಾಗಿದ್ದಾರೆ. ಹಿಂದೂ ಮಹಿಳೆಯರಿಗೆ ವೇದಗಳನ್ನು ಓದುವ ಅಧಿಕಾರವಿರುವುದಿಲ್ಲ. ಯಾವುದೇ ಧಾರ್ಮಿಕ ಆಚಾರವನ್ನು, ಪುರುಷನ ಸೇವೆ ಪಡೆಯದೆ ಒಬ್ಬಳೇ ಕುಳಿತು ಪೂಜೆ ಮೊದಲಾದುವುಗಳನ್ನು ಮಾಡುವ ಅಧಿಕಾರವಿರುವುದಿಲ್ಲ.

## ಕ್ರೈಸ್ತ ಧರ್ಮ

ಮಹಿಳೆ ಧಾರ್ಮಿಕ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ಬೈಬಲ್ ತಡೆಯುತ್ತದೆ. ಚರ್ಚ್‌ನಲ್ಲಿ ಮಹಿಳೆ ಮೌನವಾಗಿರಬೇಕೆಂದು ಆಜ್ಞಾಪಿಸಲಾಗಿದೆ. ಚರ್ಚ್‌ನಲ್ಲಿ ಪ್ರಶ್ನೆ ಕೇಳುವುದು, ಜನರ ಮುಂದೆ ಪ್ರಶ್ನೆ ಕೇಳುವುದು ನಾಚಿಕೆಗೇಡಿನ ಕೆಲಸ ಎಂದು ಹೇಳಲಾಗಿದೆ. ಸಂತ ಪೌಲ ಹೀಗೆ ಹೇಳಿದರು:

"ದೇವಜನರ ಎಲ್ಲಾ ಸಭೆಗಳ ಮರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು; ಮಾತನಾಡುವುದಕ್ಕೆ ಅವರಿಗೆ ಅಪ್ಪಣೆಯಿಲ್ಲ; ಅವರು ಅಧೀನದಲ್ಲಿರಬೇಕು; ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯಲ್ಲಾ. ಅವರು ಏನಾದರೂ ತಿಳುಕೊಳ್ಳುವದಕ್ಕೆ ಅಪೇಕ್ಷಿಸಿದರೆ ಮನೆಯಲ್ಲಿ ತಮ್ಮ ಗಂಡಂದಿರನ್ನು ಕೇಳಲಿ. ಸ್ತ್ರೀಯರು ಸಭೆಯಲ್ಲಿ ಮಾತಾಡುವದು ನಾಚಿಕೆಗೆಟ್ಟ ಕೆಲಸವಾಗಿದೆ."

(೧ ಕೊರಿಂಥದವರಿಗೆ 14:34–35)

## ಇಸ್ಲಾಮ್ ಧರ್ಮ

ಇಸ್ಲಾಮ್ ಧರ್ಮ ಪ್ರಕಾರ ಮಹಿಳೆಯರು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುವುದಕ್ಕೆ ಪೂರ್ಣ ಅನುಮತಿ ನೀಡಲಾಗಿದೆ; ಪುರುಷರಿಗೆ ಸಮವಾದ ಹಕ್ಕುಗಳನ್ನು ನೀಡಿ ಸವಲತ್ತು ಗಳನ್ನು ಏರ್ಪಡಿಸಲಾಗಿದೆ. ಯಾವುದೇ ಸಾಮೂಹಿಕ ಆರಾಧನೆಯಲ್ಲಿ ಭಾಗವಹಿಸುವುದನ್ನು ಮಹಿಳೆಯರಿಗೆ ತಡೆಗಟ್ಟಲಾಗಿಲ್ಲ. ಆದರೆ ಮಹಿಳೆಯ ಶರೀರ ಪ್ರಕೃತಿಯನ್ನು ಗಮನದಲ್ಲಿಟ್ಟುಕೊಂಡು ಸಾಮೂಹಿಕ ಆರಾಧನೆಗಳಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಲಾಗಿಲ್ಲ. ಈ ಎಲ್ಲ ವಿಷಯಗಳನ್ನು ಇದರ ಮೊದಲು ಸವಿಸ್ತಾರವಾಗಿ ವಿವರಿಸಿದ್ದೇನೆ. ಆದುದರಿಂದ ಪುನರಾವರ್ತನೆ ಮಾಡುವ ಆವಶ್ಯಕತೆ ಇಲ್ಲ.

ಜಿಹಾದ್‌ನಲ್ಲಿ ಭಾಗವಹಿಸುವುದನ್ನು ಕಡ್ಡಾಯಗೊಳಿಸಲಾಗಿದ್ದರೂ ಮಹಿಳೆ ಅದರಲ್ಲಿ ಭಾಗವಹಿಸುವುದು ಆವಶ್ಯಕವಾಗಿಲ್ಲ. ಅವರಿಗೆ ಇಷ್ಟವಿದ್ದರೆ ಜಿಹಾದ್‌ನಲ್ಲಿ ಭಾಗವಹಿಸಬಹುದು.

ಒಮ್ಮೆ ಹಝ್ರತ್ ಆಯಿಶಾ ಸಿದ್ದೀಖ(ರ) ಹಝ್ರತ್ ಪೈಗಂಬರರೊಂದಿಗೆ(ಸ) ಕೇಳಿದರು: ಜಿಹಾದ್‌ನಲ್ಲಿ ಮಹಿಳೆಯರು ಭಾಗವಹಿಸುವುದು ಕಡ್ಡಾಯವಾಗಿದೆಯೋ? ಹಝ್ರತ್ ಪೈಗಂಬರರು(ಸ) ಹೌದು ಎಂದು ಹೇಳಿದರು. ಅವರು ಹೀಗೆ ವಿವರಿಸಿದರು: ಮಹಿಳೆಯರ ಜಿಹಾದ್ ಯುದ್ಧದ ಜಿಹಾದ್ ಅಲ್ಲ. ಹಜ್ಜ್, ಉಮ್ರ ಮತ್ತು ಇನ್ನಿತರ ಸತ್ಕರ್ಮಗಳಲ್ಲಿ ಭಾಗವಹಿಸುವುದು ಅವರ ಜಿಹಾದ್ ಆಗಿದೆ. (ಸುನನ್ ಇಬ್ನುಮಾಜ)

ನೆನಪಿಟ್ಟುಕೊಳ್ಳಿರಿ, ಯುದ್ಧದಲ್ಲಿ ಭಾಗವಹಿಸುವುದನ್ನು ಮಹಿಳೆಗೆ ಕಡ್ಡಾಯಗೊಳಿಸಿಲ್ಲ. ಆದರೆ ಜಿಹಾದ್ ಮಾಡುವ ಪುಣ್ಯ ಅವಳು ಬೇರೆ ರೀತಿ ಗಳಿಸುತ್ತಾಳೆ. ಒಬ್ಬ ಪುರುಷ ಹಜ್ಜ್ ಅನುಷ್ಠಿಸುವಾಗ ಅವನಿಗೆ ಹಜ್ಜ್ ಅನುಷ್ಠಾನದ ಪುಣ್ಯ ಸಿಗುತ್ತದೆ. ಆದರೆ ಮಹಿಳೆ ಹಜ್ಜ್ ಅನುಷ್ಠಿಸುವಾಗ ಮೇಲೆ ಉಲ್ಲೇಖಿಸಿದ ಹದೀಸ್ ಪ್ರಕಾರ, ಹಜ್ಜ್ ಅಲ್ಲದೆ ಜಿಹಾದ್ ಮಾಡಿದ ಪುಣ್ಯ ಸಹ ಸಿಗುತ್ತದೆ. ನಮಾಝುನ್ನು ಜಿಹಾದ್‌ಗೆ ಸಮವೆಂದು ಹೇಳಿಲ್ಲ. ಉಪವಾಸವನ್ನು ಜಿಹಾದ್‌ಗೆ ಸಮ ಎಂದು ಹೇಳಿಲ್ಲ. ಆದರೆ ಹಜ್ಜ್ ಮತ್ತು ಉಮ್ರವನ್ನು ಸ್ಪಷ್ಟವಾಗಿ ಜಿಹಾದ್‌ಗೆ ಸಮ ಎಂದು ಹೇಳಲಾಗಿದೆ. ಮಹಿಳೆ ಸ್ವತಃ ಹಜ್ಜ್‌ಗೆ ಹೊರಡುವುದು ಬಹಳ ಕಷ್ಟಕರ ಕೆಲಸವಾಗಿದೆ. ಮಹಿಳೆಯ ಜವಾಬ್ದಾರಿಗಳು ಮತ್ತು ಆಕೆಗೆ ಪ್ರಯಾಣ ಕಾಲದಲ್ಲಿ ಉಂಟಾಗಬಹುದಾದ ಅಪಾಯಗಳು ಎಷ್ಟು ಕಷ್ಟದಾಯಕವಾಗಿರುತ್ತವೆ ಎಂದರೆ ಪುರುಷನಿಗೆ ಆ ರೀತಿ ಇರುವುದಿಲ್ಲ. ಆದುದರಿಂದ ಹಜ್ಜ್ ಮತ್ತು ಉಮ್ರವನ್ನು ಮಹಿಳೆಯರ ಜಿಹಾದ್‌ಗೆ ಸಮವೆಂದು ಹೇಳಿರುವುದು ಬಹಳ ಸೂಕ್ಷ್ಮತೆಯಿಂದ ಕೂಡಿದ ಮಾತಾಗಿದೆ. ಹಝ್ರತ್ ಪೈಗಂಬರರು(ಸ) ಮಹಿಳೆಯರೊಂದಿಗೆ ಬೇರೆ ಕೆಲವರನ್ನು ಸೇರಿಸಿದ್ದಾರೆ. ವೃದ್ಧರಿಗೆ, ಮಕ್ಕಳಿಗೆ, ಬಲಹೀನರಿಗೆ ಮತ್ತು ಮಹಿಳೆಯರಿಗೆ ಹಜ್ಜ್ ಮತ್ತು ಉಮ್ರ ಜಿಹಾದ್ ಆಗಿದೆ. (ಸುನನ್ ನಸಾಯೀ)

ಹಝ್ರತ್ ಪೈಗಂಬರರ(ಸ) ಹೇಳಿಕೆಯಿಂದ ಮಹಿಳೆಗೆ ಹೆಚ್ಚಿನ ಶ್ರೇಷ್ಠತೆ ದೊರಕಿತು ಮತ್ತು ಶಕ್ತಿ ಲಭಿಸಿತು. ಕೇವಲ ಮಹಿಳೆ ಬಗ್ಗೆ ಮಾತ್ರ ಹೇಳಿದ್ದರೆ ಆಕೆಯ ವಿಶೇಷ ಬಲಹೀನತೆಯ ಭಾವನೆ ಉಂಟಾಗುತ್ತಿತ್ತು. ಹಝ್ರತ್ ಪೈಗಂಬರರು(ಸ) ಅವರೊಂದಿಗೆ ವೃದ್ಧರನ್ನೂ ಮಕ್ಕಳನ್ನೂ ಇತರ ಬಲಹೀನರನ್ನೂ ಸೇರಿಸಿದರು. ವೃದ್ಧರಿಗೂ ಮಕ್ಕಳಿಗೂ ಬಲಹೀನರಿಗೂ ಜಿಹಾದ್ ಮಾಡುವುದು ಕಡ್ಡಾಯವಲ್ಲ. ಮಹಿಳೆಗೂ ಜಿಹಾದ್ ಕಡ್ಡಾಯವಲ್ಲ. ಯಾರಿಗೆ ಜಿಹಾದ್ ಕಡ್ಡಾಯವಾಗಿಲ್ಲವೋ ಅವರಿಗೆ ಹಜ್ಜ್ ಜಿಹಾದ್‌ಗೆ ಸಮ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.

## ಮಹಿಳೆ ಅಧ್ಯಾಪಿಕೆ ಮತ್ತು ತರಬೇತಿಗಾರ್ತಿ

ಮಹಿಳೆ ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ವಿದ್ಯಾಭ್ಯಾಸ ಮತ್ತು ತರಬೇತಿ ನೀಡಲು ಇಸ್ಲಾಮ್ ಅನುಮತಿಸಿದೆ. ಇದು ಕ್ರೈಸ್ತ ಮಹಿಳೆಯರಿಗೆ ಅವರ ಧರ್ಮ ನೀಡದ ಹಕ್ಕಾಗಿದೆ. ಕ್ರೈಸ್ತರ ಚಿಕ್ಕ ಚಿಕ್ಕ ಪಂಗಡಗಳು ಮಹಿಳೆ ಧರ್ಮಗುರುವಾಗುವ ಹಕ್ಕು ನೀಡಿವೆಯಾದರೂ ಬಹುತೇಕ ಕ್ರೈಸ್ತರು ಇದನ್ನು ಆಕ್ಷೇಪಿಸುತ್ತಾರೆ. ಹೊಸ ಒಡಂಬಡಿಕೆ ಅವರಿಗೆ ಈ ಹಕ್ಕು ನೀಡಿಲ್ಲ ಎಂದು ಪ್ರತಿಪಾದಿಸುತ್ತದೆ.

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಅನ್ಸಾರ್ ಸ್ತ್ರೀಯರು ಬಹಳ ಉತ್ತಮರು. ಅವರು ಪ್ರಶ್ನೆ ಕೇಳುವ ಬಗ್ಗೆ ಮುಹಾಜಿರ್ ಸ್ತ್ರೀಯರ ಹಾಗೆ ನಾಚಿಕೆಪಡುವುದಿಲ್ಲ. ಅವರು ಹಝ್ರತ್ ಪೈಗಂಬರರೊಂದಿಗೆ ಪ್ರಶ್ನೆ ಕೇಳಿ ಉತ್ತರ ಪಡೆಯುತ್ತಾರೆ. ಆದುದರಿಂದ ಅವರು ಲೋಕಕ್ಕೆ ವಿದ್ಯೆ ಕಲಿಸುವವರಾಗಿದ್ದಾರೆ.

ಹದೀಸು ಗ್ರಂಥಗಳಲ್ಲಿ ಹೀಗೆ ವರದಿಯಾಗಿದೆ: ಕೆಲವು ಅನ್ಸಾರ್ ಸ್ತ್ರೀಯರು ಸ್ತ್ರೀ ಪುರುಷರ ದೇಹಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು. ಈ ಕಾರಣದಿಂದ ಹಝ್ರತ್ ಪೈಗಂಬರರ(ಸ) ಮಾರ್ಗದರ್ಶನದ ಭಾಗ್ಯವನ್ನು ಅಲ್ಲಾಹನ ದಯದಿಂದ ನಾವು ಗಳಿಸಿದ್ದೇವೆ.

ಪವಿತ್ರ ಖುರ್‌ಆನ್‌ನಲ್ಲಿ ಒಬ್ಬ ಮಹಿಳೆಯ ಬಗ್ಗೆ, ಅವಳು ತನ್ನ ಪತಿಯ ವಿರುದ್ಧ ಪದೇ ಪದೇ ದೂರುತ್ತಾ ಇದ್ದ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲಾಹನಿಂದ ಮಾರ್ಗದರ್ಶನ ದೊರಕುವ ತನಕ ಹಝ್ರತ್ ಪೈಗಂಬರರು(ಸ) ಆ ಮಹಿಳೆಯ ಪ್ರಶ್ನೆಗೆ ಉತ್ತರ ನೀಡಿರಲಿಲ್ಲ. ಅದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ:

"ತನ್ನ ಪತಿಯ ಬಗ್ಗೆ ನಿನ್ನೊಡನೆ ವಾಗ್ವಾದ ಮಾಡುವ ಹಾಗೂ ಅಲ್ಲಾಹನಿಗೆ ದೂರು ಸಲ್ಲಿಸುವ ಆಕೆಯ ಮಾತನ್ನು ಅಲ್ಲಾಹನು ಕೇಳಿದ್ದಾನೆ. ಅಲ್ಲಾಹನು ನಿಮ್ಮಿಬ್ಬರ ಸಂಭಾಷಣೆಯನ್ನೂ ಕೇಳುತ್ತಾನೆ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಕಾಣುವವನೂ ಆಗಿದ್ದಾನೆ." (58: 2)

ಆ ಮಹಿಳೆಯ ದೂರನ್ನು ಅಲ್ಲಾಹನು ಆಲಿಸಿದನು. ಹಝ್ರತ್ ಪೈಗಂಬರರಿಗೆ(ಸ) ಅವನು ಪರಿಹಾರ ಮಾರ್ಗ ಸೂಚಿಸಿದನು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಶಾಶ್ವತ ಮಾರ್ಗದರ್ಶನ ನೀಡಿದನು: ನಿಮಗೆ ನಿಮ್ಮ ಪತಿಯ ವಿರುದ್ಧ ದೂರು ಇದ್ದರೆ ನೀವು ಖಾಝಿಯ ಬಳಿಗೆ ಹೋಗಿ ನಿಮ್ಮ ಹಕ್ಕುಗಳನ್ನು ಪಡೆಯಲು ಪ್ರಯತ್ನಿಸಿರಿ. ಆದರೆ ಕೇವಲ ಖಾಝಿಯನ್ನು ಮಾತ್ರ ಅವಲಂಬಿಸಬೇಡಿರಿ. ನಿಮಗೊಬ್ಬ ದೇವನಿದ್ದಾನೆ. ಅವನು ನಿಮ್ಮ ದೂರನ್ನು ಗಮನಿಸುವನು. ನೀವು ಅವನ ಮೇಲೆ ಭರವಸೆಯನ್ನಿಟ್ಟು ಪ್ರಾರ್ಥಿಸಿದರೆ ನಿಶ್ಚಯವಾಗಿಯೂ ಅವನು ನಿಮ್ಮ ಪರವಾಗಿ ತೀರ್ಪು ನೀಡುವನು. ಆದರೆ ಶರತ್ತೇನೆಂದರೆ ನಿಮ್ಮ ದೂರು ಸತ್ಯಸಂಧವಾಗಿರ ಬೇಕು. ನಿಮ್ಮ ದೂರು ಸುಳ್ಳಾಗಿದ್ದರೆ ಅಲ್ಲಾಹನ ಸಹಾಯ ಪುರುಷನಿಗೆ ಸಿಗುವುದು. ಖಾಝಿ ಆತನ ವಿರುದ್ಧ ತೀರ್ಪು ನೀಡಿದರೂ ಹೀಗೆ ಸಂಭವಿಸುವುದು.

ಅನೇಕ ವರದಿಗಳಿವೆ. ಹದೀಸುಗಳನ್ನು ಅಧ್ಯಯನ ಮಾಡಿದರೆ ಮಹಿಳೆಗೆ ಎಂತಹ ಮಹತ್ವಪೂರ್ಣ ಸ್ಥಾನ ನೀಡಲಾಗಿದೆ ಎಂದು ಸ್ಪಷ್ಟವಾಗುವುದು. ಆದರೆ ಅದರ ಮೊದಲು ಪವಿತ್ರ ಖುರ್‌ಆನ್‌ನ ಎರಡು ವಚನಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಮಹಿಳೆಗೆ ಅಪ್ರತಿಮ ಸ್ಥಾನ ನೀಡಲಾಗಿದೆ ಎಂದು ನಿಮಗೆ ಅವುಗಳಿಂದ ತಿಳಿಯುವುದು. ಆ ವಚನಗಳು ಹೀಗಿವೆ:

"ಫಿರ್‌ಔನನ ಪತ್ನಿಯನ್ನು ವಿಶ್ವಾಸಿಗಳಿಗೆ ಉದಾಹರಣೆಯಾಗಿಯೂ ಅಲ್ಲಾಹನು ತೋರಿಸುತ್ತಾನೆ. ಆಕೆ ಪ್ರಾರ್ಥಿಸಿದಳು: 'ನನ್ನ ಪ್ರಭೂ, ನಿನ್ನ ಬಳಿಯಲ್ಲಿರುವ ಸ್ವರ್ಗದಲ್ಲಿ ನನಗೊಂದು ಮನೆಯನ್ನು ಒದಗಿಸು. ಫಿರ್‌ಔನ್ ಮತ್ತು ಅವನ ಕೃತ್ಯಗಳಿಂದ ನೀನು ನನ್ನನ್ನು ಪಾರುಮಾಡು.

ದುಷ್ಕರ್ಮಿಗಳಾದ ಜನರಿಂದಲೂ ನೀನು ನನ್ನನ್ನು ರಕ್ಷಿಸು'."

"ಇಮ್ರಾನ್ ಪುತ್ರಿ ಮರ್‌ಯಮನ್ನು ಸಹ (ಅಲ್ಲಾಹನು ವಿಶ್ವಾಸಿಗಳಿಗೆ ಉದಾಹರಣೆಯಾಗಿ ತೋರಿಸುತ್ತಾನೆ). ಆಕೆ ತನ್ನ ಪಾವಿತ್ರ್ಯವನ್ನು ಕಾಪಾಡಿಕೊಂಡಿದ್ದಳು. ಆಗ ನಾವು ಆಕೆಗೆ ನಮ್ಮ ವಾಣಿಯನ್ನು ಅರುಹಿದೆವು. ಆಕೆ ತನ್ನ ಪ್ರಭುವಿನ ವಚನಗಳನ್ನೂ ಗ್ರಂಥಗಳನ್ನೂ ಸತ್ಯಪಡಿಸಿದಳು. ಆಕೆ ಪೂರ್ಣವಾಗಿಯೂ ವಿಧೇಯಳಾಗಿದ್ದಳು." (66 : 12, 13)

ಮೇಲಿನ ವಚನಗಳ ಪೈಕಿ ಮೊದಲನೆಯ ವಚನದಲ್ಲಿ ಸತ್ಯವಿಶ್ವಾಸಿಗಳೆಲ್ಲರಿಗೂ (ಸ್ತ್ರೀಯರಿಗೂ ಪುರುಷರಿಗೂ) ಫಿರ್‌ಔನನ ಪತ್ನಿಯನ್ನು ಮಾದರಿಯನ್ನಾಗಿ ಸೂಚಿಸಲಾಗಿದೆ. ಫಿರ್‌ಔನನ ಪತ್ನಿಯನ್ನು ಸತ್ಯವಿಶ್ವಾಸಿಗಳಾದ ಪುರುಷರಿಗೂ ಸ್ತ್ರೀಯರಿಗೂ ಅನುಸರಣೆಗೆ ಯೋಗ್ಯ ಮಾದರಿಯನ್ನಾಗಿ ಹೇಳಲಾಗಿದೆ. ಪುರುಷನಿಗೆ ಸ್ತ್ರೀಯು ಮಾದರಿಯಾಗಲಾರಳು ಎಂದು ಹೇಳುವವರನ್ನು ಈ ವಚನ ಅಲ್ಲಗಳೆಯುತ್ತಿದೆ. ಪ್ರವಾದಿಯಾಗಿರದ ಒಬ್ಬ ಮಹಿಳೆಯನ್ನು ಮಾದರಿಯಾಗಿ ಸೂಚಿಸಲಾಗಿದೆ. ಫಿರ್‌ಔನನ ಪತ್ನಿ ಮಾದರಿಯಾಗುವುದು ಹೇಗೆ? ಪುರುಷರಿಗೆ ಏನು ಉಪದೇಶ ಈ ವಚನದಲ್ಲಿದೆ? ವಾಸ್ತವಿಕ ವಿಷಯವೇನೆಂದರೆ, ಪತಿ ಪತ್ನಿಯರ ಸಂಬಂಧ ಹೇಗಿತ್ತೆಂದರೆ ಪುರಾತನ ಕಾಲದಲ್ಲಿ ಪತ್ನಿ ಪತಿಯ ಅಧೀನಳಾಗಿ ಅವನ ಅಧಿಕಾರಕ್ಕೊಳಪಟ್ಟಿದ್ದಳು. ಪತಿ ರಾಜನಾದರೆ ಆತನ ಅಧಿಕಾರದ ದರ್ಪ ಬಗ್ಗೆ ಹೇಳಬೇಕಾಗಿಲ್ಲ. ಫಿರ್‌ಔನನ ಅಹಂಕಾರದ ಬಗ್ಗೆ ಬೈಬಲ್ ಮತ್ತು ಪವಿತ್ರ ಖುರ್‌ಆನ್‌ನಲ್ಲೂ ಚರಿತ್ರೆಯಲ್ಲೂ ವಿವರಣೆಗಳಿವೆ. ಅವನು ದೌರ್ಜನ್ಯಗಾರನೂ ದೇವ ವಿರೋಧಿಯೂ ತನ್ನನ್ನು ದೇವನೆಂದು ಹೇಳುವವನೂ ಆಗಿದ್ದನು. ಫಿರ್‌ಔನನ ಪತ್ನಿ ಸತ್ಯವಿಶ್ವಾಸಿನಿಯಾಗಿದ್ದುದರಿಂದ ಆಕೆಯ ವಿಶ್ವಾಸಕ್ಕೆ ಫಿರ್‌ಔನನಿಂದ ಅತ್ಯಂತ ಹೆಚ್ಚು ಅಪಾಯವಿತ್ತು. ಆಕೆ ತನ್ನ ವಿಶ್ವಾಸವನ್ನು ಇಂತಹ ವಿರೋಧೀ ಪರಿಸ್ಥಿತಿಯಲ್ಲಿ ರಕ್ಷಿಸಿದಳು. ಆಕೆ ತನ್ನ ವಿಶ್ವಾಸದ ಸಂರಕ್ಷಣೆಗೋಸ್ಕರ ದೈನ್ಯದಿಂದ ಅಲ್ಲಾಹನನ್ನು ಬೇಡಿಕೊಳ್ಳುತ್ತಾ ಇದ್ದಳು. ಅಂತಹ ಅಪಾಯಕರ ಸ್ಥಿತಿಯಲ್ಲೂ ಫಿರ್‌ಔನನ ಪತ್ನಿ ಆಸಿಯಾ ತಾನು ಹೊಂದಿದ ಸತ್ಯವಿಶ್ವಾಸವನ್ನು (ಮೂಸಾ ಪ್ರವಾದಿಯನ್ನು ನಂಬಿದುದನ್ನು) ಕಾಪಾಡಿದಳು.

ಸತ್ಯವಿಶ್ವಾಸಿಯ ಮೇಲೆ ಯಾರಾದರೂ ದೌರ್ಜನ್ಯಕಾರರು ಅಧಿಕಾರ ಚಲಾಯಿಸಿ ಬಲಾತ್ಕಾರದಿಂದ ಧರ್ಮತ್ಯಾಗ ಮಾಡಲು ಪ್ರಯತ್ನಿಸುವುದಾದರೆ ಫಿರ್‌ಔನನ ಪತ್ನಿಯಷ್ಟು ಧೈರ್ಯವನ್ನು ತೋರಿಸಬೇಕು. ಅದರೊಂದಿಗೆ ಅಲ್ಲಾಹನ ಮುಂದೆ ಸಹಾಯ ಕೇಳುತ್ತಾ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಪ್ರಾರ್ಥಿಸುತ್ತಾ ಇರಬೇಕು. ಈ ಉದಾಹರಣೆ ಮಹಿಳೆಯರಿಗೂ ಅನ್ವಯಿಸುತ್ತದೆ. ಕೆಲವು ಮಹಿಳೆಯರ ಪತಿಯಂದಿರು ಧರ್ಮತ್ಯಾಗ ಮಾಡಿ ತಮ್ಮ ಪತ್ನಿಯರ ಧರ್ಮ ಬದಲಾಯಿಸಲು ಪ್ರಯತ್ನಿಸುತ್ತಾರೆ. ಆದರೆ ಅವರು ಫಿರ್‌ಔನನಿಗಿಂತ ಹೆಚ್ಚು ಬಲಾತ್ಕಾರ ಮಾಡಲಾರರು. ಪತ್ನಿ ಪತಿಗೆ ಹೆದರಿ ಧರ್ಮವನ್ನು ಬದಲಾಯಿಸಬಾರದು. ಅಲ್ಲಾಹನೊಂದಿಗೆ ನಿರಂತರವಾಗಿ ಪ್ರಾರ್ಥಿಸುತ್ತಾ ಶಕ್ತಿ ಮತ್ತು ಸ್ಥಿರತೆಯನ್ನು ಬೇಡಿಕೊಳ್ಳಬೇಕು.

ಸತ್ಯವಿಶ್ವಾಸಿಗಳಿಗೆ ನೀಡಲಾದ ಇನ್ನೊಂದು ಉದಾಹರಣೆ ಹಝ್ರತ್ ಮರ್‌ಯಮರದ್ದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ: **ಫ ನಫಖ್‌ನಾ ಫೀಹಿ ಮಿನ್ ರೂಹಿನ–** "ನಾವು ಅವನಲ್ಲಿ ನಮ್ಮ ವಾಣಿಯನ್ನು ಊದಿದೆವು." ಈ ವಚನದಲ್ಲಿ ಅವಳಲ್ಲಿ (ಫೀಹಾ) ಎನ್ನುವುದಕ್ಕೆ ಪ್ರತಿಯಾಗಿ ಫೀಹಿ (ಅವನಲ್ಲಿ) ಎಂದು ಹೇಳಲಾಗಿದೆ. ಇದರ ಅರ್ಥ ನಾವು ಮರ್‌ಯಮ್‌ನಲ್ಲಿ ಅಲ್ಲ, ಅವಳ ಪುತ್ರನಲ್ಲಿ ನಮ್ಮ ವಾಣಿಯನ್ನು ಊದಿದೆವು ಎಂದಾಗಿದೆ. ಏಕೆಂದರೆ ಇಲ್ಲಿ 'ಹಿ' ಎಂಬ ಪುಲ್ಲಿಂಗವನ್ನು ಬಳಸಲಾಗಿದೆ. ಕೆಲವು ಪವಿತ್ರ ಖುರ್‌ಆನ್ ವ್ಯಾಖ್ಯಾನಗಾರರು ಇದರ ಅರ್ಥ ಮರ್‌ಯಮ್‌ರ ಹೊಟ್ಟೆಯ ಲ್ಲಿದ್ದ ಮಗನ ಬಗ್ಗೆ ಎಂದು ಹೇಳುತ್ತಾರೆ. ಆದರೆ ಬೇರೆ ಕಡೆ ಈ ವಿಷಯವನ್ನು ಫೀಹಾ (ಅವಳಲ್ಲಿ) ಎಂಬ ಪದ ಬಳಸಿ ಪ್ರಸ್ತಾಪಿಸಲಾಗಿದೆ. ಇದರ ಅರ್ಥ ನಾವು ಮರ್‌ಯಮ್‌ಳಲ್ಲಿ ಅಥವಾ ಈ ಮಹಿಳೆಯಲ್ಲಿ ನಮ್ಮ ವಾಣಿಯನ್ನು ಊದಿದೆವು ಎಂದಾಗುತ್ತದೆ. ಆದರೆ ಈ ರೀತಿ ವ್ಯತ್ಯಾಸ ಏಕೆ? ವ್ಯತ್ಯಾಸ ಏಕೆಂದರೆ ಈ ವಚನದಲ್ಲಿ ಸತ್ಯವಿಶ್ವಾಸಿಗಳಿಗೆ ಉದಾಹರಣೆಯಾಗಿ ಪ್ರಸ್ತಾಪಿಸಲಾಗಿದೆ. ಮರ್‌ಯಮಳ ಬಗ್ಗೆ ವಿವರಿಸುತ್ತಾ ಸತ್ಯವಿಶ್ವಾಸಿಯನ್ನು ಸರ್ವನಾಮದ ಕರ್ಮಪದವನ್ನಾಗಿ ಮಾಡಲಾಗಿದೆ. ಈ ವಚನದಲ್ಲಿ ಹೀಗೆ ಸೂಚಿಸ ಲಾಗಿದೆ: ಮರ್‌ಯಮಳ ವೈಶಿಷ್ಟ್ಯವನ್ನು ತನ್ನಲ್ಲಿ ಉಂಟುಮಾಡುವ ಸತ್ಯವಿಶ್ವಾಸಿಗೆ ಅವನು ಮರ್‌ಯಮಳ ಹಾಗಿರುವ ವೈಶಿಷ್ಟ್ಯವನ್ನು ಹೊಂದಿರುವ ಕಾರಣ ನಮ್ಮ ವಾಣಿಯನ್ನು ಊದುತ್ತೇವೆ. ತನ್ನ ಚಾರಿತ್ರ್ಯವನ್ನು ರಕ್ಷಿಸುತ್ತಾ ಪರಿಶುದ್ಧತೆಯನ್ನು ಗಳಿಸುವ ಸತ್ಯವಿಶ್ವಾಸಿಯ ಮೇಲೆ ಅಲ್ಲಾಹನ ಪ್ರೀತಿಯ ದೃಷ್ಟಿ ಆತನ ಪರಿಶುದ್ಧತೆ ಮೇಲೆ ಬೀಳುತ್ತದೆ. ಅದರಿಂದ ಆಧ್ಯಾತ್ಮಿಕ ಸಂತಾನ ಜನಿಸುತ್ತದೆ. ಅವನಲ್ಲಿ ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಿದ ಒಬ್ಬ ಮನುಷ್ಯನು ಜನಿಸುತ್ತಾನೆ. ಸತ್ಯವಿಶ್ವಾಸಿಗೆ ಮರ್‌ಯಮ್ ಹಾಗೆ ಪುತ್ರ ಜನಿಸಲಾರ. ಆದರೆ ಆಧ್ಯಾತ್ಮಿಕವಾಗಿ ಅವನೊಳಗಿಂದ ಅಲ್ಲಾಹನಿಗೆ ಪ್ರಿಯನಾದ ಒಬ್ಬ ಮನುಷ್ಯನು ಆಧ್ಯಾತ್ಮಿಕವಾಗಿ ಜನಿಸಬಲ್ಲನು.

ಈ ವಚನದ ಅರ್ಥ ಹೀಗೆ: ಒಬ್ಬ ಸತ್ಯವಿಶ್ವಾಸಿ ತನ್ನ ಆಶಾಭಿಲಾಷೆಗಳನ್ನು ಪೂರ್ಣವಾಗಿ ತ್ಯಜಿಸುವ ತನಕ ಆಧ್ಯಾತ್ಮಿಕ ಉನ್ನತಿಯನ್ನು ಗಳಿಸಲಾರನು. ಅನಂತರ ಅಲ್ಲಾಹನ ಗ್ರಂಥವನ್ನೂ ವಚನಗಳನ್ನೂ ಅಂಗೀಕರಿಸುತ್ತಾ ಹಝ್ರತ್ ಮರ್‌ಯಮ್ ಅನುಸರಿಸಿದ ರೀತಿಯನ್ನು ಅನುಸರಿಸಬೇಕು. ಸತ್ಯವಿಶ್ವಾಸಿ ಮರ್‌ಯಮರ ಹಾಗೆ ದೈನ್ಯತೆಯನ್ನು ಹೊಂದಿ ಪ್ರಾರ್ಥಿಸುತ್ತಾ ಇದ್ದರೆ ಅಲ್ಲಾಹನು ಅವನ ದೈನ್ಯತೆಯನ್ನು ಅಂಗೀಕರಿಸಿ ಅವನಿಗೆ ಆಧ್ಯಾತ್ಮಿಕವಾದ ಉನ್ನತ ಪದವಿಯನ್ನು ದಯಪಾಲಿಸುವನು.

ಹಝ್ರತ್ ವಾಗ್ದತ್ತ ಮಸೀಹ್[ಅ] ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

**ಬರ್‌ತರ್ ಹೋ ಹರ್ ಏಕ್‌ಸೇ ಅಪ್ನೇ ಖಯಾಲ್ ಮೇಂ ಶಾಯದ್**
**ಇಸೀ ಸೆ ದಾಖಿಲ್ ಹೋ ದಾರುಲ್ ವಿಸಾಲ್ ಮೇ**

"ನೀನು ನಿನ್ನನ್ನು ಬೇರೆ ಪ್ರತಿಯೊಬ್ಬನಿಗಿಂತ ಕಡಿಮೆ ಅಂತಸ್ತನ್ನು ಹೊಂದಿದವನಾಗಿ ಯೋಚಿಸು. ಪ್ರಾಯಶಃ ಇದನ್ನು ಅಲ್ಲಾಹನು ಮೆಚ್ಚಿ ನಿನ್ನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸಬಹುದು."

ಹಝ್ರತ್ ವಾಗ್ದತ್ತ ಮಸೀಹ್(ಅ) ಪವಿತ್ರ ಖುರ್‌ಆನ್ ವಿವರಿಸಿದ ಸತ್ಯವಿಶ್ವಾಸಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ಪವಿತ್ರ ಖುರ್‌ಆನಿನ ಈ ವಚನವು ಚೆನ್ನಾಗಿ ಅನ್ವಯಿಸುತ್ತದೆ. ಅದರ ಬಗ್ಗೆ ಅವರು ಹೀಗೆ ಹೇಳಿರುವರು: "ನನ್ನೊಳಗೆ ಎಂತಹ ಸ್ಥಿತಿ ಉಂಟಾಯಿತೆಂದರೆ, ಅದು ಮರ್‌ಯಮ್‌ರ ಸ್ಥಿತಿಯ ಹಾಗಿತ್ತು. ಈ ಮರ್‌ಯಮೀ ಸ್ಥಿತಿಯಿಂದ ನನ್ನೊಳಗೆ ಈಸಾ ಎಂಬ ಮಗು ಜನಿಸಿತು. ನಾನು ಇಬ್ನು ಮರ್‌ಯಮ್ (ಮರ್‌ಯಮ್ ಪುತ್ರ) ಆದೆನು."

ಈ ವಿಷಯವನ್ನು ಮನವರಿಕೆ ಮಾಡಲು ಸಾಮರ್ಥ್ಯವಿಲ್ಲದ ವಿವಿಧ ಕೊಳಕು ಮನೋಭಾವದ ಮತಪಂಡಿತರು ಕಠಿಣವಾಗಿ ಪರಿಹಾಸ ಮಾಡಿದರು. ಅವರು ಬಹಳ ಹೆಚ್ಚು ಹೆಚ್ಚು ಕೊಳಕು ಮಾತುಗಳನ್ನು ಆಡಿದರು. ನೀವು ಮರ್‌ಯಮ್ ಆದಾಗ ಏನಾಯಿತು. ಯಾವ ರೀತಿ ಮಗು ಹುಟ್ಟಿತು. ಅದು ಹೇಗೆ ಹುಟ್ಟಿತು ಮೊದಲಾದ ಅತ್ಯಂತ ತಿಳಿಗೇಡಿತನದ ಮತ್ತು ಕ್ರೂರ ವಿಡಂಬನೆಯ ಮಾತುಗಳನ್ನು ಹೇಳಿದರು. ಅವರು ಪವಿತ್ರ ಖುರ್‌ಆನ್ ಏನು ಹೇಳುತ್ತದೆ ಎಂದು ಯೋಚಿಸಲಿಲ್ಲ.

ಒಮ್ಮೆ ನನ್ನ ಪ್ರಶ್ನೋತ್ತರದ ಸಭೆಯಲ್ಲಿ ಕರಾಚಿಯ ಪ್ರತಿನಿಧಿಗಳ ಜೊತೆ ಒಬ್ಬ ಮೌಲವಿ ಸಹ ಬಂದಿದ್ದರು. ಬೇರೆ ಅಹ್ಮದಿಯೇತರರ ಮೇಲೆ ನನ್ನ ಪ್ರಶ್ನೋತ್ತರ ಸಭೆಯ ಪ್ರಭಾವ ಉಂಟಾಗುತ್ತದೆ ಎಂದು ಗಮನಿಸಿ ಆ ಮೌಲವಿ ಬಹಳ ಮುಗ್ಧನಾಗಿ ನಟಿಸಿ ಹೀಗೆ ಪ್ರಶ್ನೆ ಕೇಳಿದರು: ಮಿರ್ಝಾ ಸಾಹೇಬರ ಬೇರೆ ಮಾತುಗಳನ್ನು ಬಿಡಿರಿ. ಅವರು ಮರ್‌ಯಮ್ ಆದುದು ಹೇಗೆ. ಮಹಿಳೆಗೆ ಸಂಬಂಧಿಸಿ ಏನೆಲ್ಲ ಅವರಲ್ಲಿ ಸಂಭವಿಸಿತು. ಎಷ್ಟು ನೋವನ್ನು ಅನುಭವಿಸಿ ಮಗುವನ್ನು ಹೆತ್ತರು. ಆ ಎಲ್ಲ ವಿಷಯ ವಿವರಿಸಿರಿ ಎಂದು ಹೇಳಿದರು. ನಾನು ಹೀಗೆ ಉತ್ತರ ಹೇಳಿದೆ: ಮೌಲವಿ ಸಾಹೇಬ್, ನಿಮ್ಮನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ನಿಮಗೆ ಪವಿತ್ರ ಖುರ್‌ಆನ್‌ನ ಜ್ಞಾನವಿಲ್ಲದಿದ್ದರೂ ನೀವು ಆಕ್ಷೇಪಿಸುತ್ತಿರುವಿರಿ. ನೀವು ಸೂರತುತ್ತಹ್‌ರೀಮ್ ವಚನಗಳನ್ನು ಓದಿಲ್ಲವೇ, ನಿಮಗೆ ಪವಿತ್ರ ಖುರ್‌ಆನ್‌ನ ಬಗ್ಗೆ ವಿಶ್ವಾಸವಿಲ್ಲವೇ? ಪವಿತ್ರ ಖುರ್‌ಆನ್ ನಿಮಗೆ ಅಧಿಕಾರ ನೀಡಿಲ್ಲ. ನೀವು ಸತ್ಯವಿಶ್ವಾಸಿ ಆಗಬೇಕಾದರೆ ಇಬ್ಬರು ಮಹಿಳೆಯರ ಉದಾಹರಣೆಗಳನ್ನು ಅವಲಂಬಿಸಬೇಕಾದುದು ಕಡ್ಡಾಯವಾಗಿದೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ನೀವು ಮರ್‌ಯಮ್ ಆಗಲು ಸಾಧ್ಯವಿಲ್ಲವಾದರೆ ಫಿರ್‌ಔನನ ಪತ್ನಿಯಾಗಿ ಯಾದರೂ ತೋರಿಸಿರಿ. ನೀವು ಫಿರ್‌ಔನನ ಪತ್ನಿಯಾದರೆ ನಾನು ನಿಮ್ಮನ್ನು ಕೇಳುವೆನು – ನಿಮ್ಮ ಸಂಬಂಧ ಫಿರ್‌ಔನನ ಜೊತೆಗೆ ಹೇಗಿತ್ತು. ಏನೆಲ್ಲಾ ನಡೆಯಿತು? ನೀವು ಏನು ಉತ್ತರ ನೀಡುವಿರಿ. ನಿಮಗೆ ಓಡಿ ಹೋಗಲು ದಾರಿ ಇಲ್ಲ. ನೀವು, "ನಾನು ಸತ್ಯವಿಶ್ವಾಸಿ ಅಲ್ಲ" ಎಂದು ಮಾತ್ರ ಹೇಳಬಹುದು. ಇಲ್ಲದಿದ್ದರೆ ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೇಲೆ ಮಾಡಿದ ಆಕ್ಷೇಪವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

ನಾನು ಹೀಗೆ ಉತ್ತರ ನೀಡಿದಾಗ ಆ ಮೌಲವಿ ಪದೇ ಪದೇ ಹೇಳಿದರು: ಈಗ ಮಾತು ನಿಲ್ಲಿಸಿರಿ. ನನ್ನೊಂದಿಗೆ ಮಾತು ಬಹಳ ಆಯಿತು. ಜನರೆದುರು ನನ್ನನ್ನು ಅಪಮಾನಿಸಬೇಡಿರಿ. ವಾಸ್ತವಿಕ ವಿಷಯವೇನೆಂದರೆ, ಪವಿತ್ರ ಖುರ್‌ಆನ್ ಬಗ್ಗೆ ಜ್ಞಾನದ ಕೊರತೆ ಅಥವಾ ಸಂಪೂರ್ಣ ಅಜ್ಞತೆ ಕಾರಣ ಅಲ್ಲಾಹನ ಪರಿಶುದ್ಧ ದಾಸರನ್ನು ಆಕ್ಷೇಪಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಆಕ್ಷೇಪಕ್ಕೆ ಗುರಿಪಡಿಸಲಾಗುತ್ತಿದೆ. ಇಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ರೂಪದಲ್ಲಿ ಮಸೀಹರ ಪುನರ್‌ಜನ್ಮವಾಗಿದೆ. ಅದರಲ್ಲಿ ಒಬ್ಬ ಮಹಿಳೆಯ ಉಪಕಾರ ಸೇರಿದೆ. ಮರ್‌ಯಮರ ಉಪಕಾರ ಅದಾಗಿದೆ. ಮರ್‌ಯಮೀ ಸ್ಥಿತಿ ಪುನಃ ಉಂಟಾಗಿದೆ. ಆಗ ಮಸೀಹ್ ಜನಿಸಿದರು. ಮಹಿಳೆಗೆ ಎಷ್ಟು ವೈಭವಶಾಲಿ ಸ್ಥಾನ ನೀಡಲಾಗಿದೆ! ಆದರೆ ಜನರು ಹೇಳುತ್ತಾರೆ– ಇಸ್ಲಾಮಿನಲ್ಲಿ ಮಹಿಳೆಗೆ ಯಾವ ಸ್ಥಾನವೂ ಇಲ್ಲ. ಯಾವುದೇ ಪದವಿ ಇಲ್ಲ. ಹೀಗೆ ಹೇಳುವುದು ಕೇವಲ ಅರಿವಿಲ್ಲದಿರುವಿಕೆಯೂ ಅಜ್ಞಾನವೂ ಆಗಿದೆ.

### ಇಸ್ಲಾಮೀ ಉಪದೇಶಗಳ ಪ್ರಕಾರ ಮಹಿಳೆಯ ವಿವಿಧ ಸ್ಥಾನಗಳು

ಮಹಿಳೆಯರನ್ನು ಗೌರವಿಸುವುದನ್ನು ಅನಿವಾರ್ಯವನ್ನಾಗಿ ಮಾಡಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪುರುಷರಿಗೆ ಆದೇಶಿಸಿದ ಕೆಲವು ಹದೀಸುಗಳನ್ನು ನಾನು ಉಲ್ಲೇಖಿಸುವೆನು. ಗಣ್ಯರಾಗಲಿ, ಸಾಮಾನ್ಯರಾಗಲಿ ಈ ಹದೀಸನ್ನು ಅನುಸರಿಸಿ ವರ್ತಿಸಬೇಕಾಗಿದೆ. ಹಝ್ರತ್ ಪೈಗಂಬರರು(ಸ) ಹೇಳಿದರು: "ನಿಮ್ಮ ಸ್ವರ್ಗ ನಿಮ್ಮ ತಾಯಿಯ ಪಾದದ ಕೆಳಗೆ ಇದೆ." ಲೋಕದ ಯಾವುದೇ ಗ್ರಂಥದಿಂದ ಯಾವುದೇ ಪ್ರವಾದಿಯ ಇದಕ್ಕೆ ಸಮವಾದ ನುಡಿಯನ್ನು ಆಯ್ದು ತೆಗೆದುಕೊಳ್ಳಲು ಸಾಧ್ಯವಾಗದು. ಸತ್ಯವಿಶ್ವಾಸಿಗಳಾದ ಎಲ್ಲ ಪುರುಷರು ಮಹಿಳೆಯರ ಪಾದಗಳ ಮುಂದೆ ಬಾಗಲು ಮತ್ತು ಆ ಪಾದಗಳಡಿಯಿಂದ ತಮ್ಮ ಸ್ವರ್ಗವನ್ನು ಹುಡುಕಲು ನಿರ್ಬಂಧಿತ ರಾಗಿರುವರು. ನಾನು ಮೊದಲು ನಿರ್ಧರಿಸಿದುದು ಏನೆಂದರೆ ಲೋಕದ ದೊಡ್ಡ ಧರ್ಮಗಳಿಂದ, ನಾಗರಿಕತೆಗಳಿಂದ, ಸಂಸ್ಕೃತಿ ಗಳಿಂದ ಉದಾಹರಣೆಗಳನ್ನು ಆಯ್ಕೆ ಮಾಡಿ ತೋರಿಸಲಿಕ್ಕಾಗಿತ್ತು. ನಾನು ಸ್ವಲ್ಪ ಕೆಲಸವನ್ನು ಪ್ರಾರಂಭಿಸಿದೆನು. ಅನಂತರ ನಾನು ಯೋಚಿಸಿದೆ – ಇದರಿಂದ ನಾನು ಪ್ರತಿಪಾದಿಸುವ ವಿಷಯ ಬಹಳ ದೀರ್ಘವಾಗುವುದು. ನೀವು ಪವಿತ್ರ ಖುರ್‌ಆನ್‌ನ ಉಪದೇಶಗಳನ್ನು ಇತರ ಧರ್ಮಗಳ ಉಪದೇಶಗಳೊಂದಿಗೆ, ಮಹಿಳೆಗೆ ಸಂಬಂಧಿಸಿ ಹೋಲಿಸಿ ನೋಡುವುದಾದರೆ ಪ್ರತಿಯೊಬ್ಬ ನಿಷ್ಪಕ್ಷ ಪಾತಿಗೆ ಅವೆರಡರ ಮಧ್ಯೆ ಬಹಳ ವ್ಯತ್ಯಾಸ ಕಾಣಿಸುವುದು.

### ಮಹಿಳೆ ಮಗಳಾಗಿ

ನೀವು ಇಸ್ಲಾಮ್ ಹೊರತು ಅನ್ಯ ಧರ್ಮಗಳನ್ನು ಅಧ್ಯಯನ ಮಾಡುವುದಾದರೆ ಮೂರು ವಿಷಯಗಳು ನಿಮ್ಮ ಗಮನಕ್ಕೆ ಬರುವುವು. ಅವುಗಳಲ್ಲಿ ಮಗಳ ಬಗ್ಗೆ ಯಾವ ಪ್ರಸ್ತಾಪವೂ ಇರಲಿಕ್ಕಿಲ್ಲ. ಮಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದರೆ ಆಕೆಗೆ ಹಕ್ಕುಗಳನ್ನು ನೀಡದಿರುವ ಬಗ್ಗೆ ಅಥವಾ ಗೋವು, ಎಮ್ಮೆ, ಆಡು, ಕುರಿಗಳ ಹಾಗೆ ಮಗಳ ಬಗ್ಗೆ ಸಹ ಪ್ರಸ್ತಾಪಗಳನ್ನು ಕಾಣಬಹುದು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿರುವರು: "ತಾಯಂದಿರಿಗೆ ಅವಿಧೇಯ ರಾಗುವುದು, ಪರರ ಹಕ್ಕುಗಳನ್ನು ನೀಡುವುದರಿಂದ ಕೈಗಳನ್ನು ತಡೆದು ಸಂಪತ್ತನ್ನು ಅಪಹರಿಸುವುದು ಮತ್ತು ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುವುದನ್ನು ಅಲ್ಲಾಹನು ನಿಷಿದ್ಧಗೊಳಿಸಿದ್ದಾನೆ." (ಬುಖಾರಿ)

ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುವುದನ್ನು ನಿಷಿದ್ಧ ಗೊಳಿಸಿದ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾದ ಉಪದೇಶ ಇದೆ. ಈ ಹದೀಸು ಅದನ್ನು ಸ್ಪಷ್ಟಪಡಿಸುತ್ತದೆ. ಈಗ ಸಹ ಕೆಲವು ಪ್ರದೇಶಗಳಲ್ಲಿ, ಆಫ್ರಿಕದಲ್ಲಿ ಮತ್ತು ಬೇರೆ ಹಿಂದುಳಿದ ಪ್ರದೇಶಗಳಲ್ಲಿ ಈ ಸಂಪ್ರದಾಯ ಜಾರಿಯಲ್ಲಿದೆ. ಹೆಣ್ಣು ಮಕ್ಕಳು ತಂದೆ ತಾಯಂದಿರ ಸ್ವತ್ತೆಂದು ಪರಿಗಣಿಸಿ ಅವರೊಂದಿಗೆ ತಂದೆ ತಾಯಂದಿರು ವರ್ತಿಸುವ ರೀತಿಯ ಬಗ್ಗೆ ನಿಯಮ ಹಸ್ತಕ್ಷೇಪ ನಡೆಸುವುದಿಲ್ಲ. ಆದುದರಿಂದ ಇದು ಪುರಾತನ ಕಾಲದ ಆಚಾರವಲ್ಲ. ಈಗ ಸಹ ಇದು ನಡೆಯುತ್ತಾ ಇದೆ. ಈಗ ಸಹ ಅದನ್ನು ತಡೆಗಟ್ಟುವುದು ಆವಶ್ಯಕವಾಗಿದೆ.

ಅಬೂ ಸಯೀದ್ ಖುದ್‌ರೀ ವರದಿ ಮಾಡುತ್ತಾರೆ: "ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು– ಒಬ್ಬನಿಗೆ ಮೂರು ಹೆಣ್ಣು ಮಕ್ಕಳಿದ್ದರೆ ಅವನು ಅವರನ್ನು ಚೆನ್ನಾಗಿ ಪೋಷಿಸಿದರೆ ಮತ್ತು ಉತ್ತಮವಾಗಿ ವರ್ತಿಸಿದರೆ ಅವನಿಗೆ ಸ್ವರ್ಗ ಲಭಿಸುವುದು,"

(ಸುನನ್ ಅಬೂ ದಾವೂದ್)

ಇನ್ನೊಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: "ಒಬ್ಬನಿಗೆ ಮೂರು ಹೆಣ್ಮಕ್ಕಳು ಅಥವಾ ಮೂರು ಸಹೋದರಿಯರು ಇದ್ದರೆ, ಅವರನ್ನು ಚೆನ್ನಾಗಿ ಪೋಷಿಸಿದರೆ ಮತ್ತು ಉತ್ತಮವಾಗಿ ವರ್ತಿಸಿದರೆ ಅವನಿಗೆ ಸ್ವರ್ಗ ಲಭಿಸುವುದು." (ತಿರ್‌ಮಿದೀ) ಇನ್ನೊಂದು ಹದೀಸಿನಲ್ಲಿ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಸಹೋದರಿಯರ ಬಗ್ಗೆ ಹೇಳಲಾಗಿದೆ.

ಈ ಹದೀಸುಗಳ ಬಗ್ಗೆ ನನಗೆ ಸ್ವಲ್ಪ ಸಂಶಯವಿದೆ. ಮೂರು ಹುಡುಗಿಯರಿದ್ದರೆ ಸ್ವರ್ಗ; ನಾಲ್ಕು ಹುಡುಗಿಯರಿದ್ದರೆ, ಐದು ಹುಡುಗಿಯರಿದ್ದರೆ ಸ್ವರ್ಗ ಇಲ್ಲ ಎಂದು ಭಾವಿಸುವುದು ತಪ್ಪಾಗಿದೆ. ಹದೀಸು ಆಲಿಸಿದವನಿಗೆ ತಪ್ಪು ಗ್ರಹಿಕೆ ಆಗಿರಬಹುದು. ಕೆಲವು ಸಾರಿ ಹಝ್ರತ್ ಪೈಗಂಬರರು(ಸ) ಯಾವ ಮಹಿಳೆಯನ್ನು ಉದ್ದೇಶಿಸಿ ಹೇಳಿದರೋ ಆಕೆಗೆ ಮೂರು ಹೆಣ್ಣು ಮಕ್ಕಳು ಇದ್ದಿರಬಹುದು. ಆದುದರಿಂದ ಆ ಮಾತನ್ನು ಆಲಿಸಿದವನು ಗ್ರಹಿಸಿರಬಹುದು– ಮೂರು ಹೆಣ್ಣು ಮಕ್ಕಳನ್ನು ತರಬೇತುಗೊಳಿಸಿದರೆ ಸ್ವರ್ಗ ಸಿಗುವುದು; ಮಕ್ಕಳು ನಾಲ್ವರಾದರೆ ಸ್ವರ್ಗ ಇಲ್ಲ ಎಂದು ತಪ್ಪು ಗ್ರಹಿಸಿರಬಹುದು. ಇದು ಸರಿಯಲ್ಲ.

ಹಝ್ರತ್ ಆಯಿಶಾ(ರ) ಓರ್ವ ಸ್ತ್ರೀ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಪ್ರೀತಿಸುವುದನ್ನು ಕಂಡು ಆ ವಿಷಯ ಹಝ್ರತ್ ಪೈಗಂಬರರಿಗೆ(ಸ) ತಿಳಿಸಿದಾಗ ಅವರು ಹೇಳಿದರು: ಆಕೆಗೆ ಸ್ವರ್ಗ ನಿಶ್ಚಯವಾಗಿ ಸಿಗುವುದು. ಇದರಿಂದ ತಿಳಿಯುವುದೇನೆಂದರೆ, ಮೂರು ಹೆಣ್ಣು ಮಕ್ಕಳ ಸಂಭವ ಮತ್ತು ಎರಡು ಹೆಣ್ಣು ಮಕ್ಕಳ ಸಂಭವ ಬೇರೆ ಬೇರೆಯೇ ಆಗಿವೆ. ಮಕ್ಕಳು ಎರಡು ಅಥವಾ ಮೂರರ ಪ್ರಶ್ನೆ ಇಲ್ಲ. ಒಬ್ಬಳು ಮಗಳಿದ್ದರೆ ಕೂಡ ಅವಳಿಗೋಸ್ಕರ ಎಲ್ಲವನ್ನೂ ತ್ಯಾಗ ಮಾಡಿ ತರಬೇತಿ ನೀಡುವುದಾದರೆ ಅಲ್ಲಾಹನು ನಿಶ್ಚಯವಾಗಿಯೂ ಸ್ವರ್ಗ ನೀಡುವನು. ಒಂದು ಹದೀಸು ಹೀಗಿದೆ: ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರರಿಂದ(ಸ) ಆಲಿಸಿದೆ– ಒಬ್ಬನು ಹೆಣ್ಣು ಮಕ್ಕಳ ಮೂಲಕ ಪರೀಕ್ಷಿಸಲ್ಪಡುವಾಗ ಅವನು ಅವರೊಂದಿಗೆ ಉತ್ತಮವಾಗಿ ವರ್ತಿಸಿದರೆ ಅವನು ಆ ಮೂಲಕ ನರಕದಿಂದ ರಕ್ಷಿಸಲ್ಪಡುವನು. (ಬುಖಾರಿ)

ಇದರ ಅರ್ಥ ಹೆಣ್ಣು ಮಕ್ಕಳಿರುವವನು ಪ್ರತಿಯೊಬ್ಬ ಸ್ವರ್ಗಕ್ಕೆ ಹೋಗುವವನೆಂದಲ್ಲ. ಹೆಣ್ಣು ಮಕ್ಕಳ ಮೂಲಕ ಪರೀಕ್ಷೆಗೆ ಗುರಿಯಾದವನನ್ನು ಉದ್ದೇಶಿಸಲಾಗಿದೆ. ಕೆಲವು ಸಮಾಜಗಳಲ್ಲಿ ಹೆಣ್ಣು ಮಕ್ಕಳು ಹುಟ್ಟಿದಾಗ ತಂದೆ ನಾಚಿಕೆಯಿಂದ ಮುಖಕ್ಕೆ ಮುಸುಕು ಹಾಕುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಇದರ ಬಗ್ಗೆ ಹೇಳಲಾಗಿದೆ. ಇಂತಹ ವ್ಯಕ್ತಿ ನಿಶ್ಚಯವಾಗಿ ಪರೀಕ್ಷೆಗೆ ಗುರಿಯಾಗುತ್ತಾನೆ. ಅವನು ಅಲ್ಲಾಹನಿಗೋಸ್ಕರ ಲೋಕದ ಪರಿಹಾಸವನ್ನು ಕಡೆಗಣಿಸಿದರೆ, ಹೆಣ್ಣು ಮಕ್ಕಳಿಗೆ ತರಬೇತಿ ನೀಡಿ ಚೆನ್ನಾಗಿ ವರ್ತಿಸಿದರೆ ಅವನಿಗೆ ಸ್ವರ್ಗ ಸಿಗುವುದು. ಏಕೆಂದರೆ ಅವನು ಹೆಣ್ಣು ಮಕ್ಕಳನ್ನು ದೇವನ ಪ್ರೀತಿಗೋಸ್ಕರ ಪ್ರೀತಿಸಿದನು. ಹೆಣ್ಣು ಮಕ್ಕಳಿಗೆ ಸಂಬಂಧಿಸಿ ಅನೇಕ ಪರೀಕ್ಷೆಗಳನ್ನು ತಂದೆ ಅನುಭವಿಸಬೇಕಾಗುತ್ತದೆ.

## ಮಹಿಳೆಗೆ ಮದುವೆಯಾಗುವ ಅಧಿಕಾರ

ಇಸ್ಲಾಮ್ ಮಹಿಳೆಗೆ ಮದುವೆಗೆ ಸಮ್ಮತಿ ಅಥವಾ ವಿಸಮ್ಮತಿಯ ಅಧಿಕಾರ ನೀಡಿದ ಏಕ ಮಾತ್ರ ಧರ್ಮವಾಗಿದೆ. ಹದಿನಾಲ್ಕು ನೂರು ವರ್ಷಗಳ ಹಿಂದೆ ಮಹಿಳೆಯರಿಗೆ ಈ ಅಧಿಕಾರ ದೊರಕಿತು. ಮಹಿಳೆಯರ ಮೇಲೆ ಬಹಳ ದೌರ್ಜನ್ಯ ನಡೆಯುತ್ತಿದ್ದ ಕಾಲದಲ್ಲಿ ಈ ಅಧಿಕಾರ ಮಹಿಳೆಯರಿಗೆ ನೀಡಲಾಯಿತು.

ಹಝ್ರತ್ ಇಬ್ನು ಅಬ್ಬಾಸ್ ಹೀಗೆ ವರದಿ ಮಾಡುತ್ತಾರೆ: ಒಬ್ಬ ಕನ್ಯೆ ಪೈಗಂಬರರ(ಸ) ಬಳಿಗೆ ಬಂದು ಹೇಳಿದಳು – ನನ್ನ ತಂದೆ ನನ್ನ ವಿವಾಹ ನಡೆಸಿದ್ದಾರೆ. ಆದರೆ ನನಗೆ ಈ ವಿವಾಹ ಇಷ್ಟವಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಈ ವಿವಾಹವನ್ನು ಅಂಗೀಕರಿಸುವ ಅಥವಾ ರದ್ದುಗೊಳಿಸುವ ಅಧಿಕಾರ ನಿನಗಿದೆ. (ಸುನನ್ ಅಬೂ ದಾವೂದ್)

ಇನ್ನೊಂದು ಹದೀಸು ಬಹಳ ಆಸಕ್ತಿದಾಯಕವಾಗಿದೆ. ಒಬ್ಬನು ತನ್ನ ಮಗಳನ್ನು ಒಬ್ಬ ಶ್ರೀಮಂತನಿಗೆ ವಿವಾಹ ಮಾಡಿಕೊಟ್ಟನು. ಆದರೆ ಹುಡುಗಿ ಅದನ್ನು ಇಷ್ಟಪಡದೆ ಹಝ್ರತ್ ಪೈಗಂಬರರ(ಸ) ಬಳಿಗೆ ಬಂದು ಹೇಳಿದಳು– ನನಗೆ ಆ ಮನುಷ್ಯ ಇಷ್ಟವಿಲ್ಲ. ನನ್ನ ತಂದೆ ಸಂಪತ್ತನ್ನು ನೋಡಿ ವಿವಾಹ ಮಾಡಿಕೊಟ್ಟಿದ್ದಾರೆ. ಅದು ನನಗೆ ತೀರಾ ಇಷ್ಟವಿಲ್ಲದ ವಿಷಯವಾಗಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಸ್ವತಂತ್ರಳು. ನಿನಗಿಷ್ಟ ಬಂದಂತೆ ಮಾಡಬಹುದು. ಆಗ ಆ ಹುಡುಗಿ ಹೇಳಿದಳು: ನಾನು ನನ್ನ ತಂದೆಯನ್ನು ಕೋಪಗೊಳ್ಳುವಂತೆ ಮಾಡಲು ಬಯಸುವುದಿಲ್ಲ. ನಾನು ಮಹಿಳೆಯರ ಹಕ್ಕನ್ನು ಸ್ಥಾಪಿಸಲು ನಿಮ್ಮ ಬಳಿಗೆ ಬಂದೆನು. ಯಾರೂ ತನ್ನ ಮಗಳನ್ನು ಅವಳ ಇಷ್ಟಕ್ಕೆ ವಿರುದ್ಧವಾಗಿ ಮದುವೆ ಮಾಡಿಕೊಡಬಾರದು. ನೀವು ನನ್ನ ಹಕ್ಕನ್ನು ನನಗೆ ಸ್ಥಾಪಿಸಿ ನೀಡಿರುವಿರಿ. ನಾನು ನನ್ನ ತಂದೆಗೋಸ್ಕರ ನನ್ನ ಇಚ್ಛೆಯನ್ನು ಬಲಿಯರ್ಪಿಸಿ ವಿವಾಹವನ್ನು ಅಂಗೀಕರಿಸುತ್ತೇನೆ.

(ಮುಸ್‌ನದ್ ಅಹ್ಮದ್)

ಇನ್ನೊಂದು ಹದೀಸು ಪ್ರಕಾರ ವಿಧವೆ, ವಿವಾಹ ವಿಚ್ಛೇದಿತೆ, ಅಥವಾ ಕನ್ಯೆ ಇವರ ವಿವಾಹ ಅವರ ಸಮ್ಮತಿ ಪಡೆಯದೆ ನಡೆಸಬಾರದೆಂದು ಹಝ್ರತ್ ಪೈಗಂಬರರು(ಸ) ವಿಧಿಸಿದರು.

(ಬುಖಾರಿ)

ಅನಾಥೆಯರ ಬಗ್ಗೆ ಹಝ್‌ರತ್ ಪೈಗಂಬರ್(ಸ) ಹೇಳಿದರು: ಅನಾಥೆಯರ ವಿವಾಹ ಅವರ ಸಮ್ಮತಿ ಪಡೆಯದೆ ನಡೆಸಬಾರದು. (ದಾರು ಖುತ್ನಿ)

ಹಝ್‌ರತ್ ಪೈಗಂಬರರಿಗೆ(ಸ) ಅಧಿಕಾರವಿದ್ದರೂ ಅವರು ಯಾರಿಗೂ ವಿವಾಹವಾಗುವ ಆಜ್ಞೆ ನೀಡುತ್ತಿರಲಿಲ್ಲ. ಒಮ್ಮೆ ಒಬ್ಬ ಮಹಿಳೆ ಕೇಳಿದಳು: "ನೀವು ಆಜ್ಞಾಪಿಸುತ್ತಿರುವಿರೋ ಅಥವಾ ಸಲಹೆ ನೀಡುತ್ತಿರುವಿರೋ?" ಇದರ ಬಗ್ಗೆ ಇರುವ ಹದೀಸು ಆಸಕ್ತಿದಾಯಕವಾಗಿದೆ.

ಒಬ್ಬ ದಾಸಿ ಒಬ್ಬ ಸ್ವತಂತ್ರ ಯುವಕನನ್ನು ಮದುವೆ ಆದಳು. ಅವಳು ಮದುವೆಯ ನಂತರ ಸ್ವತಂತ್ರ ಮಹಿಳೆಯ ಅಧಿಕಾರ ಗಳಿಸಿದಳು. ಕೆಲವು ವರ್ಷಗಳ ನಂತರ ಆಕೆ ಹಝ್‌ರತ್ ಪೈಗಂಬರರ(ಸ) ಬಳಿಗೆ ಹೋಗಿ ವಿವಾಹ ವಿಚ್ಛೇದನೆಯನ್ನು ಬಯಸಿದಳು. ಹಝ್‌ರತ್ ಪೈಗಂಬರ್(ಸ) ಅನುಮತಿಸಿದಾಗ ಅವಳ ಗಂಡ ಅವಳನ್ನು ಹಿಂಬಾಲಿಸಿ ಅಳುತ್ತಾ ನನ್ನ ಬಳಿಗೆ ತಿರುಗಿ ಬಾ ಎಂದನು. ಹಝ್‌ರತ್ ಪೈಗಂಬರರು(ಸ) ಹೇಳಿದರು: ನೀನು ಅಲ್ಲಾಹನಿಗೆ ಭಯಪಡು. ಅವನು ನಿನ್ನ ಗಂಡನಾಗಿದ್ದ. ನಿನಗೆ ಅವನಿಂದ ಮಕ್ಕಳಾಗಿವೆ. ಅವನ ಮೇಲೆ ದಯೆದೋರು. ಆಗ ಆ ಮಹಿಳೆ ಮೇಲೆ ಉಲ್ಲೇಖಿಸಿದಂತೆ "ನೀವು ನನಗೆ ಆಜ್ಞಾಪಿಸು ತ್ತಿರುವಿರೋ ಅಥವಾ ಸಲಹೆ ನೀಡುತ್ತಿರುವಿರೋ" ಎಂದು ಕೇಳಿದಳು. ಆಗ ಹಝ್‌ರತ್ ಪೈಗಂಬರರು(ಸ) ಹೇಳಿದರು: ನಾನು ಆಜ್ಞಾಪಿಸುವುದಿಲ್ಲ; ಅವನ ಬಗ್ಗೆ ಶಿಫಾರಸು ಮಾತ್ರ ಮಾಡುತ್ತೇನೆ. ಆಗ ಆ ಮಹಿಳೆ ಆ ಉಪದೇಶವನ್ನು ಕೇಳಲು ನಿರಾಕರಿಸಿದಳು. (ಬುಖಾರಿ)

ಆ ಮಹಿಳೆ ಹಝ್‌ರತ್ ಪೈಗಂಬರರ(ಸ) ಶಿಫಾರಸನ್ನು ಅಂಗೀಕರಿಸದೆ ತಪ್ಪು ಮಾಡಿದ್ದರೂ ಹಝ್‌ರತ್ ಪೈಗಂಬರರು(ಸ) ಅವಳಿಗೆ ಸಲಹೆಯನ್ನು ಒಪ್ಪಲು ಆಜ್ಞೆ ನೀಡಲಿಲ್ಲ. ಅಲ್ಲಾಹನು ಮಹಿಳೆಗೆ ನೀಡಿದ ಹಕ್ಕಿಗೆ ಸಂಬಂಧಿಸಿ ಪೈಗಂಬರರು(ಸ) ಕೂಡ ಹಸ್ತಕ್ಷೇಪ ಮಾಡಲಾರರು ಎಂದು ಸಾಬೀತುಗೊಳಿಸಿದರು. ಇಸ್ಲಾಮಿನಲ್ಲಿ ಮಹಿಳೆಗೆ ನೀಡಿದ ಹಕ್ಕುಗಳಿಂದ ಅವಳನ್ನು ವಂಚಿತೆಯನ್ನಾಗಿ ಮಾಡಲು ಯಾರಿಗೆ ತಾನೆ ಅಧಿಕಾರವಿದೆ?

## ಮಹಿಳೆ ತಾಯಿಯಾಗಿ

ತಂದೆ ತಾಯಂದಿರ ಹಕ್ಕುಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅನೇಕ ವಚನಗಳಿವೆ. ಕೆಲವು ವಚನಗಳು ಮಹಿಳೆಗೆ ಪುರುಷನಿಗಿಂತ ಉನ್ನತ ಸ್ಥಾನ ನೀಡುತ್ತವೆ. ತಂದೆ ತಾಯಂದಿರ ಜೊತೆ ಉತ್ತಮ ವರ್ತನೆ ಬಗ್ಗೆ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಗಮನಾರ್ಹವಾಗಿದೆ:

"ಅವರಲ್ಲಿ ಒಬ್ಬರು ಅಥವಾ ಇಬ್ಬರು ಸಹ ನಿನ್ನ ಬಳಿ ವೃದ್ಧಾಪ್ಯ ಪಡೆದರೆ ನೀನು ಅವರೊಡನೆ ನಿಂದನೆಯ ಮಾತನ್ನು ಆಡಬಾರದು. ನೀನು ಅವರೊಂದಿಗೆ ಗದರಿಸಿ ಮಾತನಾಡಲೂಬಾರದು. ಅವರಿಬ್ಬರೊಡನೆಯೂ ನೀನು ಸೌಮ್ಯವಾಗಿಯೂ ಆದರದಿಂದಲೂ ಮಾತನಾಡು.

"ಕರುಣೆಯಿಂದ ಕೂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿ ಕೊಡು ಹಾಗೂ 'ನನ್ನ ಪ್ರಭೂ, ಅವರೀರ್ವರೂ ನನ್ನ ಬಾಲ್ಯ ಕಾಲದಲ್ಲಿ ನನ್ನನ್ನು ಸಾಕಿ ಸಲಹಿದಂತೆ ನೀನು ಸಹ ಅವರಿಗೆ ಕರುಣೆದೋರು' ಎಂದು ಪ್ರಾರ್ಥಿಸು." (17: 24, 25)

ಪವಿತ್ರ ಖುರ್‌ಆನ್‌ನ ಈ ವಚನಗಳಿಂದ ಹೀಗೆ ಸ್ಪಷ್ಟವಾಗುತ್ತದೆ: ಯಾವ ತಂದೆ ತಾಯಿ ಮಕ್ಕಳೊಂದಿಗೆ ಮೃದುವಾಗಿ ವರ್ತಿಸಿಲ್ಲವೋ ಮತ್ತು ಉತ್ತಮ ತರಬೇತಿ ನೀಡಿಲ್ಲವೋ ಆ ಮಕ್ಕಳು ಅವರಿಗೋಸ್ಕರ ಈ ರೀತಿ ಪ್ರಾರ್ಥಿಸಲಾರರು.

ನಮ್ಮ ಸಮಾಜದಲ್ಲಿ ಕೆಲವು ಕುಟುಂಬಗಳು ಒಟ್ಟಿಗೆ ವಾಸಿಸು ತ್ತಿರುತ್ತಾರೆ. ಮದುವೆಯಾದ ಮಕ್ಕಳೊಂದಿಗೆ ಮದುವೆಯಾಗದ ಮಕ್ಕಳು ಸಹ ವಾಸಿಸುತ್ತಾರೆ. ಅಲ್ಲಿ ಕೆಲವು ಎಂತಹ ಸೊಸೆಯರು ಇರುತ್ತಾರೆ ಎಂದರೆ ಅವರು ಪತಿಯ ತಾಯಿಯನ್ನು ಇಡೀ ದಿವಸ ನಿಂದಿಸುತ್ತಾರೆ. ಇಂತಹ ಮನೆಗಳಲ್ಲಿ ಜೀವಿಸುವ ಎಲ್ಲರ ಜೀವಿತ ಅಸಹ್ಯವಾಗಿರುತ್ತದೆ. ಇದೇ ರೀತಿ ಕೆಲವು ಮನೆಗಳಲ್ಲಿ ಅತ್ತೆಯಂದಿರು ತಪ್ಪುಗಾರರಾಗಿರುತ್ತಾರೆ. ಅವರು ಸೊಸೆಯ ಮೇಲೆ ದೌರ್ಜನ್ಯ ನಡೆಸುತ್ತಾರೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಇದಕ್ಕೆ ವಿರುದ್ಧವಾಗಿ ಕಾಣಿಸುತ್ತದೆ. ಮದುವೆಯಾದ ಮಕ್ಕಳು ತಮ್ಮ ತಂದೆ ತಾಯಂದಿರ ಬಗ್ಗೆ ಯೋಚಿಸುವುದೇ ಇಲ್ಲ. ಅವರು ಕೆಲವು ಹಬ್ಬ ದಿನಗಳಲ್ಲಿ ಹೊರತು ಮನೆಯೊಳಗೆ ಇಣುಕಿ ಸಹ ನೋಡುವುದಿಲ್ಲ. ಯಾವಾಗಲಾದರೂ ಮಕ್ಕಳು ಮನೆಗೆ ಬಂದರೆ ಮುದುಕರಾದ ತಂದೆ ತಾಯಂದಿರು ಸಂತೋಷಗೊಂಡು ನೀವು ನಮ್ಮೊಂದಿಗೆ ಬಹಳ ಪ್ರೀತಿಯಿಂದ ವರ್ತಿಸಿದಿರಿ. ನಮ್ಮ ಬಗ್ಗೆ ವಿಚಾರಿಸಿದಿರಿ ಎಂದು ಹೇಳುತ್ತಾರೆ. ಈ ರೀತಿಯ ವರ್ತನೆಗೆ ಅಪವಾದವಾಗಿ ವರ್ತಿಸುವವರೂ ಸಹ ನಿಶ್ಚಯವಾಗಿಯೂ ಇದ್ದಾರೆ. ಆದರೆ ತಂದೆ ತಾಯಂದಿರ ಬಗ್ಗೆ ನಿರ್ಲಕ್ಷ್ಯರಾಗಿರುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ತಂದೆ ತಾಯಂದಿರಲ್ಲಿ ಯಾರಾದರೂ ಹೆಚ್ಚು ರೋಗಿಗಳಾದರೆ ಅವರ ಆರೈಕೆ ಮಾಡದೆ ಅವರನ್ನು ಆಸ್ಪತ್ರೆಗಳಿಗೆ ಅಥವಾ ವೃದ್ಧಾಶ್ರಮಕ್ಕೆ ಪ್ರವೇಶಗೊಳಿಸಿ ಬಿಟ್ಟುಬಿಡುತ್ತಾರೆ. ಕೆಲವು ಅತ್ಯಂತ ನೊಂದ ತಾಯಿ ಅಥವಾ ತಂದೆ ತಮ್ಮ ದುಃಖಕರ ಸ್ಥಿತಿಯಿಂದ ಬೇಸರಗೊಂಡು ಅತ್ಮಹತ್ಯೆ ಮಾಡುತ್ತಾರೆ.

ಪವಿತ್ರ ಖುರ್‌ಆನ್ ತಂದೆ ತಾಯಂದಿರ ಹಕ್ಕುಗಳ ಬಗ್ಗೆ ಮಾತ್ರವಲ್ಲ ಅವರೊಂದಿಗೆ ಅತ್ಯಂತ ಗೌರವದೊಂದಿಗೆ ಮೃದುವಾಗಿ ವರ್ತಿಸಲು ಉಪದೇಶಿಸಿದೆ.

ಪವಿತ್ರ ಖುರ್‌ಆನ್‌ನ ಇನ್ನೊಂದು ವಚನ ಕೇವಲ ಉಪದೇಶವನ್ನಲ್ಲ ಆಜ್ಞೆಯನ್ನು ನೀಡಿದೆ. ಅದು ಹೀಗಿದೆ: "ಮನುಷ್ಯನು ತನ್ನ ತಂದೆ ತಾಯಂದಿರಿಗೆ ಒಳಿತು ಮಾಡಬೇಕೆಂದು ನಾವು ಆಜ್ಞಾಪಿಸಿದ್ದೇವೆ. ಅವನ ತಾಯಿ ಕಷ್ಟ ಅನುಭವಿಸಿ ಅವನನ್ನು ಗರ್ಭಹೊತ್ತಳು. ಹಾಗೂ ಕಷ್ಟ ಸಹಿಸಿ ಹೆತ್ತಳು. ಅವನ ಗರ್ಭಧಾರಣೆ ಮತ್ತು ಹಾಲೂಡಿಸುವ ಕಾಲಾವಧಿ (ಕನಿಷ್ಠ) ಮೂವತ್ತು ತಿಂಗಳುಗಳಾಗಿವೆ." (46: 16)

ಸಾತ್ವಿಕರಾದ ಮಕ್ಕಳು ತಮ್ಮ ತಾಯಿ ಮಾಡಿದ ಉಪಕಾರವನ್ನು

# ಅಹ್ಮದೀ ಮುಸ್ಲಿಮರ ವೈಶಿಷ್ಟ್ಯಗಳು

● ಮೌಲಾನ ಶೇರ್ ಅಲಿ

ವಾಗ್ದತ್ತ ಮಸೀಹರಾಗಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಆಗಮಿಸಿದುದು ಇಸ್ಲಾಮ್ ಧರ್ಮದ ನೈಜ ಉಪದೇಶಗಳನ್ನು ಲೋಕದಲ್ಲಿ ಪುನಃ ಸ್ಥಾಪಿಸಲಿಕ್ಕಾಗಿದೆ. ಮುಸ್ಲಿಮರ ನಂಬಿಕೆಗಳಲ್ಲಿ ಮತ್ತು ಆಚರಣೆಯಲ್ಲಿ ಉಂಟಾಗಿರುವ ತಪ್ಪುಗಳನ್ನು ತಿದ್ದುವುದು, ಇಸ್ಲಾಮ್ ಧರ್ಮದ ಸತ್ಯವನ್ನು ದೃಷ್ಟಾಂತಗಳ ಮೂಲಕ ತೋರಿಸಿಕೊಡುವುದು ಅವರ ಆಗಮನದ ಉದ್ದೇಶವಾಗಿತ್ತು. ಅವರು ದೈವಿಕ ದೃಷ್ಟಾಂತಗಳ ಮೂಲಕ ಇಸ್ಲಾಮ್ ಧರ್ಮದ ಸತ್ಯತೆಯನ್ನು ಪ್ರಕಟಿಸಿದರು. ಅವರನ್ನು ಹಕಮ್ ಮತ್ತು ಅದ್ಲ್ ಆಗಿ ಎಂದರೆ ನ್ಯಾಯನಿಷ್ಠನಾದ ನ್ಯಾಯಾಧೀಶನಾಗಿ ಅಲ್ಲಾಹನು ನೇಮಿಸಿದುದರಿಂದ ಮುಸ್ಲಿಮರ ವಿಶ್ವಾಸಗಳಲ್ಲಿ ಮತ್ತು ನಡೆವಳಿಕೆಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ತೀರ್ಪು ನೀಡುವ ಅಧಿಕಾರ ಅವರು ಹೊಂದಿರುವರು. ಅವರು ಇಸ್ಲಾಮ್ ಧರ್ಮದ ಸತ್ಯವನ್ನು ತನ್ನ ವೈಯಕ್ತಿಕ ಉದಾಹರಣೆ, ನಿರುತ್ತರಗೊಳಿಸುವ ಸಾಕ್ಷ್ಯಾಧಾರ ಮತ್ತು ದೃಷ್ಟಾಂತಗಳ ಮೂಲಕ ಸಾಬೀತುಗೊಳಿಸಿ ಲೋಕದಾದ್ಯಂತ ಇಸ್ಲಾಮ್ ಪ್ರಚಾರ ಮಾಡಲು ಕ್ರಮಗಳನ್ನು ಕೈಗೊಂಡರು.

ಅಹ್ಮದೀ ಮುಸ್ಲಿಮರು ತಮ್ಮನ್ನು ವಾಗ್ದತ್ತ ಮಸೀಹರ ಪವಿತ್ರ ಪ್ರಭಾವಗಳಿಗೆ ಅಧೀನಗೊಳಿಸಿದರು, ಧರ್ಮವನ್ನು ಸ್ಥಾಪಿಸುವ ದೈವಿಕ ದೃಷ್ಟಾಂತಗಳಿಗೆ ಸಾಕ್ಷ್ಯವಹಿಸಿದರು ಮತ್ತು ಅವರ ಚುಂಬಕೀಯ, ಆತ್ಮೋನ್ನತಿ ನೀಡುವ ವ್ಯಕ್ತಿತ್ವದೊಂದಿಗೆ ಸಂಬಂಧ ಸ್ಥಾಪಿಸಿ ಪರಿಶುದ್ಧಿಯನ್ನು ಗಳಿಸಿದರು. ಅವರಲ್ಲಿ ಬೃಹತ್ ಬದಲಾವಣೆ ಉಂಟಾಯಿತು. ಅವರು ದೇವನನ್ನು, ಅವನ ಪ್ರವಾದಿಗಳನ್ನು, ಅವನ ಗ್ರಂಥವನ್ನು ಕೇವಲ ನಾಲಗೆಯಿಂದ ಉಚ್ಚರಿಸಿ ನಂಬುವವರಾಗಿರಲಿಲ್ಲ. ಅವರು ಅನೇಕ ದೃಷ್ಟಾಂತಗಳನ್ನು ನೋಡಿದರು. ಅಲ್ಲಾಹನ ಅನೇಕ ಶಕ್ತಿ ಪ್ರದರ್ಶನಗಳನ್ನು ಕಂಡರು. ಆ ಮೂಲಕ ಅವರ ವಿಶ್ವಾಸ ಅತ್ಯಂತ ಬಲಿಷ್ಠವಾಯಿತು. ಅವರು ಸ್ವತಃ ದೇವನನ್ನು ಕಾಣುವ ಹಾಗೆ ಆಯಿತು. ವಾಗ್ದತ್ತ ಮಸೀಹರ ಉಪದೇಶಗಳ ಕಾರಣದಿಂದ ಪ್ರವಾದಿಗಳಲ್ಲಿ ಮತ್ತು ದೈವಿಕ ಸಂದೇಶವಾಣಿಗಳಲ್ಲಿ ವಿಶ್ವಾಸ ವರ್ಧಿಸಿತು. ಈ ಕಾರಣದಿಂದ ಅವರ ಸ್ವಭಾವ ಗುಣಗಳು ಉತ್ತಮವಾಗಿ ಪರಿವರ್ತನೆಗೊಂಡವು. ಅವರು ಆದ್ಯಕಾಲದ ಮುಸ್ಲಿಮರ ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಹಾಬರ (ಶಿಷ್ಯರ) ಹಾಗೆ ಆದರು. ಅವರು ಇಸ್ಲಾಮ್ ಧರ್ಮದ ಬಗ್ಗೆ ಜೀವಂತ ವಿಶ್ವಾಸ ಹೊಂದಿದರು. ಅವರು ಇಸ್ಲಾಮ್ ಧರ್ಮದಲ್ಲಿ ಜೀವಿಸಿ ಅದರ ಅನುಗ್ರಹಗಳನ್ನು ಅನುಭವಿಸಿದರು. ಆದುದರಿಂದ ಅಹ್ಮದೀ ಮುಸ್ಲಿಮರ ಮತ್ತು ಅಹ್ಮದಿಯೇತರ ಮುಸ್ಲಿಮರ ಮಧ್ಯೆ ಇರುವ ಅತ್ಯಂತ ದೊಡ್ಡ ವ್ಯತ್ಯಾಸವೇನೆಂದರೆ, ಅಹ್ಮದೀ ಮುಸ್ಲಿಮರು ಅಲ್ಲಾಹನ ಬಗ್ಗೆ ಅತ್ಯಂತ ದೃಢ ವಿಶ್ವಾಸ

---

**(ಹಿಂದಿನ ಪುಟದಿಂದ)**

ಎಂದೂ ಮರೆತುಬಿಡಬಾರದು. ತಾಯಿಯ ಮೂಲಕ ದೇವನ ಬಳಿಗೆ ತಲಪಬಹುದಾಗಿದೆ. ತಾಯಿಯ ಹಕ್ಕುಗಳನ್ನು ಈಡೇರಿಸಿ ಕೊಡುವ ಮಕ್ಕಳು ಅನಿವಾರ್ಯವಾಗಿ ಅಲ್ಲಾಹನ ಹಕ್ಕುಗಳನ್ನೂ ಈಡೇರಿಸುತ್ತಾರೆ. ತಾಯಿಯ ಹಕ್ಕುಗಳನ್ನು ಈಡೇರಿಸದವರು ದೇವನ ಹಕ್ಕುಗಳನ್ನು ಕೂಡ ಈಡೇರಿಸಲಾರರು. ಈ ವಿಷಯವನ್ನು ಹಝ್ರತ್ ಪೈಗಂಬರರು(ಸ) ವಿವರಿಸಿದ್ದಾರೆ. ಗರ್ಭಕ್ಕೆ ಸಂಬಂಧಿಸಿದ ಸಂಬಂಧಿಕರ ಹಕ್ಕುಗಳನ್ನು ಈಡೇರಿಸುವವರಿಗೆ ಪವಿತ್ರ ಖುರ್‌ಆನ್‌ನಲ್ಲೂ ಹದೀಸುಗಳಲ್ಲೂ ಶುಭವಾರ್ತೆಗಳು ಬಹಳ ಇವೆ. ಯಾರು **ರಹ್‌ಮೀ ರಿಶ್ತ** (ತಾಯಿಯ ಸಂಬಂಧವನ್ನು) ವಿಚ್ಛೇದಿಸುತ್ತಾನೋ ಅವನು ರಹ್ಮಾನನ (ಅಲ್ಲಾಹನ) ಸಂಬಂಧವನ್ನು ಕಡಿದು ಹಾಕುತ್ತಾನೆ.

ಮಹಿಳೆಯಿಂದಲೇ ನಿಮ್ಮ ಸೃಷ್ಟಿಯ ಪ್ರಾರಂಭವಾಗುತ್ತದೆ– ಪ್ರಪಂಚದ ಆರಂಭ ಅಲ್ಲಾಹನಿಂದ ಆರಂಭವಾದ ಹಾಗೆ. ನೀವು ಗರ್ಭದಲ್ಲಿ ಪೋಷಣೆ ಪಡೆದು ನಿಮ್ಮ ಪೂರ್ಣ ರೂಪವನ್ನು ಪಡೆಯುತ್ತೀರಿ– ಅಲ್ಲಾಹನ ರಹ್ಮಾನಿಯ್ಯತ್ ಪ್ರಪಂಚ ಸೃಷ್ಟಿಯನ್ನು ಪ್ರಾರಂಭಿಸಿ ಇಷ್ಟು ಉನ್ನತಿಗೆ ತಲಪಿಸಿದ ಹಾಗೆ. ಈ ಎರಡು ಸಂಬಂಧಗಳು ಪರಸ್ಪರ ಜೋಡಿಸಲ್ಪಟ್ಟಿವೆ. ಒಂದು ಸಂಬಂಧವನ್ನು ಮುರಿದರೆ ಇನ್ನೊಂದು ಸಂಬಂಧವೂ ಮುರಿಯಲ್ಪಡುವುದು.

ಕೊನೆಯದಾಗಿ ನಾನು ಜಮಾಅತಿಗೆ ಉಪದೇಶ ನೀಡುತ್ತೇನೆ– ಸಹೋದರ ಸಂಬಂಧಗಳನ್ನು ಸಂರಕ್ಷಿಸಲು ಸಿದ್ಧರಾಗಿರಿ. ನಾನು ಬಹಳ ದುಃಖದಿಂದ ಹೀಗೆ ಹೇಳಲು ಬಯಸುತ್ತೇನೆ: ನಮ್ಮ ಜಮಾಅತಿನಲ್ಲಿ ಎಂತಹ ಜನರಿದ್ದಾರೆಂದರೆ ಅವರು ಯಾವುದೇ ಸಂಕೋಚವಿಲ್ಲದೆ ಸಹೋದರ ಬಾಂಧವ್ಯಗಳನ್ನು ಕಡಿದು ಹಾಕುತ್ತಾರೆ. ಅವರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಾರೆ. ಹೀಗೆ ಮಾಡಿ ಅವರು ತಮ್ಮ ಜೀವನಾಡಿಗೆ ಕತ್ತಿಯೊಡ್ಡುತ್ತಾರೆ ಎಂದು ಯೋಚಿಸುವುದಿಲ್ಲ. ಲೌಕಿಕ ದುರಾಶೆಗಳಿಂದ ತುಂಬಿದವರಾಗಿ ರಹ್ಮಾನ್ ಆಗಿರುವ ಅಲ್ಲಾಹನೊಂದಿಗೆ ತಮ್ಮ ಸಂಬಂಧವನ್ನು ಶಾಶ್ವತವಾಗಿ ಕೊನೆಗೊಳಿಸುತ್ತಾರೆ. ಅವರು ಇಂದಲ್ಲವಾದರೆ ನಾಳೆ ತಮ್ಮ ಪ್ರಭುವಾದ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿಕ್ಕಿದೆ. ಯಾರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ "ರಹ್ಮಾನನಾದ ಪ್ರಭುವಿನ ದೃಷ್ಟಿ ಅವರ ಮೇಲೆ ಬೀಳಲಾರದು" ಎಂದು ಹೇಳಿರುವನೋ ಅಂತಹ ಜನರಲ್ಲಿ ಸೇರಲು ಈ ಜನರು ಇಷ್ಟಪಡುವರೋ?

ನೀವು ಅಲ್ಲಾಹನ ರಹಮ್ (ದಯೆ) ಪ್ರತೀಕ್ಷಿಸುವಿರಾದರೆ ರಹ್‌ಮೀ ಸಂಬಂಧಗಳನ್ನು (ರಕ್ತ ಸಂಬಂಧಗಳನ್ನು) ಸಂರಕ್ಷಿಸಿರಿ. ಲೌಕಿಕವಾದ ತಾತ್ಕಾಲಿಕ ಲಾಭಕ್ಕೋಸ್ಕರ ಇಂತಹ ಸಂಬಂಧಿಗಳ ಹಕ್ಕುಗಳನ್ನು ಕಡಿದು ಹಾಕಬೇಡಿರಿ. ಅಲ್ಲಾಹನು ನಿಮ್ಮ ಜೊತೆ ಯಾವಾಗಲೂ ಇರಲಿ. ರಹ್‌ಮೀ ಹಕ್ಕುಗಳನ್ನು (ಸಹೋದರ ಸಹೋದರಿಯರಿಗೆ ಸಂಬಂಧಿಸಿದ ಹಕ್ಕುಗಳನ್ನು) ಸ್ಥಾಪಿಸಿ ಕೊಡುವುದರಲ್ಲಿ ಅಹ್ಮದಿಯಾ ಜಮಾಅತ್ ಎಲ್ಲರಿಗೂ ಮಾದರಿಯನ್ನು ತೋರಿಸುವ ಹಾಗೆ ಆಗಲಿ – ಆಮೀನ್. ★

ಹೊಂದಿದ್ದಾರೆ, ಹಝ್ರತ್ ಪೈಗಂಬರರನ್ನು(ಸ) ಮತ್ತು ಪವಿತ್ರ ಖುರ್‌ಆನನ್ನು ಇಸ್ಲಾಮ್ ಧರ್ಮದ ಆದಿಕಾಲದಲ್ಲಿ ಸಹಾಬರು (ಪೈಗಂಬರರ ಶಿಷ್ಯರು) ಅನುಸರಿಸಿದ ಹಾಗೆ ಅನುಸರಿಸುವವರಾಗಿದ್ದಾರೆ. ಅವರಿಗೆ ಇಸ್ಲಾಮ್ ಹೊಸದಾಗಿ ಜನಿಸಿದಂತಾಗಿದೆ. ಅದು ತಾಜಾತನದಲ್ಲಿ, ಶಕ್ತಿ ಸ್ಫುರಿಸುವುದರಲ್ಲಿ, ಆಕರ್ಷಣೆಯಲ್ಲಿ ಸಹಾಬರನ್ನು ಪ್ರಭಾವಿಸಿದ ಹಾಗೆಯೇ ಪ್ರಭಾವಿಸುವುದಾಗಿದೆ.

ಅಹ್ಮದೀ ಮುಸ್ಲಿಮರ ಇನ್ನೊಂದು ವೈಶಿಷ್ಟ್ಯವೇನೆಂದರೆ, ವಾಗ್ದತ್ತ ಮಸೀಹರು ಇಸ್ಲಾಮ್ ಧರ್ಮದ ಸೇವೆ ಮಾಡಬೇಕೆಂಬ ಕರೆ ನೀಡಿದುದನ್ನು ಅವರು ಅಂಗೀಕರಿಸಿ ಅವರು ಇಸ್ಲಾಮಿನ ಸೇವೆಗೋಸ್ಕರ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕರೆಗೆ ಓಗೊಟ್ಟು ತಮ್ಮನ್ನು ಇಸ್ಲಾಮ್‌ಗೋಸ್ಕರ ಅರ್ಪಿಸಿದ ಸಹಾಬರ ಹಾಗೆ ಅರ್ಪಿಸುತ್ತಾರೆ. ಅಹ್ಮದಿಯೇತರ ಮುಸ್ಲಿಮರು ಇಸ್ಲಾಮ್ ಧರ್ಮ ಪ್ರಚಾರದ ತಮ್ಮ ಕರ್ತವ್ಯವನ್ನು ಮರೆತು ಲೌಕಿಕ ವ್ಯವಹಾರಗಳಲ್ಲಿ ಮಾತ್ರ ತಲ್ಲೀನರಾಗಿ ರಾಜಕೀಯ ಶಕ್ತಿ ಗಳಿಸಲು ಪ್ರಯತ್ನ ಮಾಡುತ್ತಿದ್ದಾರೆ.

ವಾಗ್ದತ್ತ ಮಸೀಹರ ಆಗಮನದ ಇನ್ನೊಂದು ಉದ್ದೇಶ ಧಾರ್ಮಿಕ ನಂಬಿಕೆಗಳಲ್ಲಿ ಉಂಟಾಗಿರುವ ತಪ್ಪುಗಳನ್ನು ತಿದ್ದುವುದಾಗಿದೆ. ವಾಗ್ದತ್ತ ಮಸೀಹರನ್ನು ಸಕಲ ಜನರ ಸುಧಾರಕನಾಗಿ ಕಳುಹಿಸಲ್ಪಟ್ಟುದರಿಂದ ಅವರು ಅನ್ಯ ಧರ್ಮಗಳ ಅನುಯಾಯಿಗಳ ತಪ್ಪುಗಳನ್ನು ಸಹ ತೋರಿಸಿ ಕೊಟ್ಟಿದ್ದರು. ಆದರೆ ನಾನು ಈಗ ಮುಸ್ಲಿಮರಲ್ಲಿ ತಲೆದೋರಿರುವ ತಪ್ಪುಗಳನ್ನು ಮತ್ತು ಅವುಗಳನ್ನು ವಾಗ್ದತ್ತ ಮಸೀಹರು ತಿದ್ದಿದ ಬಗ್ಗೆ ಮಾತ್ರ ವಿವರಿಸುವೆನು. ಅಹ್ಮದೀ ಮುಸ್ಲಿಮರು ವಾಗ್ದತ್ತ ಮಸೀಹರ ಉಪದೇಶಗಳನ್ನು ಅಂಗೀಕರಿಸಿದರು. ಆದರೆ ಅಹ್ಮದಿಯೇ ತರ ಮುಸ್ಲಿಮರು ತಮ್ಮ ತಪ್ಪುಗಳನ್ನು ತಿದ್ದಲು ನಿರಾಕರಿಸಿದರು. ಆದುದರಿಂದ ಅಹ್ಮದೀ ಮುಸ್ಲಿಮರ ಮತ್ತು ಅಹ್ಮದಿಯೇತರ ಮುಸ್ಲಿಮರ ನಂಬಿಕೆಗಳಲ್ಲೂ ಕರ್ಮಾನುಷ್ಠಾನಗಳಲ್ಲೂ ವ್ಯತ್ಯಾಸಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನವುಗಳಾಗಿವೆ:

1. ಒಂದನೆಯ ಮುಖ್ಯ ವ್ಯತ್ಯಾಸ ಅಲ್ಲಾಹನ ಗುಣವಿಶೇಷಗಳ ಬಗ್ಗೆಯಾಗಿದೆ. ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಅಲ್ಲಾಹನು ಆಲಿಸುವವನೂ ನೋಡುವವನೂ ಆಗಿರುವ ಹಾಗೆ ಮಾತನಾಡುವವನೂ ಆಗಿರುತ್ತಾನೆ. ಅಲ್ಲಾಹನು ತನ್ನ ಪ್ರವಾದಿಗಳೊಂದಿಗೂ ಸಂದೇಶವಾಹಕರೊಂದಿಗೂ ಹಿಂದೆ ಮಾತನಾಡುತ್ತಿದ್ದನೆಂದು ಅಹ್ಮದಿಯರೂ ಅಹ್ಮದಿಯೇತರರೂ ನಂಬುತ್ತಾರೆ. ಆದರೆ ಅಹ್ಮದಿಯೇತರರು ನಂಬುವುದೇನೆಂದರೆ, ಅರಬ್ ದೇಶದಲ್ಲಿ ಜನಿಸಿದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅಲ್ಲಾಹನು ಮಾತನಾಡಿದ ಕೊನೆಯ ಪ್ರವಾದಿ. ಅನಂತರ ಅಲ್ಲಾಹನ ಈ ಗುಣವಿಶೇಷ ಸ್ಥಗಿತಗೊಂಡಿತು ಮತ್ತು ಅಂತ್ಯಕಾಲದ ತನಕ ಹೀಗೆಯೇ ಮುಂದುವರಿಯುವುದು. ಆದರೆ ಅಹ್ಮದಿಯರು ಈ ವಿಶ್ವಾಸವನ್ನು ಅಂಗೀಕರಿಸುವುದಿಲ್ಲ. ಅಲ್ಲಾಹನ ಯಾವುದೇ ಗುಣವಿಶೇಷ ಸ್ಥಗಿತಗೊಳ್ಳುವುದಿಲ್ಲ ಎಂದು ಅಹ್ಮದಿಯರು ನಂಬುತ್ತಾರೆ. ಅಲ್ಲಾಹನು ತನ್ನ ಪರಿಶುದ್ಧ ದಾಸರೊಂದಿಗೆ ಹಿಂದಿನ ಕಾಲದಲ್ಲಿ ಮಾತನಾಡುತ್ತಿದ್ದ ಹಾಗೆಯೇ ಈಗಲೂ ಮಾತನಾಡುತ್ತಿದ್ದಾನೆ ಮತ್ತು ಮುಂದೆ ಅಂತ್ಯಕಾಲದ ತನಕ ಮಾತನಾಡುತ್ತಾ ಇರುವನು ಎಂದು ಅಹ್ಮದಿಯರು ನಂಬುತ್ತಾರೆ.

2. ಎರಡನೆಯ ವ್ಯತ್ಯಾಸ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸಂಬಂಧಿಸಿರುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಖಾತಮುನ್ನಬಿಯ್ಯೀನ್ ಎಂದು ಅಹ್ಮದಿಯರೂ ಅಹ್ಮದಿಯೇತರರೂ ನಂಬುತ್ತಾರೆ. ಆದರೆ ಈ ಪದದ ವ್ಯಾಖ್ಯಾನದ ಬಗ್ಗೆ ಅಭಿಪ್ರಾಯ ವ್ಯತ್ಯಾಸಗಳಿವೆ. ಅಹ್ಮದೀ ಮುಸ್ಲಿಮರು ನಂಬುವುದು ಹೀಗೆ: ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆಗಮನದ ನಂತರ ಅವರನ್ನು ನಂಬಿ ಅವರ ಅಂಗೀಕಾರದ ಮುದ್ರೆ ಪಡೆದವನೇ ಹೊಸದಾಗಿ ಪ್ರವಾದಿಯಾಗಿ ಬರಲು ಸಾಧ್ಯ; ಪ್ರವಾದಿತ್ವ ಪಡೆಯಲು ಸಾಧ್ಯ. ಆದರೆ ಅದು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸುವ ಮೂಲಕ ಮಾತ್ರ. ಹೊಸ ಶರೀಅತ್ ಗ್ರಂಥ ತರುವ ಪ್ರವಾದಿ ಮತ್ತು ಅಲ್ಲಾಹನಿಂದ ನೇರವಾಗಿ ನೇಮಿಸಲ್ಪಡುವ ಪ್ರವಾದಿ ಬರಲಿಕ್ಕಿಲ್ಲ. ಪ್ರವಾದಿತ್ವಕ್ಕಿರುವ ಎಲ್ಲ ಬಾಗಿಲುಗಳು ಮುಚ್ಚಲ್ಪಟ್ಟಿವೆ. ಆದರೆ ಹಝ್ರತ್ ಪೈಗಂಬರರ(ಸ) ಮೂಲಕ ಪ್ರವಾದಿತ್ವ ದೊರಕುವ ಬಾಗಿಲು ತೆರೆದಿದೆ. ಈ ಬಾಗಿಲಿನ ಮೂಲಕ ಮಾತ್ರ ಪ್ರವಾದಿತ್ವ ಲಭಿಸಲು ಸಾಧ್ಯ. ಇದೇ ಅರ್ಥದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: "ನನ್ನ ಅನಂತರ ಪ್ರವಾದಿ ಇಲ್ಲ." ಎಂದರೆ ಸ್ವತಂತ್ರ ಪ್ರವಾದಿ ಅಥವಾ ಗ್ರಂಥ ತರುವ ಪ್ರವಾದಿ ಬರಲಿಕ್ಕಿಲ್ಲ. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ವಾಗ್ದತ್ತ ಮಸೀಹರನ್ನು ಅಲ್ಲಾಹನ ಪ್ರವಾದಿ ಎಂದು ಹೇಳಿರುವರು. ಅಹ್ಮದಿಯೇತರರ ವಿಶ್ವಾಸ ಪ್ರಕಾರ ಪ್ರವಾದಿತ್ವದ ಬಾಗಿಲು ಶಾಶ್ವತವಾಗಿ ಮುಚ್ಚಲ್ಪಟ್ಟಿದೆ. ನೇರವಾಗಿ ಅಥವಾ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೂಲಕ ಯಾರೂ ಪ್ರವಾದಿತ್ವ ಗಳಿಸಲಾರರು. ಈ ನಂಬಿಕೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅಪಮಾನಕರವೆಂದು ಅಹ್ಮದಿಯರು ನಂಬುತ್ತಾರೆ. ಅಹ್ಮದಿಯೇತರರು ಹೇಳುವುದರ ಅರ್ಥವೇನೆಂದರೆ, ಅಲ್ಲಾಹನ ಅತ್ಯಂತ ದೊಡ್ಡ ಅನುಗ್ರಹವಾದ ಪ್ರವಾದಿತ್ವವನ್ನು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಕೊನೆಗೊಳಿಸಿದರು. ಅಹ್ಮದಿಯರು ಹೇಳುವುದೇನೆಂದರೆ, ಪವಿತ್ರ ಖುರ್‌ಆನ್ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಗಳಿಗೆ ಪ್ರವಾದಿತ್ವ ಗಳಿಸುವ ಮಾರ್ಗ ಈಗಲೂ ತೆರೆದಿದೆ.

3. ಮೂರನೆಯ ವ್ಯತ್ಯಾಸ ಸಾಮಾನ್ಯವಾಗಿ ಎಲ್ಲ ಪ್ರವಾದಿಗಳಿಗೆ ಸಂಬಂಧಿಸಿದ್ದಾಗಿದೆ. ಪವಿತ್ರ ಖುರ್‌ಆನ್‌ನ ಉಪದೇಶಗಳನ್ನು ಅನುಸರಿಸಿ, ಬಹಳ ಸಂಖ್ಯೆಯ ಜನರು ತಮ್ಮ ದೈವಿಕ ದೂತರೆಂದೂ ಅವತಾರಗಳೆಂದೂ ಗೌರವಿಸುವ ಮಹಾನುಭಾವರನ್ನು ಪ್ರವಾದಿಗಳೆಂದು ಅಹ್ಮದಿಯರು ಗೌರವಿಸುತ್ತಾರೆ. ಈ ಕಾರಣದಿಂದ ಅಹ್ಮದಿಯರು ಶ್ರೀಕೃಷ್ಣ ಮತ್ತು ಶ್ರೀರಾಮರನ್ನು ಪ್ರವಾದಿಗಳೆಂದು ಗೌರವಿಸುತ್ತಾರೆ. ಆದರೆ ಅಹ್ಮದಿಯೇತರರು ಇದನ್ನು ಖಂಡಿಸುತ್ತಾರೆ ಮತ್ತು ಹಿಂದೂ ಅವತಾರಗಳನ್ನು ಪ್ರವಾದಿಗಳೆಂದು ಗಣಿಸಲು ನಿರಾಕರಿಸುತ್ತಾರೆ. ಅಹ್ಮದಿಯರ ವಿಶ್ವಾಸ ಪ್ರಕಾರ ಝೊರಾಸ್ಟರ್, ಬುದ್ಧ, ಶ್ರೀಕೃಷ್ಣ, ಶ್ರೀರಾಮ ದೇವ ಸಂದೇಶವಾಹಕರಾಗಿದ್ದರು ಮತ್ತು ತಮ್ಮ ಜನತೆಯನ್ನು ನೇರಮಾರ್ಗಕ್ಕೆ ಒಯ್ದರು. ಅವರ ಉಪದೇಶಗಳಲ್ಲಿ ಹಸ್ತಕ್ಷೇಪ ನಡೆದಿರಬಹುದು ಅಥವಾ ಅವುಗಳನ್ನು ತಪ್ಪಾಗಿ ವ್ಯಾಖ್ಯಾನಿಸಿರಬಹುದು. ಆದರೆ ಈ ಮಹಾನುಭಾವರು ತಮ್ಮ ಕಾಲಘಟ್ಟ ಮತ್ತು ಆವಶ್ಯಕತೆಗಳಿಗನುಸಾರವಾಗಿ ದೈವಿಕ ಸಂದೇಶ ಗಳಿಸಿ ಜನರಿಗೆ ಮಾರ್ಗದರ್ಶನ ನೀಡಿದರೆಂದು ಅಹ್ಮದಿಯರು ನಂಬುತ್ತಾರೆ. ಅನ್ಯ ಧರ್ಮಗಳ ಜನರ ಆಧ್ಯಾತ್ಮಿಕ

ಮಹಾನುಭಾವರ ಬಗ್ಗೆ ಅಹ್ಮದಿಯರ ಈ ನಿಲುವು ಸೌಹಾರ್ದ ಮತ್ತು ಸ್ನೇಹಭಾವನೆಯನ್ನು ಮುಸ್ಲಿಮ್ ಮತ್ತು ಮುಸ್ಲಿಮೇತರರ ಮಧ್ಯೆ ಬೆಳೆಸಲು ಸಹಾಯಕವಾಗಿದೆ.

ಎಲ್ಲ ಹಳೆಯ ಮತ್ತು ಹೊಸ ಪ್ರವಾದಿಗಳನ್ನು ನಂಬುವುದು ಮುಸ್ಲಿಮರ ಪವಿತ್ರವೂ ಕಡ್ಡಾಯವೂ ಆಗಿರುವ ಕರ್ತವ್ಯವೆಂದು ಅಹ್ಮದಿಯರು ಗಣಿಸುತ್ತಾರೆ. ಪವಿತ್ರ ಖುರ್‌ಆನ್ ಉಪದೇಶಿಸುವು ದೇನೆಂದರೆ, ಅಲ್ಲಾಹನ ಸಂದೇಶವಾಹಕರ ಮಧ್ಯೆ ವ್ಯತ್ಯಾಸವನ್ನು ಕಲ್ಪಿಸಬಾರದು. ಈ ಉಪದೇಶ ಪ್ರಕಾರ ಅಹ್ಮದಿಯರು ನಂಬುವು ದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಂತರ ಬರಬಹುದಾದ ಯಾವುದೇ ಪ್ರವಾದಿಯನ್ನು ಹಿಂದೆ ಆಗಮಿಸಿದ ಪ್ರವಾದಿಗಳ ಹಾಗೆಯೇ ನಂಬುವುದು ಕಡ್ಡಾಯವಾಗಿದೆ. ಅಹ್ಮದಿಯರ ಪ್ರಕಾರ ವಾಗ್ದತ್ತ ಮಸೀಹರು, ಈಸಾ ಮಸೀಹರು ಪ್ರವಾದಿಯಾಗಿದ್ದ ಹಾಗೆಯೇ ಪ್ರವಾದಿ ಆಗಿದ್ದಾರೆ. ಆದರೆ ಒಂದು ವ್ಯತ್ಯಾಸವೇನೆಂದರೆ, ಈಸಾ ಮಸೀಹರಿಗೆ ಪ್ರವಾದಿತ್ವ ನೇರವಾಗಿ ದೊರಕಿತು; ವಾಗ್ದತ್ತ ಮಸೀಹರಿಗೆ ಪ್ರವಾದಿತ್ವ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸುವ ಮೂಲಕ ದೊರಕಿತು. ಆದರೆ ಪ್ರವಾದಿತ್ವಕ್ಕೆ ಸಂಬಂಧಿಸಿ ಅವರಿಬ್ಬರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅದು ಲಭಿಸಿದ ರೀತಿ ಮಾತ್ರ ಬೇರೆ ಬೇರೆಯಾಗಿತ್ತು. ಹೀಗೆ ಆದುದು ಏಕೆಂದರೆ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಬೇರೆ ಯಾವ ಪ್ರವಾದಿಗೂ ನೀಡಿರದಂತಹ ಒಂದು ವೈಶಿಷ್ಟ್ಯವನ್ನು ನೀಡಿದ್ದನು– ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮುಖಾಂತರ ಹೊರತು ಯಾರಿಗೂ ಪ್ರವಾದಿತ್ವ ಲಭಿಸಲಾರದು ಎಂದು. ಅವರ ನಂತರ ಆಗಮಿಸುವ ಪ್ರವಾದಿ ಅವರ ಮುದ್ರೆಯನ್ನು ಪಡೆದು ಮಾತ್ರ ಆಗಮಿಸಬಹುದು. ಈ ರೀತಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮಹಾನ್ ಪ್ರವಾದಿ ಆಗಿದ್ದರಲ್ಲದೆ ಪ್ರವಾದಿಯ ನಿರ್ಮಾಪಕರೂ ಆಗಿದ್ದರು. ವಾಗ್ದತ್ತ ಮಸೀಹರು ಇಬ್ರಾಹೀಮ್, ಮೂಸಾ, ಈಸಾ, ಝೊರಾಸ್ಟರ್, ಬುದ್ಧ, ಶ್ರೀಕೃಷ್ಣ ಮೊದಲಾದ ಪ್ರವಾದಿಗಳ ಹಾಗೆ ಪ್ರವಾದಿಯಾಗಿದ್ದ ರೆಂದು ಅಹ್ಮದಿಯರು ನಂಬುತ್ತಾರೆ. ಆದುದರಿಂದ ಹಿಂದೆ ಆಗಮಿಸಿದ ಪ್ರವಾದಿಗಳನ್ನು ನಂಬುವ ಹಾಗೆಯೇ ವಾಗ್ದತ್ತ ಮಸೀಹರನ್ನು ನಂಬಬೇಕು. ಏಕೆಂದರೆ ಪವಿತ್ರ ಖುರ್‌ಆನ್ ಪ್ರವಾದಿಗಳ ಮಧ್ಯೆ ವ್ಯತ್ಯಾಸ ಕಲ್ಪಿಸುವುದನ್ನು ನಿಷಿದ್ಧಗೊಳಿಸಿದೆ. ಕೆಲವರನ್ನು ನಂಬಿ ಬೇರೆ ಕೆಲವರನ್ನು ತಿರಸ್ಕರಿಸಬಾರದೆಂದೂ ಯಾವುದೇ ವ್ಯತ್ಯಾಸ ಕಲ್ಪಿಸದೆ ಎಲ್ಲ ಪ್ರವಾದಿಗಳನ್ನು ನಂಬಬೇಕೆಂದೂ ಅದು ಹೇಳು ತ್ತದೆ. ವಾಗ್ದತ್ತ ಮಸೀಹರು ತನ್ನ ಪ್ರವಾದಿತ್ವವನ್ನು ಶಕ್ತಿಶಾಲಿ ದೃಷ್ಟಾಂತಗಳ ಮೂಲಕ ಸಾಬೀತುಗೊಳಿಸಿರುವರು. ಅವರ ಸತ್ಯತೆ ಬಗ್ಗೆ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹದೀಸುಗಳು ಸಾಕ್ಷ್ಯ ವಹಿಸುತ್ತವೆ. (ಬೇರೆ ಅನೇಕ ಸಾಕ್ಷ್ಯಗಳು ಇವೆ. ಅವುಗಳ ಬಗ್ಗೆ ಈಗ ಪ್ರಸ್ತಾಪಿಸುವುದಿಲ್ಲ.) ಹೀಗಿರುವಾಗ ಅವರನ್ನು ತಿರಸ್ಕರಿಸುವವರು ಈಸಾ ಮಸೀಹರನ್ನು ತಿರಸ್ಕರಿಸಿದ ಯಹೂದಿಯರ ಹಾಗೆ ದೊಡ್ಡ ಪಾಪಕೃತ್ಯ ಮಾಡುವವ ರಾಗಿದ್ದಾರೆಂದು ಅಹ್ಮದಿಯರು ಗಣಿಸುತ್ತಾರೆ.

4. ನಾಲ್ಕನೆಯ ವ್ಯತ್ಯಾಸ ಈಸಾ ಮಸೀಹರಿಗೆ ಸಂಬಂಧಿಸಿದೆ. ಅಹ್ಮದಿಯೇತರ ಮುಸ್ಲಿಮರು ಹೀಗೆ ನಂಬುತ್ತಾರೆ: ಈಸಾ ಮಸೀಹರನ್ನು ಶಿಲುಬೆಗೇರಿಸಲು ಯಹೂದಿಯರು ಪ್ರಯತ್ನಿಸಿದಾಗ ಅಲ್ಲಾಹನು ಬೇರೆ ಒಬ್ಬ ಮನುಷ್ಯನಿಗೆ ಈಸಾ ಮಸೀಹರ ರೂಪ ನೀಡಿದನು. ಯಹೂದಿಯರು ಮೋಸಕ್ಕೊಳಗಾದರು. ಅವರು ರೂಪ ಬದಲಿಸಲ್ಪಟ್ಟ ಮನುಷ್ಯನನ್ನು ಈಸಾ ಮಸೀಹರೆಂದು ತಪ್ಪಾಗಿ ಗ್ರಹಿಸಿ ಶಿಲುಬೆಗೇರಿಸಿದರು. ಅಲ್ಲಾಹನು ಈಸಾ ಮಸೀಹರನ್ನು ಯಹೂದಿ ಯರಿಂದ ರಕ್ಷಿಸಲು ಆಕಾಶಕ್ಕೇರಿಸಿದನು. ಅಂದಿನಿಂದ ಇಂದಿನ ತನಕ ಈಸಾ ಮಸೀಹ್ ತನ್ನ ಭೌತಿಕ ಶರೀರದೊಂದಿಗೆ ಎರಡನೆಯ ಆಕಾಶದಲ್ಲಿ ವಾಸಿಸುತ್ತಿದ್ದಾರೆ. ಅವರ ದ್ವಿತೀಯ ಆಗಮನದ ಭವಿಷ್ಯವಾಣಿಗಳನ್ನು ಈಡೇರಿಸಲು ಅವರು ಲೋಕದ ಅಂತಿಮ ಕಾಲಘಟ್ಟದಲ್ಲಿ ಭೂಲೋಕಕ್ಕೆ ಇಳಿದು ಬರುವರು.

ಆದರೆ ಅಹ್ಮದಿಯರು ಈ ಎಲ್ಲ ಹೇಳಿಕೆಗಳನ್ನು ನಿರಾಧಾರ ವಾದುದೆಂದೂ ಅಸಂಬದ್ಧವೆಂದೂ ತಿರಸ್ಕರಿಸುತ್ತಾರೆ. ಶಿಲುಬೆ ಗೇರಿಸಲ್ಪಟ್ಟದ್ದು ಈಸಾ ಮಸೀಹರೇ ಎಂದೂ ಅವರು ಸಾತ್ವಿಕರಾದ ಕಾರಣ ಅಲ್ಲಾಹನು ಅವರನ್ನು ಶಿಲುಬೆಯ ಮೇಲೆ ಮೃತನಾಗುವುದ ರಿಂದ ರಕ್ಷಿಸಿದನೆಂದೂ ಅಹ್ಮದಿಯರು ನಂಬುತ್ತಾರೆ. ಈಸಾ ಮಸೀಹ್ ಶಿಲುಬೆಯಲ್ಲಿ ಪ್ರಜ್ಞಾ ಶೂನ್ಯರಾಗಿದ್ದುದರಿಂದ ಮೃತರಾದವರಂತೆ ಕಾಣಿಸಿದರು. ಅವರು ಜೀವದಿಂದಿರುವಾಗಲೇ ಅವರನ್ನು ಶವ ಕುಟೀರದಲ್ಲಿರಿಸಲಾಯಿತು. ಅವರು ಅದರಿಂದ ಮೂರನೆಯ ದಿನ ಹೊರಗೆ ಬಂದರು. ಅವರು ರಹಸ್ಯವಾಗಿ ತನ್ನ ಶಿಷ್ಯರನ್ನು ಕಂಡು ತಾನು ಜೀವಂತವಾಗಿರುವುದರ ಬಗ್ಗೆ ಅವರಿಗೆ ಖಾತರಿ ಮಾಡಿಕೊಟ್ಟರು. ಅನಂತರ ಅವರು ಅಫ್ಘಾನಿಸ್ತಾನಕ್ಕೆ ಮತ್ತು ಕಾಶ್ಮೀರಕ್ಕೆ ಬಂದರು. ಅಲ್ಲಿ ಇಸ್ರಾಯೇಲ್ ಮನೆತನದ ಕಳೆದು ಹೋದ ಕುರಿಗಳ ಒಂದು ಭಾಗವಾಗಿದ್ದ ಜನರು ವಾಸಿಸುತ್ತಿದ್ದರು. ಅವರು ಕಾಶ್ಮೀರದಲ್ಲಿ ಮೃತರಾದರು. ಅವರ ಗೋರಿಯನ್ನು ಶ್ರೀನಗರದ ಖಾನ್‌ಯಾರ್ ರಸ್ತೆಯಲ್ಲಿ ಈಗಲೂ ಸಂದರ್ಶಕರು ಕಾಣಬಹುದಾಗಿದೆ. ಈ ಗೋರಿ ಈಸಾ ಸಾಹೇಬರ ಗೋರಿ ಎಂದೂ ನಬಿ ಸಾಹೇಬರ ಗೋರಿ ಎಂದೂ ಪ್ರಸಿದ್ಧವಾಗಿದೆ.

ಈಸಾ ಮಸೀಹರು ಮೃತರಾದ ನಂತರ ಅವರ ಆತ್ಮ ಇತರ ಸಾತ್ವಿಕರ ಆತ್ಮಗಳ ಹಾಗೆ ಅಲ್ಲಾಹನ ಕಡೆಗೆ ಏರಿ ಹೋಯಿತು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದ **"ಇನ್ನೀ ಮುತವಫ್ಫೀಕ ವ ರಾಫಿಉಕ ಇಲೈಯ್ಯ"**– ನಾನು ನಿನ್ನನ್ನು ಮೃತಪಡಿಸುವೆನು ಮತ್ತು ನನ್ನೆಡೆಗೆ ಎತ್ತುವೆನು. (ಪವಿತ್ರ ಖುರ್‌ಆನ್ 3: 56) ಎಂದು ಹೇಳಿದುದು ಈಸಾ ಮಸೀಹರನ್ನು ಪ್ರಕೃತಿ ಸಹಜವಾದ ರೀತಿಯಲ್ಲಿ ಮೃತಪಡಿಸುವ ಬಗ್ಗೆ ಸೂಚನೆ ನೀಡುತ್ತದೆ. ಅವರನ್ನು ಶಿಲುಬೆಯಲ್ಲಿ ಶಪಿಸಲ್ಪಟ್ಟ ಮರಣಕ್ಕೆ ಗುರಿಪಡಿಸಲಾಗದೆಂದು ಇದು ಸೂಚಿಸುತ್ತದೆ. ಇತರ ಸಾತ್ವಿಕರ ಆತ್ಮಗಳ ಹಾಗೆ ಅವರ ಆತ್ಮ ತನ್ನ ಸನ್ನಿಧಿಗೆ ಬರುವುದೆಂದೂ ಅದು ಶಾಪಕ್ಕೆ ಗುರಿಯಾಗಲಾರದೆಂದೂ ಸೂಚಿಸಲಾಗಿದೆ.

ಈಸಾ ಮಸೀಹರು ಎಲೀಯ ಪ್ರವಾದಿಯ ದ್ವಿತೀಯ ಆಗಮನವನ್ನು ವ್ಯಾಖ್ಯಾನಿಸಿದ ಹಾಗೆಯೇ ಅಹ್ಮದಿಯರು ಈಸಾ ಮಸೀಹರ ದ್ವಿತೀಯಾಗಮನದ ಭವಿಷ್ಯವಾಣಿಯನ್ನು ವ್ಯಾಖ್ಯಾನಿಸುತ್ತಾರೆ.

ಎಲೀಯ ಪ್ರವಾದಿಯ ದ್ವಿತೀಯ ಆಗಮನದ ಭವಿಷ್ಯವಾಣಿ ಸ್ನಾನಿಕನಾದ ಯೋಹಾನ ಪ್ರವಾದಿಯ ಆಗಮನದ ಮೂಲಕ ಈಡೇರಿದ ಹಾಗೆ ಈಸಾ ಮಸೀಹರ ದ್ವಿತೀಯ ಆಗಮನದ ಭವಿಷ್ಯವಾಣಿ ಈಸಾ ಮಸೀಹರ ಸ್ವಭಾವಗುಣಗಳನ್ನು ಹೊಂದಿದ ಹಝ್ರತ್ ಅಹ್ಮದ್(ಅ) ಅವರ ಆಗಮನದಿಂದ ಈಡೇರಿರುವುದೆಂದು ಅಹ್ಮದಿಯರು ನಂಬುತ್ತಾರೆ.

5. ಐದನೆಯ ವ್ಯತ್ಯಾಸ ಯುದ್ಧಪ್ರಿಯ ಮಹ್‌ದಿ ಮತ್ತು ಜಿಹಾದ್‌ಗೆ ಸಂಬಂಧಿಸಿದೆ. ಅಹ್ಮದಿಯೇತರ ಮುಸ್ಲಿಮರು ಎಂತಹ ಮಹ್‌ದಿಯನ್ನು ಪ್ರತೀಕ್ಷಿಸುತ್ತಾ ಇದ್ದಾರೆಂದರೆ ಆ ಮಹ್‌ದಿ ಯುದ್ಧ ಮಾಡಿ ಖಡ್ಗ ಪ್ರಯೋಗದ ಮೂಲಕ ಇಸ್ಲಾಮ್ ಧರ್ಮವನ್ನು ಹರಡುವರು. ಇಂತಹ ಮಹ್‌ದಿಯನ್ನು ಪ್ರತೀಕ್ಷಿಸುವವರು ಖಡ್ಗ ಪ್ರಯೋಗದ ಜಿಹಾದ್ ನ್ಯಾಯಸಮ್ಮತವೆಂದು ಗಣಿಸುವವರಾಗಿದ್ದಾರೆ. ಏಕೆಂದರೆ ಅವರು ಪ್ರತೀಕ್ಷಿಸುವ ಮಹ್‌ದಿ ನ್ಯಾಯಸಮ್ಮತವಲ್ಲದುದನ್ನು ಮಾಡುವುದಾದರೂ ಹೇಗೆ?

ಆದರೆ ಅಹ್ಮದಿಯರು ಇಂತಹ ನಂಬಿಕೆಗಳನ್ನು ತಿರಸ್ಕರಿಸುತ್ತಾರೆ. ಇವು ಲೋಕಶಾಂತಿಗೆ ಬೆದರಿಕೆ ಮಾತ್ರವಲ್ಲ, ಇಸ್ಲಾಮ್ ಧರ್ಮವನ್ನು ಕಳಂಕಿತಗೊಳಿಸುತ್ತದೆ. ಅಹ್ಮದಿಯರ ಪ್ರಕಾರ ವಾಸ್ತವಿಕವಾಗಿ ಮಹ್‌ದಿ ವಾಗ್ದತ್ತ ಮಸೀಹರೇ ಆಗಿದ್ದಾರೆ. ಅವರು ಇಸ್ಲಾಮ್ ಧರ್ಮವನ್ನು ಖಡ್ಗ ಬಲದ ಮೂಲಕ ಹರಡುವವರಾಗದೆ ದೈವಿಕ ದೃಷ್ಟಾಂತಗಳ ಮತ್ತು ಸಾಕ್ಷ್ಯಾಧಾರಗಳ ಮೂಲಕ ಪ್ರಚಾರ ಮಾಡುವರು. ವಾಗ್ದತ್ತ ಮಹ್‌ದಿ ಆಗಮಿಸಿರುವರೆಂದು ಅಹ್ಮದಿಯರು ನಂಬುತ್ತಾರೆ. ಖಾದಿಯಾನಿನಲ್ಲಿ ಜನಿಸಿದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರೇ ಮಹ್‌ದಿಯಾಗಿರುವರೆಂದು ಅಹ್ಮದಿಯರು ನಂಬುತ್ತಾರೆ. ಮುಸ್ಲಿಮೇತರರ ರಕ್ತದ ಹೊಳೆ ಹರಿಸಲು ಆಗಮಿಸುವ ಮಹ್‌ದಿಯನ್ನು ಅಹ್ಮದಿಯೇತರ ಮುಸ್ಲಿಮರು ಪ್ರತೀಕ್ಷಿಸುವ ಹಾಗೆ ಅಹ್ಮದಿಯರು ಪ್ರತೀಕ್ಷಿಸುವುದಿಲ್ಲ. ಅಹ್ಮದಿಯೇತರ ಮುಸ್ಲಿಮರು ಪ್ರತೀಕ್ಷಿಸುವ ಮಹ್‌ದಿಯ ಬಗ್ಗೆ ಅಭಿಪ್ರಾಯವನ್ನು ಭೋಪಾಲದ ಸಿದ್ದೀಖ್ ಹಸನ್‌ಖಾನ್ ಹುಜಜುಲ್ ಕರಾಮದಲ್ಲಿ ಹೀಗೆ ಬರೆದಿದ್ದಾರೆ:

"ಲೋಕವಿಡೀ ಮಹ್‌ದಿಯ ಅಧಿಕಾರಕ್ಕೊಳಪಡುವುದು. ಇಸ್ಲಾಮ್ ಧರ್ಮ ಬಲವಾಗಿ ಸ್ಥಾಪಿಸಲ್ಪಡುವುದು. ಭೂಲೋಕದ ಎಲ್ಲ ದೊರೆಗಳು ಮಹ್‌ದಿಗೆ ಶರಣಾಗುವರು. ಇಂಡಿಯಾ ದೇಶಕ್ಕೆ ಸೈನ್ಯವನ್ನು ಕಳುಹಿಸಿ ಅದನ್ನು ಮಹ್‌ದಿ ಜಯಿಸುವರು. ಇಂಡಿಯಾ ದೇಶದ ದೊರೆಗಳು ಸಂಕೋಲೆಗಳಲ್ಲಿ ಬಂಧಿಸಲ್ಪಟ್ಟು ಮಹ್‌ದಿಯ ಮುಂದೆ ಹಾಜರುಗೊಳಿಸಲ್ಪಡುವರು." (ಪುಟ 374)

**ಇಖ್ತಿರಾಬುಸ್ಸಾಅತ್** ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: "ಮಹ್‌ದಿ ಜನರನ್ನು ಖಡ್ಗ ಮೂಲಕ ದೇವನ ಕಡೆಗೆ ಕರೆಯುವರು. ನಿರಾಕರಿಸುವವರು ಕೊಲ್ಲಲ್ಪಡುವರು."

ಪುನಃ ಹೀಗೆ ಬರೆಯಲಾಗಿದೆ: "ಮಹ್‌ದಿ ಯುದ್ಧ ಮಾಡುವರು; ನಿಧಿಗಳನ್ನು ವಶಪಡಿಸಿಕೊಳ್ಳುವರು; ನಗರಗಳನ್ನು ಒಂದರ ನಂತರ ಇನ್ನೊಂದರಂತೆ ಸ್ವಾಧೀನಪಡಿಸಿಕೊಂಡು ಪೂರ್ವದಿಂದ ಪಶ್ಚಿಮದ ತನಕ ಭೂಲೋಕವನ್ನು ಜಯಿಸುವರು. ಇಂಡಿಯಾ ದೇಶದ ದೊರೆಗಳ ಕೊರಳಿಗೆ ಸಂಕೋಲೆಗಳನ್ನು ಬಿಗಿದು ಮಹ್‌ದಿಯ ಮುಂದೆ ಅವರು ಹಾಜರುಗೊಳಿಸಲ್ಪಡುವರು. ಅವರ ಸಂಪತ್ತನ್ನು ಸ್ವಾಧೀನಪಡಿಸಲಾಗುವುದು."

ವಾಗ್ದತ್ತ ಮಸೀಹರು ಇಂತಹ ನಂಬಿಕೆಗಳನ್ನು ಬಲವಾಗಿ ಖಂಡಿಸಿ, ಇಸ್ಲಾಮ್ ಧರ್ಮಕ್ಕೂ ಮಾನವರಿಗೂ ಸರಕಾರಗಳಿಗೂ ಅಂದಾಜು ಮಾಡಲು ಅಸಾಧ್ಯವಾದಷ್ಟು ಸೇವೆ ಸಲ್ಲಿಸಿದರು. ಅಹ್ಮದಿಯೇತರ ಮುಸ್ಲಿಮರ ಹಾನಿಕರ ನಂಬಿಕೆಗಳನ್ನು ಖಂಡಿಸಿದ ಕಾರಣ ವಾಗ್ದತ್ತ ಮಸೀಹರ ಅನುಯಾಯಿಗಳನ್ನು ತೀವ್ರ ಹಿಂಸಾಚಾರಗಳಿಗೆ ಗುರಿಪಡಿಸಲಾಯಿತು ಮತ್ತು ಈಗಲೂ ಅಜ್ಞಾನಿ ಮುಲ್ಲಾಗಳೂ ಅವರ ಅನುಯಾಯಿಗಳೂ ಇಂಡಿಯಾದಲ್ಲೂ ಇತರ ದೇಶಗಳಲ್ಲೂ ಹಿಂಸಾಚಾರಗಳಿಗೆ ಗುರಿಪಡಿಸುತ್ತಿದ್ದಾರೆ. ಆದರೆ ಬುದ್ಧಿಶಾಲಿಗಳಾದ ಮುಸ್ಲಿಮರು ವಾಗ್ದತ್ತ ಮಸೀಹರ ಅಭಿಪ್ರಾಯಗಳನ್ನು ಅಂಗೀಕರಿಸುತ್ತಿದ್ದಾರೆ. ಅವರು ಸ್ಥಾಪಿಸಿದ ಜಮಾಅತ್‌ಗೆ ಈ ದೇಶದಲ್ಲೂ ವಿದೇಶಗಳಲ್ಲೂ ಜನರು ಸೇರುತ್ತಿದ್ದಾರೆ. ಅಹ್ಮದಿಯಾ ಜಮಾಅತಿನವರ ಉಪದೇಶಗಳನ್ನು ಅಹ್ಮದಿಯೇತರ ಮುಸ್ಲಿಮರ ಉಪದೇಶಗಳೊಂದಿಗೆ ಹೋಲಿಸಿ ನೋಡುವುದಾದರೆ, ಈ ಜಮಾಅತ್ ಅಭಿವೃದ್ಧಿಗೊಳ್ಳುವುದು ಇಸ್ಲಾಮ್ ಧರ್ಮಕ್ಕೆ ಅನುಗ್ರಹದಾಯಕವಾಗುವುದು ಮತ್ತು ಪ್ರತಿ ದೇಶದ ಸರಕಾರಗಳಿಗೂ ಹಿತಕರವಾಗುವುದು ಎಂದು ಸ್ಪಷ್ಟವಾಗುವುದು.

6. ಆರನೆಯ ವ್ಯತ್ಯಾಸ ತುರ್ಕಿ ದೇಶದ ಸುಲ್ತಾನರಿಗೆ ಸಂಬಂಧಿಸಿದೆ. ಅಹ್ಮದಿಯೇತರ ಮುಸ್ಲಿಮರು ತುರ್ಕಿ ದೇಶದ ಸುಲ್ತಾನರನ್ನು ಖಲೀಫತುಲ್ ಮುಸ್ಲಿಮೀನ್, ಮುಸ್ಲಿಮರ ಆಧ್ಯಾತ್ಮಿಕ ನೇತಾರ ಎಂದು ಗಣಿಸುತ್ತಾರೆ. ಅಹ್ಮದಿಯರು ತುರ್ಕಿಯ ಸುಲ್ತಾನರನ್ನು ಮುಸ್ಲಿಮರೆಲ್ಲರ ಖಲೀಫ ಎಂದು ಅಂಗೀಕರಿಸುವುದಿಲ್ಲ. ತುರ್ಕಿ ಸುಲ್ತಾನರ ಸಬ್-ಕೋನ್ಸಲ್ ಹುಸೈನ್ ಕಾಮೀ 1897ರಲ್ಲಿ ಖಾದಿಯಾನಕ್ಕೆ ಭೇಟಿ ನೀಡಿದ್ದರು. ಅವರೊಂದಿಗೆ ವಾಗ್ದತ್ತ ಮಸೀಹರು ಸ್ಪಷ್ಟವಾಗಿ ಹೇಳಿದರು: "ತುರ್ಕಿ ಸುಲ್ತಾನರಿಗೆ ಖಲೀಫನೆಂದು ವಾದಿಸುವ ಅರ್ಹತೆ ಇಲ್ಲ." ವಾಗ್ದತ್ತ ಮಸೀಹರ ಹೇಳಿಕೆ ಹುಸೈನ್ ಕಾಮಿಯನ್ನೂ ಅಹ್ಮದಿಯೇತರ ಮುಸ್ಲಿಮರನ್ನೂ ರೊಚ್ಚಿಗೆಬ್ಬಿಸಿತು. ಆಗ ವಾಗ್ದತ್ತ ಮಸೀಹರು ಒಂದು ವಿಜ್ಞಾಪನೆ ಪ್ರಕಟಿಸಿ ಹೀಗೆ ಬರೆದರು:

"ನನಗೆ ತುರ್ಕಿ ದೇಶದ ಸುಲ್ತಾನರ ಆವಶ್ಯಕತೆ ಇಲ್ಲ. ಸುಲ್ತಾನರ ಪ್ರತಿನಿಧಿಯನ್ನು ಕಾಣುವ ಇಚ್ಛೆಯೂ ಇಲ್ಲ. ನನಗೆ ಒಬ್ಬ ಸುಲ್ತಾನ್ ಸಾಕು. ಅವನು ಭೂಮ್ಯಾಕಾಶಗಳ ದೊರೆಯಾಗಿದ್ದಾನೆ.... ನನ್ನ ದೊರೆಯ ಎದುರಿಗೆ ತುರ್ಕಿಯ ಸುಲ್ತಾನ ಹುಲ್ಲು ಕಡ್ಡಿಯಾಗಿರುವಾಗ ಸುಲ್ತಾನ್ ಪ್ರತಿನಿಧಿಗೆ ಏನು ಸ್ಥಾನವಿದೆ? ನಾನು ಈ ದೇಶದ ಸರಕಾರಕ್ಕೆ ವಿಧೇಯನಾಗಿ ಗೌರವಭಾವದಿಂದ ಕೃತಜ್ಞತೆ ಅರ್ಪಿಸುತ್ತೇನೆ. ನಾನು ಸುರಕ್ಷಿತನಾಗಿ ನನ್ನ ಪ್ರಚಾರ ಕಾರ್ಯ ನಿರ್ವಹಿಸುತ್ತಿದ್ದೇನೆ. ತುರ್ಕಿ ಸರಕಾರ ಇಂದಿನ ದಿನಗಳಲ್ಲಿ ಅಂಧಕಾರಮಯವಾಗಿದೆ. ಅದು ಬಿತ್ತಿದುದನ್ನು ಕೊಯ್ಯುತ್ತಾ ಇದೆ. ಆ ಸರಕಾರದ ಅಧೀನದಲ್ಲಿ ಸತ್ಯವನ್ನು ಪ್ರಚಾರ ಮಾಡಲು ಎಂದೂ ಸಾಧ್ಯವಾಗದು. ಅನೇಕರು ನನ್ನ ಅಭಿಪ್ರಾಯದ ಬಗ್ಗೆ ಅಸಂತೃಪ್ತಿ ಸೂಚಿಸಬಹುದು. ಆದರೆ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಖಾದಿಯಾನಕ್ಕೆ ಆಗಮಿಸಿದ ತುರ್ಕಿ ಸರಕಾರದ ಪ್ರತಿನಿಧಿಗೆ ಈ ವಿಷಯ ಮನವರಿಕೆ ಮಾಡಿಕೊಡಲು ಹಲವು ರೀತಿಗಳಲ್ಲಿ ಪ್ರಯತ್ನಿಸಿದ್ದೆನು- ತುರ್ಕಿ ಸರಕಾರ ಅನೇಕ

# ನಮ್ಮ ಮುಂದಿನ ಕೆಲಸ

**• ಸರ್ ಮುಹಮ್ಮದ್ ಝುಫರುಲ್ಲಾ ಖಾನ್**

**ಸರ್ ಮುಹಮ್ಮದ್ ಝುಫರುಲ್ಲಾ ಖಾನ್ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಅಧ್ಯಕ್ಷರಾಗಿಯೂ ಅಂತರ್ರಾಷ್ಟ್ರೀಯ ನ್ಯಾಯಾಲಯದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದವರಾಗಿದ್ದಾರೆ.**

ನನ್ನ ಭಾಷಣದ ವಿಷಯ "ನಮ್ಮ ಮುಂದಿನ ಕೆಲಸ" ಎಂದಾಗಿದೆ. ಇದನ್ನು ವಿವಿಧ ರೀತಿಗಳಲ್ಲಿ ವಿವರಿಸಬಹುದಾಗಿದೆ. ನಮ್ಮ ಮುಂದಿನ ಕೆಲಸವು ನಾವು ಈಗ ಜೀವಿಸಿರುವ ಕಾಲದ ಸ್ಥಿತಿಯಿಂದ ನಿರ್ಧರಿಸಲ್ಪಡಬಹುದು. ಇಂದಿನ ಕಾಲದಲ್ಲಿ ಮಾನವನ ಬುದ್ಧಿಶಕ್ತಿಯು ಹಿಂದೆಂದೂ ತಲಪದಂತಹ ಉನ್ನತ ಬಿಂದುವನ್ನು ತಲಪಿದೆಯೆಂದು ಹೇಳಬಹುದಾದರೂ ಮನುಷ್ಯ ಮತ್ತು ಅವನ ಸೃಷ್ಟಿಕರ್ತನ ನಡುವೆ ಇರುವ ಸಂಬಂಧವು ಹಿಂದೆಂದೂ ಸಂಭವಿಸದ ರೀತಿಯಲ್ಲಿ ಹೆಚ್ಚು ಕಡಿಮೆ ಸಂಪೂರ್ಣವಾಗಿ ನಾಶವಾಗಿದೆ ಎಂದು ಸಹ ಹೇಳಬಹುದು. ಮನುಷ್ಯ ಮತ್ತು ಅವನ ಸೃಷ್ಟಿಕರ್ತನ ಮಧ್ಯೆ ಹೊಂದಾಣಿಕೆ ಸಾಧಿಸುವಂತೆ ಮಾಡುವುದೇ ನಮ್ಮ ಮುಂದಿರುವ ಕೆಲಸವಾಗಿದೆ. ಇಸ್ಲಾಮ್ ಧರ್ಮದ ಮಹಾನ್ ಪ್ರವಾದಿಯವರ(ಸ) ದ್ವಿತೀಯ ಆಗಮನವನ್ನು ದೇವನು ಯೋಜಿಸಿದುದು ಇದೇ ಉದ್ದೇಶಕ್ಕಾಗಿದೆ. ಹತ್ತೊಂಬತ್ತನೆಯ ಶತಮಾನ ದ್ವಿತೀಯಾರ್ಧದ ಕೊನೆಯ ಭಾಗದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಇದು ಈಡೇರಿತು. ದೇವ ನೇಮಿತ ಆ ಮಹಾಪುರುಷರ ಕೈಗಳನ್ನು ಹಿಡಿದುಕೊಂಡು ನಾವು ಅವರ ನಿಷ್ಠಾವಂತ ಪ್ರಾಮಾಣಿಕ ದಾಸರಾಗುವೆವು ಎಂದು ಪ್ರತಿಜ್ಞೆ ಮಾಡಿದ್ದೇವೆ. ನಾವು ಮನುಷ್ಯರನ್ನು ಅವರ ಸೃಷ್ಟಿಕರ್ತನ ಬಳಿಗೆ ಕರೆದುಕೊಂಡು ಬರುವೆವು ಎಂಬ ನಮ್ಮ ಕರ್ತವ್ಯವನ್ನು ಈಡೇರಿಸಲು ನಾವು ಕಾರ್ಯೋನ್ಮುಖರಾಗುವೆವು.

ಇದೇ ನಮ್ಮ ಮುಂದಿನ ಕೆಲಸವಾಗಿದೆ. ನಾನು ಹಿಂದೆ ಹೇಳಿದ ಹಾಗೆ ಇದನ್ನು ವಿವಿಧ ರೀತಿಗಳಲ್ಲಿ ವಿವರಿಸಲಾಗಿದೆ. ಆದರೆ ನಾನು ನಾವು ಮಾಡಬೇಕಾದ ಕೆಲಸವನ್ನು ಹೆಚ್ಚಾಗಿ ವಿವರಿಸಲು ಈಗ ಹೋಗುವುದಿಲ್ಲ. ನಾವು ನಮ್ಮ ಕೆಲಸವನ್ನು ಈಡೇರಿಸಲು ಈಗ ಏನು ಮಾಡಬೇಕೆಂಬುದರ ಕುರಿತು ಹೇಳಬಯಸುತ್ತೇನೆ. ನಾವು ನಮ್ಮ ಜವಾಬ್ದಾರಿಗಳನ್ನು ಪೂರೈಸಲು ನಮ್ಮನ್ನು ಯಾವ ರೀತಿಯಲ್ಲಿ ಸಿದ್ಧರನ್ನಾಗಿ ಮಾಡಬೇಕು? ನಮ್ಮ ಕರ್ತವ್ಯದ ಈಡೇರಿಕೆಯು ವರ್ಷದಿಂದ ವರ್ಷಕ್ಕೆ, ತಿಂಗಳಿಂದ ತಿಂಗಳಿಗೆ, ವಾರದಿಂದ ವಾರಕ್ಕೆ, ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ಮುಂದೆ ಸಾಗುವುದಕ್ಕೆ ನಾವು ನಮ್ಮನ್ನು ತಯಾರು ಮಾಡುವುದಾದರೂ ಹೇಗೆ?

ನಾನು ವಿನಯದಿಂದಲೂ ಪ್ರಾಮಾಣಿಕವಾಗಿಯೂ ಗೌರವ ಪೂರ್ಣವಾಗಿಯೂ ನಮ್ಮೆಲ್ಲರ ಸೃಷ್ಟಿಕರ್ತನ ಹೆಸರಲ್ಲಿ ನಿಮ್ಮೊಂದಿಗೆ ವಿನಂತಿಸಿಕೊಳ್ಳುತ್ತೇನೆ. ನೀವೆಲ್ಲರೂ ನಿಮ್ಮನ್ನು ಪ್ರಾಮಾಣಿಕವಾಗಿ ಯಾವುದೇ ನಟನೆಯಿಲ್ಲದೆ ಸ್ವತಃ ಪರೀಕ್ಷಿಸಬೇಕು. ನಮ್ಮ ಆ

---

**(ಹಿಂದಿನ ಪುಟದಿಂದ)**

ಕಾರಣಗಳಿಂದ ಅಲ್ಲಾಹನ ಮುಂದೆ ತಪ್ಪುಗಾರನಾಗಿದೆ ಎಂದು..... ನಾನು ಆ ಪ್ರತಿನಿಧಿಯ ಮನೋಭಾವದಿಂದ ತಿಳಿದೆನು– ನನ್ನ ಮಾತು ಇಷ್ಟವಾಗಲಿಲ್ಲವೆಂದು. ಇಲ್ಲಿಂದ ಹೋದ ಮೇಲೆ ಆ ಪ್ರತಿನಿಧಿ ನನ್ನ ವಿರುದ್ಧ ನೀಡಿದ ಹೇಳಿಕೆಯಿಂದ ಸ್ಪಷ್ಟವಾಗುವುದೇನೆಂದರೆ, ಟರ್ಕಿ ಇನ್ನು ಮುಂದೆ ಒಳ್ಳೆಯ ದಿನಗಳನ್ನು ಕಾಣಲಾರದು ಮತ್ತು ಅದರ ಅಧಃಪತನ ಹೊಂದಲಿರುವ ಬಗ್ಗೆ ಸ್ಪಷ್ಟ ಚಿಹ್ನೆಗಳು ಕಾಣಿಸುತ್ತವೆ..... ನನ್ನ ಮಾತುಗಳು ಆ ಪ್ರತಿನಿಧಿಯನ್ನು ಬಾಣದಂತೆ ಚುಚ್ಚಿದುವು ಎಂದು ನಾನು ಭಾವಿಸುತ್ತೇನೆ. ಆದರೆ ನಾನು ಹೇಳಿದುದು ನನಗೆ ಅಲ್ಲಾಹನು ಅವತೀರ್ಣ ಗೊಳಿಸಿದ ಸಂದೇಶವಾಣಿ ಪ್ರಕಾರವಾಗಿತ್ತೇ ಹೊರತು ನನ್ನ ಸ್ವಂತ ಅಭಿಪ್ರಾಯ ಪ್ರಕಾರವಲ್ಲ."

ಇನ್ನೊಂದು ಕರಪತ್ರದಲ್ಲಿ ವಾಗ್ದತ್ತ ಮಸೀಹ್ ಹೀಗೆ ಹೇಳಿದರು: "ಟರ್ಕಿಯ ಸುಲ್ತಾನ್ ತಾನು ಖಲೀಫನೆಂದೂ ಮುಸ್ಲಿಮರ ಆಧ್ಯಾತ್ಮಿಕ ನಾಯಕನೆಂದೂ ಹೇಳುವುದು ಕೇವಲ ಅವರ ಬಾಯಿಮಾತು ಮಾತ್ರವಾಗಿದೆ."

ದೇಶ ಭಕ್ತಿಯ ಬಗ್ಗೆ ವಾಗ್ದತ್ತ ಮಸೀಹರು ಹೇಳಿದುದೇನೆಂದರೆ, ಪ್ರತಿಯೊಬ್ಬ ಮುಸ್ಲಿಮನು ಅವನು ಯಾವ ದೇಶದಲ್ಲಿ ವಾಸಿಸುತ್ತಿದ್ದಾನೋ ಆ ದೇಶದ ಸರಕಾರಕ್ಕೆ ನಿಷ್ಠನಾಗಿರಬೇಕು– ಅದು ಮುಸ್ಲಿಮ್ ಸರಕಾರವಾಗಿರಲೀ ಮುಸ್ಲಿಮೇತರ ಸರಕಾರವಾಗಿರಲೀ. ಒಬ್ಬ ಮುಸ್ಲಿಮನು ಒಂದು ಮುಸ್ಲಿಮೇತರ ಸರಕಾರದ ಅಧೀನದಲ್ಲಿ ಜೀವಿಸುವಾಗ ಒಂದು ವಿದೇಶಿ ಮುಸ್ಲಿಮ್ ಸರಕಾರದೊಂದಿಗೆ ಸೇರಿಕೊಂಡು ಬಹಿರಂಗವಾಗಿಯಾಗಲೀ ರಹಸ್ಯವಾಗಿಯಾಗಲೀ ತನ್ನ ಸರಕಾರದ ವಿರುದ್ಧ ವರ್ತಿದರೆ ಅವನು ಅಲ್ಲಾಹನ ದೃಷ್ಟಿಯಲ್ಲಿ ವಿದ್ರೋಹ ಮಾಡಿದಂತಾಗುವುದು.

ವಾಗ್ದತ್ತ ಮಸೀಹರು ನೀಡಿದ ಉಪದೇಶಗಳು ಮೇಲಿನಂತಿವೆ. ಅಹ್ಮದಿಯರು ಅವುಗಳೊಂದಿಗೆ ತಮ್ಮನ್ನು ಗಟ್ಟಿಯಾಗಿ ಅಂಟಿಸಿಕೊಂಡಿರುತ್ತಾರೆ ಮತ್ತು ಹಾಗೆಯೇ ಮುಂದುವರಿಯುವರು. ಏಕೆಂದರೆ ಅವು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳ ಪ್ರಕಾರವೇ ಆಗಿವೆ ಎಂದು ಅವರು ನಂಬುತ್ತಾರೆ. ಈ ಉಪದೇಶಗಳು ಲೋಕದಲ್ಲಿ ಶಾಂತಿ ಮತ್ತು ಸಮಾಧಾನ ಸ್ಥಾಪಿಸಲು ಉಪಯುಕ್ತವಾಗಿವೆ ಮತ್ತು ಈ ಉಪದೇಶಗಳು ಜನರಲ್ಲಿ ಹೆಚ್ಚು ಹೆಚ್ಚಾಗಿ ಹಬ್ಬಿದರೆ ಲೋಕದಲ್ಲಿ ಶಾಂತಿ ಅಭಿವೃದ್ಧಿಗೊಳ್ಳುವುದು. ಇಂತಹ ಶಾಂತಿ ಭರಿತ, ಅನುಗ್ರಹದಾಯಕ ಉಪದೇಶಗಳನ್ನು ಅನುಸರಿಸುವ ಅಹ್ಮದಿಯರು ಅವರು ಜೀವಿಸುವ ದೇಶದ ಸರಕಾರಗಳಿಗೆ ಅನುಗ್ರಹವಾಗಿದ್ದಾರೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಭಿವೃದ್ಧಿ ಹೊಂದುತ್ತಿರುವುದು ಮತ್ತು ಹೆಚ್ಚು ಹೆಚ್ಚಾಗಿ ಜನರು ವಿವಿಧ ದೇಶಗಳಲ್ಲಿ ಅದರಲ್ಲಿ ಪ್ರವೇಶಿಸುತ್ತಾ ಇರುವುದು ನಿಶ್ಚಯವಾಗಿಯೂ ಶುಭಕರವಾಗಿದೆ. ★

ಕರ್ತವ್ಯವನ್ನು ಈಡೇರಿಸಲು ನಮ್ಮನ್ನು ಸಿದ್ಧರನ್ನಾಗಿ ಮಾಡಲು ಇರುವ ಅವಕಾಶಗಳನ್ನು ನಾವು ಸದುಪಯೋಗಪಡಿಸಿದ್ದೇವೆಯೋ? ನಮ್ಮ ಮುಂದಿರುವ ಕರ್ತವ್ಯದ ಮತ್ತು ಉದ್ದೇಶದ ಸೂಕ್ಷ್ಮತೆ ಮತ್ತು ಔನ್ನತ್ಯದಿಂದ ನಾವು ಎಷ್ಟರ ಮಟ್ಟಿಗೆ ಪ್ರಭಾವಿತರಾಗಿದ್ದೇವೆ? ನಾವು ವಹಿಸಿಕೊಂಡ ಈ ಕರ್ತವ್ಯದ ಈಡೇರಿಕೆಗೆ ನಾವು ನಮ್ಮನ್ನು ಅಧೀನ ರನ್ನಾಗಿ ಮಾಡುವುದರಲ್ಲಿ ಎಷ್ಟರಮಟ್ಟಿಗೆ ಜಯಶಾಲಿಗಳಾಗಿದ್ದೇವೆ? ನಾವು ಆ ಬಗ್ಗೆ ಕೃತಿ ಶೀಲರಾಗಿಲ್ಲವಾಗಿದ್ದರೆ ನಾವು ನಮ್ಮ ದೇವನ ದೃಷ್ಟಿಯಲ್ಲಿ ಸುಳ್ಳುಗಾರರಾಗಿ ಗಣಿಸಲ್ಪಡುವೆವು. ಅವನ ದೃಷ್ಟಿಯಲ್ಲಿ ನಾವು ಏನಾಗಿರುವೆವೋ ಅದು ಮಾತ್ರವೇ ಗಮನಾರ್ಹವಾಗಿದೆ.

ಪವಿತ್ರ ಖುರ್‌ಆನ್ ನಮಗೆ ಪದೇ ಪದೇ ಉಪದೇಶಿಸುತ್ತಾ ಬಂದಿದೆ; ಅದೇ ರೀತಿ ಮಹಾನ್ ಪ್ರವಾದಿಯವರೂ(ಸ) ಉಪದೇಶಿ ಸಿದ್ದಾರೆ; ನಮ್ಮ ಜಮಾಅತಿನ ಸ್ಥಾಪಕರೂ ಸವಿವರವಾಗಿ ಉಪದೇಶಿ ಸಿದ್ದಾರೆ: ಬೇರೆ ಜನರು ಲೌಕಿಕ ಚಟುವಟಿಕೆಗಳೆಂದು ವರ್ಣಿಸುವ ಕೆಲಸಗಳನ್ನು ಇಸ್ಲಾಮ್ ಧರ್ಮ ನಿಷಿದ್ಧಗೊಳಿಸಿಲ್ಲ. ಇಸ್ಲಾಮ್ ಧರ್ಮದಲ್ಲಿ ಲೌಕಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಮಧ್ಯೆ ವಿಭಜನೆ ಇಲ್ಲ. ನಾವು ಈ ವಿಷಯದಲ್ಲಿ ಯಶಸ್ವಿಯಾಗಿದ್ದೇವೆ ಅಥವಾ ಆ ವಿಷಯದಲ್ಲಿ ಯಶಸ್ವಿಯಾಗಿದ್ದೇವೆ ಎಂದು ಯೋಚಿಸಿ ನಾವು ನಮ್ಮನ್ನೇ ವಂಚಿಸುತ್ತೇವೆ. ನಾವು ನಮ್ಮ ಉದ್ದೇಶ ಲಕ್ಷ್ಯವನ್ನು ಕೈಬಿಟ್ಟು ಬೇರೆ ಗುರಿಗಳನ್ನು, ಮಾದರಿಗಳನ್ನು, ಉದ್ದೇಶಗಳನ್ನು ತಲಪಲು ಯತ್ನಿಸಿದ್ದರೆ ನಾವು ನಮ್ಮ ಪ್ರತಿಜ್ಞೆಗೆ ಅವಿಧೇಯತೆಯ ಹೊರತು ಇನ್ನೇನನ್ನೂ ಸಾಧಿಸಿದಂತೆ ಆಗದು. ನಾವು ಮಾಡುವ ಎಲ್ಲ ಕೆಲಸಗಳನ್ನೂ ದೇವನ ಪ್ರೀತಿಯನ್ನು ಗಳಿಸುವುದಕ್ಕೆ ಅಧೀನಗೊಳಿಸಿದರೆ ಮಾತ್ರ ನಾವು ಜಯವನ್ನು ಗಳಿಸಲು ಮತ್ತು ಅನುಗ್ರಹವನ್ನು ಪಡೆಯಲು ಶಕ್ತರಾಗುವೆವು. ಅದರ ಫಲಸ್ವರೂಪವಾಗಿ ಲೌಕಿಕ ಚಟುವಟಿಕೆಗಳೆಂದು ಕರೆಯಬಹುದಾದ ಚಟುವಟಿಕೆಗಳು ಆಧ್ಯಾತ್ಮಿಕ ಚಟುವಟಿಕೆಗಳು ಆಗುವುವು.

ನಮ್ಮ ಜೀವನಾಧಾರವನ್ನು ಸಂಪಾದಿಸುವುದು, ವಿವಾಹವಾ ಗುವುದು, ಮಕ್ಕಳನ್ನು ಪೋಷಿಸುವುದು, ಸಂತೋಷಪಡುವುದು ಮೊದಲಾದುವು ನಿಷಿದ್ಧವಲ್ಲ ಮತ್ತು ಇವುಗಳಲ್ಲಿ ಪ್ರತಿಯೊಂದು ನಮ್ಮ ಉದ್ದೇಶಲಕ್ಷ್ಯವನ್ನು ಗಳಿಸಲಿಕ್ಕಿರುವ ಮಾರ್ಗವಾಗಿದೆ– ನಾವು ಅದನ್ನು ಹೇಗೆ ಬಳಸಬಹುದೆಂದು ನಮಗೆ ತಿಳಿದಿದ್ದರೆ. ಮೌಲಾನ ರೂಮಿಯವರು ಒಂದು ಕಡೆ ಹೀಗೆ ಹೇಳಿರುವರು: ಒಬ್ಬ ಮನುಷ್ಯನು ತನ್ನನ್ನು ಸೃಷ್ಟಿಸಿದವನಿಗೆ ಭಕ್ತಿಯುಳ್ಳವನಾಗಿದ್ದು ಆತನಿಗೆ ನಾಲ್ವರು ಪತ್ನಿಯರಿದ್ದರೆ ನೀವು ಆತನನ್ನು ಭೋಗಲಾಲಸಿ ಎನ್ನುತ್ತೀರಿ. ಅಂತಹ ವ್ಯಕ್ತಿಗೆ ನಲ್ವತ್ತು ಸಾವಿರ ಪತ್ನಿಯರಿದ್ದರೂ ಆತನು ಭೋಗಲಾಲಸಿ ಯಲ್ಲ. ಏಕೆಂದರೆ ಜೀವನ ಮತ್ತು ಮದುವೆಯ ಕುರಿತು ಆತನ ಕಲ್ಪನೆಯು ಆತನನ್ನು ಭೋಗಲಾಲಸಿ ಎಂದು ಕರೆಯುವವನ ಕಲ್ಪನೆಗಿಂತ ಭಿನ್ನವಾಗಿದೆ.

ದೇವನ ಪ್ರೀತಿಯನ್ನು ಗಳಿಸುವ ಪ್ರಯತ್ನವು ಮನುಷ್ಯನ ಜೀವಿತದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಉಂಟುಮಾಡುತ್ತದೆ. ಇದಕ್ಕಾಗಿ ನಿಮ್ಮನ್ನು ಪ್ರೇರೇಪಿಸುವುದು ನನ್ನ ಉದ್ದೇಶವಾಗಿದೆ. ಇದು ಎಷ್ಟು ಕಷ್ಟಕರವೂ ಅನಾಕರ್ಷಕವೂ ಆಗಿ ಆರಂಭದಲ್ಲಿ ಭಾಸವಾದರೂ ಅದು ಸುಲಭ ಸಾಧ್ಯವೂ ಪುಣ್ಯದಾಯಕವೂ ಐಶ್ವರ್ಯದಾಯಕವೂ ಸಂತೋಷದಾಯಕವೂ ಆಗಿರುವುದು. ಜೀವನದಲ್ಲಿ ನೆಮ್ಮದಿ ಗಳಿಸಲು ಅದು ಏಕಮಾತ್ರ ಮಾರ್ಗವಾಗಿದೆ.

ನಮ್ಮನ್ನು ಸೃಷ್ಟಿಸಿದವನಿಗೆ ಪರಿಪೂರ್ಣ ಬದ್ಧತೆ ಹೊಂದಿ ನಾವು ನಮ್ಮ ಬದ್ಧತೆಯನ್ನು ಈಡೇರಿಸುವ ಅನುಗ್ರಹವನ್ನು ಪಡೆದರೆ, ಅವನು ಸೃಷ್ಟಿಸಿದ ಎಲ್ಲ ಜನರನ್ನು ಅವನಿಗೆ ಬದ್ಧರಾಗುವ ಸ್ಥಿತಿಗೆ ನಮ್ಮ ಮೂಲಕ ದೇವನು– ಅವನು ಇಚ್ಛಿಸುವುದಾದರೆ– ತಲಪಿಸುವನು. ತನ್ನ ಜೀವಿತೋದ್ದೇಶ ಇದೇ ಎಂದು ನಿಜವಾಗಿಯೂ ಒಬ್ಬನು ಭಾವಿಸುವುದಾದರೆ ಮತ್ತು ನಂಬುವುದಾದರೆ ಇನ್ನಿತರ ಎಲ್ಲ ಸಂಗತಿಗಳು ಈ ಉದ್ದೇಶ ಲಕ್ಷ್ಯದ ಕೆಳಗೆ ಬರುವುವು ಮತ್ತು ಅವುಗಳು ಉದ್ದೇಶಿತ ಲಕ್ಷ್ಯವನ್ನು ತಲಪುವ ಮಾರ್ಗಗಳಾಗುವುವು. ಒಬ್ಬ ಮನುಷ್ಯನ ಜೀವನಾಧಾರವಾಗುವ ಒಂದು ಉದ್ಯೋಗವನ್ನು ಕೈಗೊಳ್ಳುವ ಕುರಿತು ನಾನು ಹಲವಾರು ಸಾರಿ ಪ್ರಸ್ತಾಪಿಸಿದ್ದೇನೆ. ಅಂತಹ ವ್ಯಕ್ತಿ ಒಬ್ಬ ಪ್ರಾಮಾಣಿಕ ಕೆಲಸಗಾರನಾಗಿದ್ದಾನೆ ಎಂದು ನಾವು ಭಾವಿಸೋಣ. ಸಾಮಾನ್ಯ ಕೆಲಸಗಾರರಲ್ಲಿ ಸಹ ಇಂದು ಬಹಳ ಕಡಿಮೆ ಸಂಖ್ಯೆಯ ಜನರು ಮಾತ್ರ ಪ್ರಾಮಾಣಿಕ ಕೆಲಸಗಾರ ರಾಗಿದ್ದಾರೆ. ಜೀವನವು ಪ್ರಾಮಾಣಿಕವಾಗುವುದಕ್ಕಿಂತ ಹೆಚ್ಚಾಗಿ ಅಪ್ರಾಮಾಣಿಕ ಸ್ಥಿತಿಗೆ ತಲಪಿದೆ. ಆ ವಿಷಯ ಒತ್ತಟ್ಟಿಗಿರಲಿ. ನಾವು ಒಬ್ಬ ವ್ಯಕ್ತಿಯನ್ನು ಪ್ರಾಮಾಣಿಕನೆಂದು ಭಾವಿಸೋಣ. ಅವನು ಚೆನ್ನಾಗಿ ಕೆಲಸ ಮಾಡುತ್ತಾನೆ. ತನ್ನನ್ನು ಕೆಲಸಕ್ಕೆ ನೇಮಿಸಿದವನ ಪ್ರೀತಿಗಳಿಸುತ್ತಾನೆ. ತನ್ನ ಸಂಬಳವನ್ನು ಮನೆಗೆ ತರುತ್ತಾನೆ. ಅವನು ಜುಗಾರಿ ಆಟ ಆಡುವುದಿಲ್ಲ. ಅವನು ಮದ್ಯ ಸೇವಿಸುವುದಿಲ್ಲ. ಅವನು ತನ್ನ ಸಂಪಾದನೆಯನ್ನೆಲ್ಲ ತನ್ನ ಕುಟುಂಬಕ್ಕಾಗಿ ವಿನಿಯೋಗಿಸುತ್ತಾನೆ. ಅವನು ಈ ಒಂದು ಉದ್ದೇಶಕ್ಕಾಗಿ ತನ್ನ ಜೀವಿತದ ಕಾಲವನ್ನು ಕಳೆಯುತ್ತಿರುವುದಾದರೆ ಅವನ ಈ ಉದ್ದೇಶವು ಕೆಟ್ಟದಾದುದೇನೂ ಅಲ್ಲ. ಅದು ಉತ್ತಮ ಉದ್ದೇಶವಾಗಿದ್ದು ಅವನಿಗೆ ಕೆಲವು ಉಪಕಾರಗಳನ್ನೂ ಅನುಕೂಲತೆಗಳನ್ನೂ ಅದು ಒದಗಿಸುವುದು. ಆದರೆ ಅವನು ಇದೊಂದೇ ಉದ್ದೇಶದ ಸಾಫಲ್ಯಕ್ಕಾಗಿ ತನ್ನ ಜೀವಿತವನ್ನು ಕಳೆಯುವುದಾದರೆ ಅವನದು ಹಾನಿಕಾರವೂ ವ್ಯರ್ಥವೂ ನಷ್ಟದಾಯಕವೂ ಆದ ವ್ಯವಹಾರವಾಗಿದೆ. ಅವನ ಉದ್ದೇಶ ಒಳ್ಳೆಯದು ಎಂಬುದರಲ್ಲಿ ಸಂಶಯವಿಲ್ಲ. ಇಂತಹ ಒಳ್ಳೆಯ ಉದ್ದೇಶ ಹೊಂದದವರ ವಿಷಯ ನಾನು ಇಲ್ಲಿ ಪ್ರಸ್ತಾಪಿಸುವುದಿಲ್ಲ.

ಇಂತಹ ಒಳ್ಳೆಯ ಉದ್ದೇಶವನ್ನು ಹೊಂದಿದವರು ದೇವನು ಮನುಷ್ಯರಿಗಾಗಿ ನಿಗದಿಪಡಿಸಿರುವ ಉದ್ದೇಶದ ಈಡೇರುವಿಕೆಗಾಗಿ ಸಹ ಪ್ರಯತ್ನಿಸಬೇಕು ಮತ್ತು ತಮ್ಮ ಉದ್ಯೋಗವನ್ನು ತಮ್ಮ ಜೀವಿತಾಧಾರವಾಗಿ ಮಾಡಿಕೊಳ್ಳುವುದರೊಂದಿಗೆ ತಮ್ಮ ಕುಟುಂಬ ದವರನ್ನು ಸಹ ದೇವನ ನಿಜವಾದ ಸೇವಕರನ್ನಾಗಿ ಮಾಡಲು ಪ್ರಯತ್ನಿ ಸುತ್ತಾ ಇರಬೇಕು. ಅವರೆಲ್ಲರೂ ಪರಸ್ಪರ ಸಂಬಂಧದ ಕಾರಣದಿಂದ ಮತ್ತು ಆ ಸಂಬಂಧದಿಂದ ದೊರಕುವ ಅನುಕೂಲತೆಗಳಿಂದ ದೇವನು ಉದ್ದೇಶಿಸಿದ ಕರ್ತವ್ಯವನ್ನು ಈಡೇರಿಸುವ ಶಕ್ತಿ, ದೂರದೃಷ್ಟಿ ಮತ್ತು ಯೋಗ್ಯತೆ ಪಡೆದವರಾಗಿ ಮಾರ್ಪಾಟು ಹೊಂದುವವರಾಗಬೇಕು. ಆ ವ್ಯಕ್ತಿ ತನ್ನನ್ನು ಮತ್ತು ಇತರರನ್ನೆಲ್ಲ ತನ್ನ ಸೃಷ್ಟಿಕರ್ತನೊಂದಿಗೆ

ಸಂಬಂಧ ಸ್ಥಾಪಿಸುವವರನ್ನಾಗಿ ಮಾಡಬೇಕು. ಇಂದಿನ ಕಾಲದ ಆಧ್ಯಾತ್ಮಿಕ ರೋಗಗಳಿಗೆ ಚಿಕಿತ್ಸೆಗಾಗಿ ಇದು ಆವಶ್ಯಕವಾಗಿದೆ.

ನೀವು ಎಲ್ಲವನ್ನೂ ತ್ಯಾಗಮಾಡಿ ಸನ್ಯಾಸಿಗಳಾಗಿ ಬೆಟ್ಟಗಳಿಗೆ ತೆರಳಿ ಅಲ್ಲಿ ಏಕಾಂತವಾಗಿ ದೇವನನ್ನು ಹುಡುಕುವವರಾಗಿ ನಟಿಸಬೇಕೆಂದು ನಾನು ಹೇಳುತ್ತಾ ಇಲ್ಲ. ದೇವನನ್ನು ಇಲ್ಲಿಯೇ ಹುಡುಕಬೇಕು; ಬೆಟ್ಟಗಳ ತುದಿಗಳಲ್ಲಿ ಅಲ್ಲ. ನೀವು ಸನ್ಯಾಸಿಗಳಾಗಿ ಎವರೆಸ್ಟ್ ಶಿಖರಕ್ಕೆ ಹೋದರೂ ಸಾಗರದ ತಳಕ್ಕೆ ಹೋದರೂ ನೀವು ಕೈ ಎತ್ತಿ ಹಿಡಿದು ಅದು ಒಣಗಿ ಹೋಗುವ ತನಕ ಹಾಗೆಯೇ ಹಿಡಿದರೂ ಅದು ಉಪಯೋಗ ಹೀನವಾದರೂ ನೀವು ದೇವನನ್ನಾಗಲೀ ಮಾರ್ಗ ದರ್ಶನವನ್ನಾಗಲೀ ಗಳಿಸಲಾರಿರಿ. ಹಾಗೆ ಮಾಡಿದರೆ ನೀವು ನಿಮ್ಮನ್ನೇ ನಾಶಕ್ಕೊಳಪಡಿಸುವಿರಿ. ನಾವು ನಮ್ಮ ದೈನಂದಿನ ಚಟುವಟಿಕೆಗಳ ಮೂಲಕವೇ ದೇವನನ್ನು ಹುಡುಕಬೇಕಾಗಿದೆ. ಆದರೆ ದೇವನನ್ನು ನಿಜವಾಗಿಯೂ ಹುಡುಕುವವರಿಗೆ ಧೈರ್ಯವೂ ಸ್ಥಿರಚಿತ್ತತೆಯೂ ಆವಶ್ಯಕವಾಗಿದೆ. ನನ್ನ ಜೀವಿತದ ಅಳತೆಗೋಲು ಮತ್ತು ನಾನು ಜೀವಿತದ ಬಗ್ಗೆ ಮಾಡುವ ಮೌಲ್ಯ ಮಾಪನವು ನನ್ನ ನೆರೆ ಹೊರೆಯವರಿಂದ, ಪತ್ರಿಕೆಗಳ ಹೇಳಿಕೆಗಳಿಂದ ಟೆಲಿವಿಶನ್ ಮತ್ತು ರೇಡಿಯೋಗಳಿಂದ ಪ್ರಭಾವಿತವಾಗಿ ನನ್ನ ಜೀವಿತವು ನಡೆಯಲ್ಪಡು ವುದಾದರೆ ಇವುಗಳೆಲ್ಲ ನನ್ನ ದೇವರುಗಳಾಗುತ್ತಾರೆ. ನಮ್ಮ ಉದ್ದೇಶ ಲಕ್ಷ್ಯದ ಮಾರ್ಗದಲ್ಲಿ ಅಡ್ಡ ಬರುವವುಗಳನ್ನು ನಾವು ಬಿಟ್ಟು ಬಿಡಬೇಕು, ಅವುಗಳ ಬಗ್ಗೆ ಗಮನ ಕೊಡಬಾರದು ಮತ್ತು ಅವುಗಳನ್ನು ಕಡೆಗಣಿಸಿ ದಾಟಿ ಹೋಗಬೇಕು. ಇದರ ಫಲಸ್ವರೂಪವಾಗಿ ನಾವು ಇತರರಿಗೆ ಮಾದರಿಯಾಗಬೇಕು. ನಾವು ಇತರರ ಎಲ್ಲ ಗುಣಗಳಿಗಿಂತ ಈ ಗುಣವನ್ನು ಹೆಚ್ಚು ಶಕ್ತಿಯುತವಾಗಿ ವಿಕಿರಣಗೊಳಿಸಬೇಕು. ನಾಸ್ತಿಕ ಜಗತ್ತಿನಲ್ಲಿರುವ ಇತರರನ್ನು ದೇವನೊಂದಿಗೆ ಸಂಬಂಧವೇರ್ಪಡುವಂತೆ ಮಾಡಲು ಇದು ಅತ್ಯಾವಶ್ಯಕವಾಗಿದೆ.

ನಾವು ಬೇರೆಯವರ ಜೊತೆಗಿದ್ದಾಗ ನಮ್ಮ ಮುಖ್ಯ ಇಚ್ಛೆ ಇತರರನ್ನು ಸಂತೋಷಗೊಳಿಸುವುದಾಗಿರುತ್ತದೆ. ಈ ಸಂಗತಿಗಳು ಚಿಕ್ಕಪುಟ್ಟ ಸಂಗತಿಗಳೆಂದು ಹೇಳಿ ನಾವು ನಮ್ಮನ್ನೇ ವಂಚಿಸುವುದು ಬೇಡ. ನೀವು ಈ ಬಗ್ಗೆ ಹೀಗೆ ಯೋಚಿಸಿರಿ: ಒಬ್ಬ ಮನುಷ್ಯನಿಗೆ ಚಿಕ್ಕಪುಟ್ಟ ವಿಷಯಗಳಲ್ಲಿಯೂ ತನ್ನ ವರ್ತನೆಯನ್ನು ಬದಲಾಯಿಸುವ ಧೈರ್ಯವಿಲ್ಲದಿದ್ದರೆ ತನ್ನ ಜೀವಿತಕ್ಕೆ ಸಂಬಂಧಿಸಿದ ದೊಡ್ಡ ವಿಷಯಗಳಲ್ಲಿ ತನ್ನ ವರ್ತನೆಯನ್ನು ಬದಲಾಯಿಸುವ ಧೈರ್ಯ ತನಗಿದೆ ಎಂದು ಪ್ರಾಮಾಣಿಕವಾಗಿ ಅವನು ಹೇಗೆ ತಾನೆ ಹೇಳಬಲ್ಲನು? ಒಬ್ಬನು ಚಿಕ್ಕ ಬಲಿದಾನಗಳನ್ನು ಅರ್ಪಿಸಲು ಸಮರ್ಥನಾಗಿಲ್ಲವಾದರೆ ಅವನು ಹೇಗೆ ತಾನೆ ದೊಡ್ಡ ಬಲಿದಾನಗಳನ್ನು ಅರ್ಪಿಸಲು ಸಮರ್ಥನಾಗುವನು? ಈ ಬಗ್ಗೆ ನೀವೇ ಯೋಚಿಸಿರಿ. ಪ್ರತಿಯೊಂದು ವಸ್ತುವಿನಿಂದ ಬಹಳ ಹೆಚ್ಚು ಹೆಚ್ಚಾಗಿ ದೇವನಿಗಾಗಿ ಕೊಡುವುದಕ್ಕಾಗಿ ನಿಮ್ಮನ್ನು ನೀವೇ ತರಬೇತಿಗೊಳಿಸಿರಿ. ದೇವನು ಅನುಮತಿಸಿದಷ್ಟನ್ನು ಮಾತ್ರ ನೀವು ನಿಮಗಾಗಿ ತೆಗೆದುಕೊಳ್ಳಿರಿ.

ಸಯ್ಯಿದ್ ಅಬ್ದುಲ್ ಖಾದಿರ್ ಜೀಲಾನಿಯವರ ಕುರಿತು, ಅವರು ಒಳ್ಳೆಯ ಆಹಾರ ತಿನ್ನುತ್ತಿದ್ದುದು ಮತ್ತು ಒಳ್ಳೆಯ ಬಟ್ಟೆಗಳನ್ನು ಧರಿಸುತ್ತಾ ಇದ್ದುದು ದೇವನ ಆಜ್ಞೆ ಪ್ರಕಾರವಾಗಿತ್ತೆಂದೂ ಅವರು ತನ್ನ ಬಾಯಿಗೆ ಒಂದು ತುತ್ತು ಅನ್ನವನ್ನು ಕೂಡ ದೇವನು ತಿನ್ನಲು ಹೇಳುವ ತನಕ ತಿನ್ನುತ್ತಿರಲಿಲ್ಲವೆಂದೂ ದೇವನು ಧರಿಸಲು ಹೇಳುವ ತನಕ ಧರಿಸುತ್ತಿರಲಿಲ್ಲವೆಂದೂ ವರದಿಯಾಗಿದೆ. ಪ್ರತಿಯೊಂದು ವಿಷಯದಲ್ಲಿ ಇದು ನಮಗೆ ಮಾದರಿಯಾಗಬೇಕು. ಬೇರೆ ಎಲ್ಲವನ್ನೂ ತ್ಯಜಿಸಬೇಕು. ಇಂದಿನ ಸಂಕಷ್ಟಭರಿತ ಲೋಕ ಪ್ರತಿಯೊಂದು ಕ್ಷಣ ದಲ್ಲಿಯೂ ನಿಮ್ಮ ಕಣ್ಣುಗಳ ಮುಂದೆಯೇ ನಾಶದ ಕಡೆಗೆ ಧಾವಿಸುತ್ತಾ ಇದೆ. ನಾವು ಇಲ್ಲಿ ಉಂಟು ಮಾಡುವ ಪರಿವರ್ತನೆಗಳು ನಮ್ಮನ್ನು ಮಾತ್ರವಲ್ಲ ಮನುಷ್ಯ ವರ್ಗವನ್ನೇ ದೇವನ ಕ್ರೋಧದಿಂದ ರಕ್ಷಿಸುವುದು ಮತ್ತು ಮನುಷ್ಯನನ್ನು ದೇವನ ಕಡೆಗೆ ಕರೆತರುವುದು. ನಾವು ನಮ್ಮ ಜೀವಿತದಲ್ಲಿ ಉತ್ತಮ ಮಾದರಿಯನ್ನು ತೋರಿಸದಿದ್ದರೆ ನಮ್ಮ ಪ್ರಚಾರಗಳು ಮತ್ತು ಪ್ರಕಟಣೆಗಳು ನಿಷ್ಫಲವಾಗುವುವು.

ಪ್ರತಿದಿನ ದೇವನ ಅಸ್ತಿತ್ವವನ್ನು ಅನುಭವಿಸುವವರ ಜೀವಂತ ಮಾದರಿ ನಾವಾಗಬೇಕು. ಹಾಗೆ ಆಗದಿದ್ದರೆ ಇಂದಿನ ಕಾಲದಲ್ಲಿ ಯಾರೂ ದೇವನ ಅಸ್ತಿತ್ವವನ್ನು ನಂಬಲಾರರು. ನೀವು ಯಾವುದೇ ರೀತಿಯ ತರ್ಕದ ಮೂಲಕ ದೇವನ ಅಸ್ತಿತ್ವವನ್ನು ಮನವರಿಕೆ ಮಾಡಿಕೊಡಲಾರಿರಿ. ದೇವನ ಅಸ್ತಿತ್ವವನ್ನು ಅನುಭವಿಸಿ ತಿಳಿಯುವ ಮೂಲಕ ಹೊರತು ಕೇವಲ ವಾದಗಳ ಮೂಲಕ ಅವನ ಅಸ್ತಿತ್ವವನ್ನು ಗೊತ್ತುಹಚ್ಚಲು ಸಾಧ್ಯವಿಲ್ಲವೆಂದು ಅವನು ವಿಧಿಸಿರುವನು. ವಿವೇಕ ಮತ್ತು ವಾದಗಳು ಆತನ ಅಸ್ತಿತ್ವವನ್ನು ಸ್ಥಾಪಿಸಲು ಹೊರತಾಗಿರು ವವುಗಳೇನೂ ಅಲ್ಲ. ಆದರೆ ಅವುಗಳು ಪೂರಕ ಸಾಧನಗಳಾಗಿವೆ; ಅವುಗಳ ಮುಖ್ಯ ಸತ್ವಗಳಾಗಿಲ್ಲ. ಅವುಗಳು ನಿಮ್ಮನ್ನು ಅವನ ಅಸ್ತಿತ್ವ ಇರಬಹುದು ಎಂಬಲ್ಲಿಯವರೆಗೆ ಕೊಂಡೊಯ್ಯಬಲ್ಲುದೇ ಹೊರತು ಅವನ ಇರುವಿಕೆಯ ದೃಢವಾದ ಜ್ಞಾನಕ್ಕೆ ಕೊಂಡೊಯ್ಯಲಾರದು. ಅವನ ಅಸ್ತಿತ್ವವನ್ನು ಸ್ವತಃ ಅನುಭವಿಸಿ ಮಾತ್ರ ತಿಳಿಯಬಹುದು.

ನಾವು ಪ್ರತಿಕ್ಷಣ ಅವನ ಅಸ್ತಿತ್ವವನ್ನು ಅನುಭವಿಸಿ ತಿಳಿಯದಿದ್ದರೆ ನಮ್ಮ ಇತರ ಎಲ್ಲ ಪ್ರಯತ್ನಗಳು ನಿಷ್ಫಲವಾಗುವುವು. ಆದುದರಿಂದ ನಿಮಗೆ ಆವಶ್ಯಕವಾದ ಪ್ರಥಮ ಗುಣವು ವಿಶ್ವಾಸದ ದೃಢತೆಯಿಂದ ಲಭಿಸುವ ಧೈರ್ಯವಾಗಿದೆ. ನಿಮ್ಮ ಧೈರ್ಯವನ್ನು ಯಾರೂ ಸೋಲಿಸ ಲಾರರು. ದೇವನಿಗೆ ವಿಧೇಯನಾಗಿ ಕೈಗೊಂಡ ನಿಲುವನ್ನು ಹೊಂದಿದ ಮನುಷ್ಯನನ್ನು ಯಾರೂ ಸ್ಥಾನಪಲ್ಲಟಗೊಳಿಸಲಾರರು. ಅದಕ್ಕಾಗಿ ಮಾಡುವ ಪ್ರಯತ್ನಗಳು ನಿರರ್ಥಕವಾಗುವುವು. ಹೀಗಿದ್ದರೂ ನಮ್ಮಲ್ಲಿ ಶೇಕಡಾ ತೊಂಬತ್ತರಷ್ಟು ಜನರು ಮಾಡುವ ಕೆಲಸಗಳು ಕೇವಲ ಜಾರಿಯಲ್ಲಿರುವ ಒಂದು ಸಾಂಪ್ರದಾಯಿಕ ಶೈಲಿಯಲ್ಲಿರುತ್ತದೆ. ಒಂದು ಸಾಂಪ್ರದಾಯಿಕ ಶೈಲಿಯನ್ನು ಅನುಸರಿಸು ವುದರಿಂದ ಹಾನಿಯೇನೂ ಉಂಟಾಗಲಾರದು. ಆದರೆ ಆ ಶೈಲಿಯು ದೇವ ನಿರ್ದೇಶಿತವಾಗಿರಬೇಕಾಗಿದೆ ಹೊರತು ಮಾನವ ನಿರ್ದೇಶಿತ ವಾಗಬಾರದು. ಅದು ಚೈತನ್ಯದಾಯಕವಾಗಿರಬೇಕೇ ಹೊರತು ಮೃತ್ಯುದಾಯಕವಾಗಬಾರದು.

ವಾಗ್ದತ್ತ ಮಸೀಹ್‌ರವರಿಗೆ(ಅ) ಅವತೀರ್ಣವಾದ ಒಂದು ದೇವ ಸಂದೇಶ ಹೀಗಿದೆ: **"ಝಿಂದಗೀ ಕೆ ಫ್ಯಾಶನ್ ಸೆ ದೂರ್ ಜಾ ಪಡೇ"** ಅಂದರೆ, ಜೀವಿತದ ಫ್ಯಾಶನ್‌ನಿಂದ (ಜನರು) ದೂರವಾದರು.

ಹೇಗಿದ್ದರೂ ನಮಗೊಂದು ಜೀವಿತ ಶೈಲಿ (ಫ್ಯಾಶನ್) ಇರುತ್ತದೆ. ಅದನ್ನು ನಾವು ಅನುಸರಿಸುತ್ತೇವೆ. ನಾವು ರಾತ್ರಿಯ ಅಂತಿಮ ಯಾಮದಲ್ಲಿ ನಮ್ಮ ಹಾಸಿಗೆಗಳಿಂದ ಎದ್ದು ಪ್ರಾರ್ಥಿಸುತ್ತೇವೆ. ಆ

ಸಮಯದಲ್ಲಿ ದೇವನೊಂದಿಗೆ ನಿವೇದಿಸಲಿಕ್ಕಾಗಿ ನಾವು ನಿದ್ರೆಯಿಂದ ಎದ್ದೇಳುತ್ತೇವೆ. ಇದು ನಮ್ಮ ಜೀವನ ಶೈಲಿಯಾಗಿದೆ (ನಮ್ಮ ಫ್ಯಾಶನ್). ಸೂರ್ಯೋದಯದ ಸಮಯ ಎಷ್ಟು ವ್ಯತ್ಯಾಸವಾದರೂ ಅದಕ್ಕೆ ಒಂದೂಕಾಲು ಗಂಟೆಗೆ ಮುಂಚಿತವಾಗಿ ನಾವು ಫಜ್‌ರ್ ನಮಾಝ್ ಮಾಡುತ್ತೇವೆ. ಅದಕ್ಕಿಂತಲೂ ಮುಂಚೆ ನಾವು ಎದ್ದು ಶುಚಿತ್ವ ಕ್ರಿಯೆಗಳನ್ನು ನಡೆಸಿದ ನಂತರ ತಹಜ್ಜುದ್ ನಮಾಝ್ ಮಾಡಿರುತ್ತೇವೆ. ಅನಂತರ ನಿಗದಿತ ಇತರ ನಮಾಝ್‌ಗಳನ್ನು ದಿನದಾದ್ಯಂತ ಮಾಡುತ್ತೇವೆ. ಇದು ನಮ್ಮ ಜೀವನ ಶೈಲಿಯಾಗಿದೆ. ನಾವು ಸಂಪಾದಿಸುವುದು ನಮಗೆ ಸೇರಿದುದಲ್ಲ. ಅದು ದೇವನಿಗೆ ಸೇರಿರುತ್ತದೆ. ಅದರಿಂದ ನಮಗೆ ಮತ್ತು ನಮ್ಮ ಮಕ್ಕಳಿಗೆ ಆವಶ್ಯಕವಾದುದನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಉಳಿದುದು ನಮ್ಮ ಸಮಾಜದ ಸೇವೆಗಾಗಿ ಇರುವುದಾಗಿದೆ. ಇದು ನಮ್ಮ ಜೀವಿತದ ಶೈಲಿಯಾಗಿದೆ. ಒಂದು ಜೀವಿತ ಶೈಲಿಯನ್ನು ಅನುಸರಿಸುವುದು ತಪ್ಪು ಕೆಲಸವೇನೂ ಅಲ್ಲ. ಆದರೆ ಎಂತಹ ಜೀವಿತ ಶೈಲಿ ನಾವು ಅನುಸರಿಸುತ್ತೇವೆ ಎಂಬುದು ಗಮನಾರ್ಹವಾಗಿದೆ. ನಮ್ಮ ಯುವ ಜನರು ಯಾವುದರ ಬಗ್ಗೆ ಚಿಂತಿತರಾಗಿದ್ದಾರೆ? ತಮ್ಮ ಕಿವಿಯ ಬದಿಯ ಕೂದಲು ಎಷ್ಟು ಕೆಳಗೆ ಇರಬೇಕೆಂಬುದರ ಬಗ್ಗೆ ಅವರು ಚಿಂತಿತರಾಗಿರುವರೋ? ಅವರು ಕನ್ನಡಿಯ ಮುಂದೆ ಎಷ್ಟು ಸಮಯ ನಿಂತು ತಮ್ಮನ್ನು ನೋಡುತ್ತಾರೋ ನನಗೆ ತಿಳಿಯದು. ನಾನು ಹಾಗೆ ನಿಂತು ನನ್ನನ್ನು ನೋಡಿಕೊಳ್ಳುವುದಿಲ್ಲ. ಆದರೆ ಅವರು ಐದು ನಿಮಿಷಗಳ ಕಾಲ ಹಾಗೆ ನಿಲ್ಲುತ್ತಾರೆ ಎಂದು ಭಾವಿಸುವುದಾದರೆ ಆ ಸಮಯವನ್ನು ನಿರರ್ಥಕವಾಗಿ ಬಳಸಲಾಗಿದೆ. ಲೋಕವು ದಳ್ಳುರಿಗೆ ತುತ್ತಾಗಿದ್ದು ಮನುಷ್ಯನ ಭವಿಷ್ಯವು ಉರಿಸಲ್ಪಡುತ್ತಿರುವ ಈ ಕಾಲದಲ್ಲಿ ನಮ್ಮ ಸಮಯದ ಪ್ರತಿಯೊಂದು ಕ್ಷಣವನ್ನು ಪ್ರಯೋಜನಕರವಾಗಿ ಬಳಸಬೇಕಾಗಿದೆ.

ನಾನು ಹಿಂದೆ ಲಂಡನ್ ನಗರದ ವೆಸ್ಟ್ ಎಂಡ್ ಪ್ರದೇಶದಿಂದ ಲಂಡನ್ ಮಸ್‌ಜಿದ್‌ಗೆ ಬರುತ್ತಿದ್ದಾಗ ನಾನು ಪುಟ್ನೀ ಬ್ರಿಡ್ಜ್ ಸ್ಟೇಷನ್‌ನಲ್ಲಿ ಇಳಿದು ಬಸ್ ಕ್ರಮಾಂಕ 85 ಅಥವಾ 93ರಲ್ಲಿ ಪ್ರಯಾಣ ಮಾಡಿ ಮಸ್‌ಜಿದನ್ನು ತಲಪುತ್ತಿದ್ದೆ. ನಾನು ಹಾಗೆ ಮಾಡುತ್ತಿದ್ದುದು ಏಕೆಂದು ಎಲ್ಲರೂ ನನ್ನನ್ನು ಪ್ರಶ್ನಿಸುತ್ತಿದ್ದರು. ನಾನು ಹೇಳಿದೆ: ಪುಟ್ನೀ ಸ್ಟೇಷನಿಗಿಂತ ಬಸ್ ನಿಲ್ದಾಣ ಹತ್ತಿರವಾಗಿರುವುದು ಒಂದು ಕಾರಣವಾಗಿದೆ. ಇನ್ನೊಂದು ಕಾರಣ ನಾನು ಒಂದು ಪೆನ್ನಿ ಉಳಿತಾಯ ಮಾಡುತ್ತಿದ್ದುದಾಗಿದೆ. ಅದೊಂದು ತಮಾಷೆಯ ಮಾತಲ್ಲ. ಪ್ರತಿಯೊಂದು ಪೆನ್ನಿ, ಪ್ರತಿಯೊಂದು ಸೆಂಟ್ ಮುಖ್ಯವಾದುದೇ ಆಗಿದೆ. ಅದು ಪೆನ್ನಿ ಮತ್ತು ಸೆಂಟ್‌ಗೆ ಒಬ್ಬನು ಕಲ್ಪಿಸುವ ಬೆಲೆಯ ಪ್ರಕಾರವಾಗಿರುತ್ತದೆ. ಅದು ದೇವನ ಅನುಗ್ರಹವಾಗಿದೆ. ನಾವದನ್ನು ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸಬೇಕು. ಇದು ಮಾತ್ರ ನಾನು ಮಾಡಬೇಕಾಗಿದ್ದ ಕೆಲಸವೆಂದು ನಾನು ಹೇಳುವುದಿಲ್ಲ. ನಾನು ಈಸ್ಟ್ ಪುಟ್ನೀ ಸ್ಟೇಷನಿಗೆ ಅಥವಾ ಸೌತ್ ಫೀಲ್ಡ್ಸ್ ಸ್ಟೇಷನಿಗೆ ಸುಲಭವಾಗಿ ಹೋಗಿ ಸ್ವಲ್ಪ ಸಮಯವನ್ನು ಉಳಿತಾಯ ಮಾಡುವುದಾದರೆ ಅದನ್ನು ಪ್ರಯೋಜನಕರವಾಗಿ ಉಪಯೋಗಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ನಾನು ಆರು ಪೆನ್ನಿಗಳನ್ನಾದರೂ ಉಳಿಸುವುದಾದರೆ ಅದು ಉಪಯೋಗಕರವಾಗುವುದು. ದೇವನು ನಮಗೆ ಬಹಳ ಬೆಲೆಬಾಳುವ ಎಲ್ಲವನ್ನೂ ದಯಪಾಲಿಸಿದ್ದಾನೆ. ನಮ್ಮ ಯೋಚಿಸುವ ಶಕ್ತಿ, ನಮ್ಮ ಶರೀರ ದೇವನು ನಮಗೆ ನೀಡಿದ ಕೊಡುಗೆಗಳಾಗಿವೆ. ಅರ್ಥ ಮಾಡಿಕೊಳ್ಳಲು ಅಸಾಧ್ಯವಾದ ಅದ್ಭುತ ಯಂತ್ರ ಮಾನವನಾಗಿ ದ್ದಾನೆ. ಮಾನವನ ಸಾಮರ್ಥ್ಯವನ್ನು ಇನ್ನೂ ಪೂರ್ಣವಾಗಿ ಅಂದಾಜು ಮಾಡಲು ಸಾಧ್ಯವಾಗಿಲ್ಲ.

ನಮ್ಮಲ್ಲಿ ಪ್ರತಿಯೊಬ್ಬನೂ ಒಂದು ವಿಶ್ವವಾಗಿದ್ದಾನೆ– ಅವನು ಅದನ್ನು ಅರ್ಥ ಮಾಡಿಕೊಳ್ಳುವುದಾದರೆ. ನಮಗೆ ಸಂಬಂಧಿಸಿದ ಎಲ್ಲವನ್ನೂ ನಮ್ಮ ಉದ್ದೇಶಿತ ಲಕ್ಷ್ಯದ ಗಳಿಕೆಗಾಗಿ ವಿನಿಯೋಗಿಸಬೇಕು. ನಾವು ಹಾಗೆ ಮಾಡುವುದಿಲ್ಲವಾದರೆ ನಾವು ಕರ್ತವ್ಯ ಲೋಪಮಾಡು ತ್ತೇವಲ್ಲದೆ ನಾವು ವಂಚಿಸುತ್ತಿದ್ದೇವೆ, ನಾವು ದುರುಪಯೋಗ ಮಾಡುತ್ತೇವೆ ಮತ್ತು ನಮಗೆ ಒಂದು ನಿಗದಿತ ಉದ್ದೇಶಕ್ಕಾಗಿ ಕೊಟ್ಟ ದ್ದನ್ನು ನಾವು ಬೇರೆ ಉದ್ದೇಶಕ್ಕಾಗಿ ಬಳಸುತ್ತೇವೆ. ಆದುದರಿಂದ ನಾವು ನಮ್ಮ ಜೀವಿತದಲ್ಲಿ ಒಂದು ಸಂಪೂರ್ಣ ಕ್ರಾಂತಿಯನ್ನುಂಟು ಮಾಡಬೇಕು. ಬೇರೆ ಜನರು ಹೇಗೆ ಯೋಚಿಸುತ್ತಾರೆಂಬುದು ನಮ್ಮನ್ನು ಪ್ರಭಾವಿತವನ್ನಾಗಿ ಮಾಡಬಾರದು. ಒಬ್ಬ ವ್ಯಕ್ತಿ ಬುದ್ಧಿಯ ಒಂದು ಮಾತು ಹೇಳಿದ್ದಾರೆ: "ಅವರು ಹೇಳಲಿಕ್ಕಿರುವುದನ್ನು ಹೇಳುತ್ತಾ ಇರಲಿ."

ಈ ವಿಷಯದಲ್ಲಿರುವ ದಾರ್ಶನಿಕ ನಿಲುವು ಇದೇ ಆಗಿದೆ. ಮಹಾನ್ ಪ್ರವಾದಿ(ಸ) ಮತ್ತು ಅವರ ಶಿಷ್ಯರು ಬೇರೆ ಜನರು ಹೇಳುತ್ತಾ ಇದ್ದುದರ ಕುರಿತು ಚಿಂತೆಯಿಂದ ಇದ್ದರೇ? ಬೇರೆ ಜನರು ಏನು ಹೇಳಬಹುದೆಂಬುದರ ಕುರಿತು ಚಿಂತಿತರಾಗಿದ್ದರೆ ಅವರು ಎಲ್ಲಿಗಾದರೂ ತಲಪಲು ಸಾಧ್ಯವಿತ್ತೇ?


ನೀವು ಅನ್ಯರ ಜೀವಿತ ಶೈಲಿಯನ್ನು ತ್ಯಜಿಸಿರಿ. ನೀವು ನಿಮ್ಮದೇ ಆದ ಬಾಹ್ಯ, ಆಂತರಿಕ, ನೈತಿಕ, ಆಧ್ಯಾತ್ಮಿಕ ಮತ್ತು ಭೌತಿಕ ಜೀವಿತ ಶೈಲಿಯನ್ನು ಸ್ಥಾಪಿಸಿರಿ. ನಾವು ಕೇವಲ ಹಠದಿಂದ ಮತ್ತು ಪೂರ್ವಗ್ರಹದಿಂದ ಅನ್ಯರ ವಿರುದ್ಧ ವರ್ತಿಸಬಾರದು. ಸಾತ್ವಿಕನಾದ ಮನುಷ್ಯನು ಪರೋಪಕಾರಿಯಾಗಿರುವುದರಿಂದ ಅವನು ಅನ್ಯರೊಂದಿಗೆ ಸೌಹಾರ್ದದಿಂದಿರುತ್ತಾನೆ.

ನಾವು ಜೀವಿಸುವ ದೇಶಕ್ಕೆ, ನಾವು ಜೀವಿಸುವ ಸಮಾಜಕ್ಕೆ, ನಮ್ಮ ನೆರೆಹೊರೆಯವರಿಗೆ, ನಮ್ಮ ಮಕ್ಕಳ ಒಡನಾಡಿಗಳಾದ ಮಕ್ಕಳಿಗೆ ಅತ್ಯಂತ ಹೆಚ್ಚು ಉಪಕಾರ ಮಾಡುವವರು ನಾವು ಆಗಬೇಕು. ಬೇರೆ ಜನರು ಸಾಮಾನ್ಯವಾಗಿ ಶೇಕಡ ಐದರಷ್ಟು ಅಥವಾ ಶೇಕಡ ಹತ್ತರಷ್ಟು ಉಪಕಾರ ಮಾಡುವವರಾಗಿರುವಾಗ ನಾವು ಶೇಕಡ ನೂರಕ್ಕೆ ನೂರಷ್ಟು ಉಪಕಾರಿಗಳಾಗುವಾಗ ನಾವು ಹೇಗೆ ತಾನೆ ಸ್ವಾಗತಿಸಲ್ಪಡದಿರಲು ಸಾಧ್ಯ.?

ನಾವು ಇಹಲೋಕವನ್ನು ಬಿಟ್ಟು ಹೋಗುವಾಗ ನಾವು ನಮ್ಮ ಸೃಷ್ಟಿಕರ್ತನಿಂದ ಸ್ವಾಗತಿಸಲ್ಪಡುವ ರೀತಿಯಲ್ಲಿ ನಮ್ಮ ಜೀವಿತವನ್ನು ಮಾಡಬೇಕೆಂದು ಬಯಸುವುದಾದರೆ ನಾವು ನಮ್ಮ ನಿರ್ಧಾರವನ್ನು ಈಡೇರಿಸಬೇಕು. ನಾನು ನನಗೆಯೇ ಎಚ್ಚರಿಕೆ ನೀಡುವ ಹಾಗೆಯೇ ನಿಮಗೂ ಎಚ್ಚರಿಕೆ ನೀಡುತ್ತಿದ್ದೇನೆ. ಜೀವಿತದ ಕಾಲಾವಧಿಯು ಅತ್ಯಂತ ಹೆಚ್ಚು ವೇಗದಿಂದ ದಾಟಿ ಹೋಗುತ್ತಿದೆ. ಪ್ರತಿಯೊಂದು ಕ್ಷಣವನ್ನು ನಿಮಗೆ ಸದುಪಯೋಗಪಡಿಸಲು ಸಾಧ್ಯವಿರುವಾಗಲೆಲ್ಲ ಸದುಪಯೋಗ ಪಡಿಸಿರಿ. ನೀವು ದೃಢನಿರ್ಧಾರ ಮಾಡಿ ಧೈರ್ಯದಿಂದ ಮುಂದೆ ಸಾಗಿರಿ.

**(1972ರಲ್ಲಿ ಲಂಡನಿನ ಅಹ್ಮದಿಯಾ ಮಸೀದಿಯಲ್ಲಿ ಮಾಡಿದ ಭಾಷಣ. The Review of Religions October 2004 ಸಂಚಿಕೆಯಿಂದ. ಅನುವಾದ: ಯಮ್. ಉಬೈದುಲ್ಲಾ).** ★

**ವಾರ್ತೆಗಳು**



# ಪ್ಯಾರಿಸ್ ಆಕ್ರಮಣ – ಅಹ್ಮದಿಯಾ ಖಲೀಫರ ಖಂಡನೆ

**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರ, ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಪ್ಯಾರಿಸ್‌ನಲ್ಲಿ ನಡೆದ ಭೀಕರವಾದಿ ಆಕ್ರಮಣಗಳನ್ನು ಖಂಡಿಸಿದರು.**

**ಲಂಡನ್‌ನಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೀಗೆ ಹೇಳಿದರು:**

**ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪರವಾಗಿ ಫ್ರಾನ್ಸ್ ದೇಶ, ಅದರ ಜನತೆ ಮತ್ತು ಸರಕಾರಕ್ಕೆ ನನ್ನ ಹೃತ್ಪೂರ್ವಕ ಸಹಾನುಭೂತಿಗಳನ್ನೂ ಸಂತಾಪಗಳನ್ನೂ ನಾನು ಪ್ರಕಟಿಸುತ್ತಿದ್ದೇನೆ. ಈ ಮೃಗೀಯ ಮನುಷ್ಯತ್ವ ರಹಿತ ಆಕ್ರಮಣವನ್ನು ಅತ್ಯಂತ ಕಟುವಾಗಿ ಮಾತ್ರ ನಿಂದಿಸಲು ಸಾಧ್ಯ.**

**ಎಲ್ಲ ರೀತಿಯ ಭೀಕರ ಕೃತ್ಯಗಳು ಮತ್ತು ಉಗ್ರಗಾಮಿ ಚಟುವಟಿಕೆಗಳು ಇಸ್ಲಾಮಿನ ನೈಜ ತತ್ವಗಳಿಗೆ ವಿರುದ್ಧವಾಗಿವೆ ಎಂದು ಪುನರುಚ್ಚರಿಸಲು ನಾನು ಬಯಸುತ್ತೇನೆ. ಒಂದು ನಿರಪರಾಧಿಯನ್ನು ಕೊಲ್ಲುವುದು ಮಾನವರನ್ನೆಲ್ಲ ಕೊಂದಂತಹ ಗುರುತರ ಅಪರಾಧವೆಂದು ಪವಿತ್ರ ಖುರ್‌ಆನ್ ಹೇಳಿದೆ. ಯಾವುದೇ ಸಂದರ್ಭದಲ್ಲಿಯೂ ಕೊಲೆಯನ್ನು ಸಮರ್ಥಿಸಲು ಸಾಧ್ಯವಿಲ್ಲ. ತಮ್ಮ ದ್ವೇಷಭರಿತ ಕೃತ್ಯಗಳನ್ನು ಇಸ್ಲಾಮಿನ ಹೆಸರಲ್ಲಿ ನ್ಯಾಯೀಕರಿಸುವವರು ಇಸ್ಲಾಮ್ ಧರ್ಮವನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಅಪಕೀರ್ತಿಗೆ ಒಡ್ಡುವವರಾಗಿದ್ದಾರೆ.**

**ಈ ಆಕ್ರಮಣಗಳಿಗೆ ಬಲಿಯಾದವರೊಂದಿಗೆ ನಮ್ಮ ಸಹಾನುಭೂತಿಗಳೂ ಪ್ರಾರ್ಥನೆಗಳೂ ಇವೆ. ಈ ಆಕ್ರಮಣಗಳ ಕಾರಣದಿಂದ ದುಃಖವನ್ನು ಅನುಭವಿಸುವವರಿಗೆ ಮತ್ತು ಯಾವುದಾದರೂ ರೀತಿಯಲ್ಲಿ ಪೀಡಿತರಾದವರಿಗೆ ಸರ್ವಶಕ್ತನಾದ ದೇವನು ಸಹನೆ ದಯಪಾಲಿಸಲಿ. ಈ ದುಷ್ಟ ಕೃತ್ಯಗಳನ್ನು ನಡೆಸಿದವರು ಬೇಗನೆ ಹಿಡಿಗೂಡಲ್ಪಟ್ಟು ಶಿಕ್ಷಿಸಲ್ಪಡಲಿ ಎಂದು ನಾನು ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.**

# ಜಪಾನಿನ ನಗೋಯಾದಲ್ಲಿ ಪ್ರಥಮ ಅಹ್ಮದಿಯಾ ಮಸ್‌ಜಿದ್ ಉದ್ಘಾಟನೆ

ಜಪಾನ್: ಜಪಾನಿನ ಪ್ರಥಮ ಅತಿದೊಡ್ಡ ಅಹ್ಮದಿಯಾ ಮಸ್‌ಜಿದ್ **"ಬೈತುಲ್ ಅಹದ್"** ನವೆಂಬರ್ 20ರಂದು ಅಹ್ಮದಿಯಾ ಮುಸ್ಲಿಂ ಜಮಾಅತಿನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರಿಂದ ಉದ್ಘಾಟಿಸಲ್ಪಟ್ಟಿತು.

ಈ ಮಸ್‌ಜಿದ್ ನಿರ್ಮಿಸಲ್ಪಟ್ಟ ಸ್ಥಳದ ವಿಸ್ತೀರ್ಣ 1000 ಚದರ ಮೀಟರ್ ಆಗಿದೆ. ಇದು ಎರಡು ಅಂತಸ್ತಿನ ಕಟ್ಟಡವಾಗಿದೆ. ಇದು ಈ ಪ್ರದೇಶದ ಮುಖ್ಯ ಹೆದ್ದಾರಿಯ ಬದಿಯಲ್ಲಿದೆ. ಈ ಹೆದ್ದಾರಿ ಈ ಪ್ರದೇಶದ ಎಲ್ಲ ದೊಡ್ಡ ಮಾರ್ಗಗಳನ್ನು ಪರಸ್ಪರ ಜೋಡಿಸುತ್ತದೆ. ಈ ಮಸ್‌ಜಿದ್ ಹೆದ್ದಾರಿಯ ಎಕ್ಸಿಟ್‌ನ ಸಮೀಪ ಇದೆ. ಇಲ್ಲಿ ಎರಡು ಹೆದ್ದಾರಿಗಳು ಬಂದು ಸೇರುತ್ತವೆ. ರೈಲ್ವೇ ಸ್ಟೇಶನ್ ಬಹಳ ಸಮೀಪವಿದೆ. ಈ ರೈಲ್ವೇ ಸ್ಟೇಶನ್‌ನಿಂದ ನಗೋಯಾ ಇಂಟರ್‌ನೇಶನಲ್ ಏರ್‌ಪೋರ್ಟ್‌ಗೆ ನೇರವಾಗಿ ರೈಲುಬಂಡಿ ಹೋಗುತ್ತದೆ. ಈ ಮಸ್‌ಜಿದ್‌ನ ಪ್ರಥಮ ಅಂತಸ್ತಿನಲ್ಲಿ ಮುಖ್ಯ ಹಾಲ್ ಇದೆ. ಇದರಲ್ಲಿ ಐನೂರಕ್ಕಿಂತ ಹೆಚ್ಚು ಮಂದಿ ನಮಾಝ್ ಅನುಷ್ಠಿಸಬಹುದಾಗಿದೆ. ಅದರ ಮೇಲಿನ ಅಂತಸ್ತಿನಲ್ಲಿ ಮಹಿಳೆಯರ ಪ್ರಾರ್ಥನಾ ಹಾಲ್ ಇದೆ. ಒಟ್ಟು ಎಂಟುನೂರು ಮಂದಿ ಸಾಮೂಹಿಕ ನಮಾಝ್ ಅನುಷ್ಠಿಸಬಹುದಾಗಿದೆ.

## “ಯುಗರಶ್ಮಿ” 40ನೇ ವರ್ಷದ ವಿಶೇಷ ಸಂಚಿಕೆ ಬಿಡುಗಡೆ

ಮಂಗಳೂರು: ಜಾಗತಿಕ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಕನ್ನಡ ಮುಖವಾಣಿ **“ಯುಗರಶ್ಮಿ”** ತ್ರೈಮಾಸ ಪತ್ರಿಕೆಯ 40ನೇ ವರ್ಷದ ಮಾಣಿಕ್ಯ ಜೂಬಿಲಿ ವಿಶೇಷ ಸಂಚಿಕೆ ಪಾಂಡೇಶ್ವರದಲ್ಲಿರುವ ಅಹ್ಮದಿಯಾ ಮಸೀದಿ **“ದಾರುಸ್ಸಲಾಮ್”**ನಲ್ಲಿ 4–9–2015 ರಂದು ಬಿಡುಗಡೆಗೊಂಡಿತು.

ಮೌಲವಿ ಆಸಿಫ್ ಅಹ್ಮದ್ ಖಾದಿಂ ಸಾಹೇಬ್ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. 40 ವರ್ಷಗಳಿಂದ ಒಬ್ಬರೇ ಸಂಪಾದಕರಿಂದ ನಡೆಸುತ್ತಾ ಬಂದಿರುವ ಪತ್ರಿಕೆಯ ಸಾಧನೆಯನ್ನು ಅವರು ಶ್ಲಾಘಿಸಿದರು. ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಮುಹಮ್ಮದ್ ಯೂಸುಫ್ ಸಾಹೇಬ್ ಪತ್ರಿಕೆ ನಡೆದು ಬಂದ ದಾರಿಯನ್ನು ವಿವರಿಸಿದರು. ಬಿ.ಎಸ್. ಅಬ್ದುರ್ರಹೀಂ ಸಾಹೇಬ್, ಕೆ.ಎಮ್. ಆಲಿ ಸಾಹೇಬ್, ಎಂ. ಅಬ್ದುಸ್ಸಲಾಂ ಸಾಹೇಬ್, ವಿ.ಎ. ರಶೀದ್ ಸಾಹೇಬ್ ಮೊದಲಾದವರು ಪತ್ರಿಕೆಗೆ ಶುಭಕೋರಿ ಮಾತನಾಡಿದರು. **“ಯುಗರಶ್ಮಿ”** ಬಳಗದ ಹಿರಿಯ ಸದಸ್ಯ ಯಂ. ಉಬೈದುಲ್ಲಾ ಸಾಹೇಬ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಝಫರ್ ಅಹ್ಮದ್ ಸಾಹೇಬ್‌ರವರ ಖುರ್‌ಆನ್ ಪಾರಾಯಣದೊಂದಿಗೆ ಪ್ರಾರಂಭವಾದ ಸಮಾರಂಭ ಮೌಲವಿ ಸಾಹೇಬರ ದುಆದೊಂದಿಗೆ ಕೊನೆಗೊಂಡಿತು.

==============================================================

## ರೋಗಿಗಳಿಗೆ ಹಣ್ಣು ಹಂಪಲು ವಿತರಣೆ

ಮಂಗಳೂರು: ಅಹ್ಮದಿಯಾ ಮುಸ್ಲಿಂ ಜಮಾಅತಿನ ಉಪಘಟಕವಾದ **“ಮಜ್ಲಿಸ್ ಅನ್ಸಾರುಲ್ಲಾಹ”**ದ ವಜ್ರ ಜೂಬಿಲಿ ಆಚರಣೆಯ ಅಂಗವಾಗಿ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ 300 ಒಳರೋಗಿಗಳಿಗೆ ದಿನಾಂಕ 11–10–2015ರಂದು ಹಣ್ಣು ಹಂಪಲು ಮತ್ತು ಬಿಸ್ಕೆಟ್ ಗಳನ್ನು ವಿತರಣೆ ಮಾಡಲಾಯಿತು.

ಸ್ಥಳೀಯ ಅಧ್ಯಕ್ಷ ಮುಹಮ್ಮದ್ ಯೂಸುಫ್, ಮೌಲವಿ ಆಸಿಫ್ ಅಹ್ಮದ್ ಖಾದಿಂ, ಅನ್ಸಾರುಲ್ಲಾಹ ಝಈಂ ಬಿ.ಎಸ್. ಅಬ್ದುರಹೀಂ, ಖುದ್ದಾಮುಲ್ ಅಹ್ಮದಿಯಾ ಝೋನಲ್ ಖಾಯಿದ್ ಎಂ. ಅಬ್ದುಸ್ಸಲಾಂ ಮತ್ತು 6 ಮಂದಿ ಖಾದಿಮ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

==============================================================

## ಅಹ್ಮದಿಯಾ ಸಾಹಿತ್ಯ ವಿತರಣೆ

ಮಂಗಳೂರು: ದಿನಾಂಕ 20–9–2015ರಂದು ಅಹ್ಮದಿಯಾ ಮುಸ್ಲಿಂ ಜಮಾಅತ್ ಮಂಗಳೂರು ಘಟಕದ ವತಿಯಿಂದ ಮಂಗಳೂರಿನ ಪಾಂಡೇಶ್ವರ ಪರಿಸರದಲ್ಲಿ ಅಹ್ಮದಿಯಾ ಸಾಹಿತ್ಯಗಳನ್ನು ವಿತರಣೆ ಮಾಡಲಾಯಿತು.

ಸ್ಥಳೀಯ ಅಧ್ಯಕ್ಷ ಮುಹಮ್ಮದ್ ಯೂಸುಫ್, ಮೌಲವಿ ಆಸಿಫ್ ಅಹ್ಮದ್ ಖಾದಿಂ, ಅನ್ಸಾರುಲ್ಲಾಹ್ ಝಈಂ ಬಿ.ಎಸ್. ಅಬ್ದುರಹೀಂ, ಖುದ್ದಾಮುಲ್ ಅಹ್ಮದಿಯಾ ಝೋನಲ್ ಖಾಯಿದ್ ಎಂ. ಅಬ್ದುಸ್ಸಲಾಮ್ ಮತ್ತು ಹಲವು ಮಂದಿ ಖಾದಿಮ್‌ಗಳು ಭಾಗವಹಿಸಿದರು.

==============================================================

## ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತ್ ಶತವಾರ್ಷಿಕ ಸಮ್ಮೇಳನ

ಕಣ್ಣೂರ್: ಕೇರಳ ಅಹ್ಮದಿಯಾ ಮುಸ್ಲಿಂ ಜಮಾಅತಿನ ಶತವಾರ್ಷಿಕ ಸಮ್ಮೇಳನ ನವಂಬರ್ 22ರಂದು ಕಣ್ಣೂರ್ ಟೌನ್ ಸ್ಕ್ವೇರ್‌ನಲ್ಲಿ ಬಹಳ ವಿಜ್ರಂಭಣೆಯಿಂದ ಜರಗಿತು. ಅಂದು ಪೂರ್ವಾಹ್ನ 10 ಗಂಟೆಗೆ ಅಹ್ಮದಿಯಾ ಧ್ವಜಾರೋಹಣ ಮಾಡಲಾಯಿತು.

ನಾಝಿರ್ ಬೈತುಲ್ ಮಾಲ್(ಖರ್ಚ್) ಜನಾಬ್ ಶುಹೈಬ್ ಸಾಹಿಬ್ ಸಮ್ಮೇಳನವನ್ನು ಉದ್ಘಾಟಿಸಿದರು. ಇಸ್ಲಾಂ ಶಾಂತಿ, ಸೌಹಾರ್ದವನ್ನು ಪ್ರತಿಪಾದಿಸುವ ಧರ್ಮವೆಂದೂ ಭೀಕರವಾದವನ್ನು ಅದು ಕಠಿಣವಾಗಿ ವಿರೋಧಿಸುತ್ತದೆಯೆಂದೂ ಅವರು ಹೇಳಿದರು.

ಅಹ್ಮದಿಯಾ ಮಲಯಾಳಂ ಮುಖವಾಣಿ **“ಸತ್ಯದೂತನ್”** ಸಂಪಾದಕ ಎ.ಎಂ. ಮುಹಮ್ಮದ್ ಸಲೀಂ, ಮೌಲವಿ ಮುಹಮ್ಮದ್ ಇಸ್ಮಾಈಲ್, ಕೆ.ಎಂ. ಅಹ್ಮದ್ ಕೋಯ, ಜಿಲ್ಲಾ ಅಮೀರ್ ಯು. ಮನ್ಸೂರ್ ಅಹ್ಮದ್, ಇ.ಎಚ್. ನಜೀಬ್, ಮೌಲವಿ ನಾಸಿರ್ ಅಹ್ಮದ್, ಮೌಲವಿ ಸುಲ್ತಾನ್ ನಸೀರ್ ಮೊದಲಾದವರು ವಿವಿಧ ವಿಷಯಗಳ ಬಗ್ಗೆ ಭಾಷಣ ಮಾಡಿದರು.

ಶತವಾರ್ಷಿಕ ಜೂಬಿಲಿ ಆಚರಣೆಯ ಅಂಗವಾಗಿ ರಕ್ತದಾನ, ವಾಹನ ಪ್ರಚಾರ, ಎಕ್ಸಿಬಿಷನ್, ಬುಕ್‌ಸ್ಟಾಲ್, ಅಂಬ್ರಲ್ಲ ತಬ್‌ಲೀಗ್, ಜೈಲು ಸಂದರ್ಶನ, ಸಾಹಿತ್ಯ ವಿತರಣೆ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. **“ಸತ್ಯದೂತನ್”** ವಿಶೇಷ ಸಂಚಿಕೆಯನ್ನು ಬಿಡುಗಡೆ ಗೊಳಿಸಲಾಯಿತು.

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ**

ಅಹ್ಮದಿಯರಿಗೆ ಸುತ್ತೋಲೆ

## ತಹ್‌ರೀಕ್ ಜದೀದ್ 82ನೇ ವರ್ಷದ ಆರಂಭ

ನವೆಂಬರ್ 6ರಂದು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲ್ಲಾಹು ತಆಲಾ) ತಹ್‌ರೀಕ್ ಜದೀದ್‌ನ 82ನೇ ವರ್ಷದ ಆರಂಭವನ್ನು ಘೋಷಿಸುತ್ತಾ ಪವಿತ್ರ ಖುರ್‌ಆನಿನ ಈ ವಚನವನ್ನು ಪಠಿಸಿದರು:

**ಲನ್‌ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್; ವಮಾ ತುನ್‌ಫಿಖೂ ಮಿನ್ ಶೈಇನ್ ಫಇನ್ನಲ್ಲಾಹ ಬಿಹೀ ಅಲೀಮ್.**

"ನಿಮಗೆ ಪ್ರಿಯವಾದವುಗಳನ್ನು(ದೇವಮಾರ್ಗದಲ್ಲಿ) ವ್ಯಯಿಸುವವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು." (3: 93)

ಅಲ್ಲಾಹು ಈ ವಚನದಲ್ಲಿ ಮೂಮಿನ್‌ಗಳ ಗಮನವನ್ನು ಸೆಳೆಯುತ್ತಾ ಸೂಚಿಸುತ್ತಾನೆ: ನೀವು ಒಳಿತು ಮಾಡಿ ಅಲ್ಲಾಹನ ಸಂಪ್ರೀತಿ ಗಳಿಸಲು ಇಚ್ಛಿಸುವಿರಾದರೆ, ನೆನಪಿಡಿರಿ, ಒಳಿತು ತ್ಯಾಗವನ್ನು ಬಯಸುತ್ತದೆ. ಆದ್ದರಿಂದ ಅಲ್ಲಾಹನ ಸಂಪ್ರೀತಿ ಗಳಿಸಲು ತ್ಯಾಗಮಾಡಿರಿ. ನಿಮಗೆ ಅತಿ ಹೆಚ್ಚು ಪ್ರೀತಿಯ ವಸ್ತುವನ್ನು ತ್ಯಾಗ ಮಾಡಿರಿ. ನಿಮಗೆ ಪ್ರಯೋಜನಕರವಾದ, ಲಾಭಕರವಾದ ವಸ್ತುವನ್ನು ತ್ಯಾಗಮಾಡಿರಿ. ನಿಮಗೆ ಸುಖ ಶಾಂತಿ ನೀಡುವ ವಸ್ತುಗಳನ್ನು ತ್ಯಾಗಮಾಡಿರಿ. ನಿಮ್ಮ ಸಂತಾನಗಳ ಭವಿಷ್ಯವನ್ನು ಸುಧಾರಣೆಗೊಳಿಸಲು ಉಪಯುಕ್ತವಾಗುವ ವಸ್ತುಗಳನ್ನು ತ್ಯಾಗ ಮಾಡಿರಿ.... ಇಂತಹ ಪರಿಸ್ಥಿತಿಯಲ್ಲಿ, ಒಳಿತು ಗಳಿಸಲು ನೀವು ಪ್ರೀತಿಸುವ ವಸ್ತುಗಳನ್ನು ತ್ಯಾಗಮಾಡಬೇಕೆಂಬುದು ಸಾಮಾನ್ಯ ಜನರಿಗೆ ಆಶ್ಚರ್ಯಕರ ವಿಚಾರವಾಗಿದೆ. ಆದರೆ ಈ ಕಾಲದಲ್ಲೂ ಅಂತಹ ಜನರಿದ್ದಾರೆಂಬುದು ಲೋಕಕ್ಕೆ ತಿಳಿಯದು. ಅವರು ಪವಿತ್ರ ಖುರ್‌ಆನಿನ ಉಪದೇಶ ಪ್ರಕಾರ ವರ್ತಿಸಲು ಪ್ರಯತ್ನಿಸುತ್ತಾರೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಲೋಕದಲ್ಲಿ ಮನುಷ್ಯನು ಧನವನ್ನು ಪ್ರೀತಿಸುತ್ತಾನೆ.... ಯಥಾರ್ಥ ಧರ್ಮನಿಷ್ಠೆ ಮತ್ತು ವಿಶ್ವಾಸ ಪ್ರಾಪ್ತವಾಗಲು ಹೀಗೆ ಹೇಳಲಾಗಿದೆ– ನೀವು ಪ್ರೀತಿಸುವ ವಸ್ತುಗಳನ್ನು ತ್ಯಾಗ ಮಾಡದೆ ಯಥಾರ್ಥ ಒಳಿತನ್ನು ಖಂಡಿತವಾಗಿಯೂ ಪಡೆಯಲಾರಿರಿ. ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಸಹ ಮನುಷ್ಯನ ಸಜ್ಜನಿಕೆ ಮತ್ತು ಧರ್ಮನಿಷ್ಠೆಯ ಅಂತಸ್ತು ಮತ್ತು ಒರೆಗಲ್ಲಾಗಿದೆ."

ಭಾರತದ ಸಾತ್ವಿಕರಾದ ಅಹ್ಮದಿಯರೊಂದಿಗೆ ಅಪೇಕ್ಷಿಸುವುದೇನೆಂದರೆ, ಅವರು ಧನತ್ಯಾಗದ ಆವಶ್ಯಕತೆ ಮತ್ತು ಮಹತ್ವವನ್ನು ಅರಿತುಕೊಂಡು ತಹ್‌ರೀಕ್ ಜದೀದ್ ಚಂದಾದಲ್ಲಿ ಮೊದಲಿಗಿಂತ ಹೆಚ್ಚಾಗಿ ತ್ಯಾಗಮಾಡಲು ಸಿದ್ಧರಾಗಬೇಕು. ಅದರ ಫಲವಾಗಿ ಅಲ್ಲಾಹನ ಅಪಾರ ಅನುಗ್ರಹ, ಕರುಣೆ ಮತ್ತು ಬರಕತ್ತುಗಳಿಗೆ ಪಾತ್ರರಾಗಬೇಕು. ಅಲ್ಲಾಹನು ನಮಗೆ ಆ ಸೌಭಾಗ್ಯವನ್ನು ನೀಡಲಿ. ಆಮೀನ್.

**– ಖುರ್ಶೀದ್ ಅಹ್ಮದ್ ಅನ್ವರ್**
ವಕೀಲುಲ್ ಮಾಲ್,
ತಹ್‌ರೀಕ್ ಜದೀದ್, ಖಾದಿಯಾನ್.

==========================================================

ಆರೋಗ್ಯ

## ಔಷಧೀಯ ಗುಣಗಳ ಗಣಿ ಪಪ್ಪಾಯಿ

**ಪ್ರಸಾದ್ ಮೈರ್ಕಳ**

ಹಣ್ಣುಗಳು ನಿಸರ್ಗದ ಅಪೂರ್ವ ಕೊಡುಗೆ. ನಿಸರ್ಗ ನಮಗೆ ಎಲ್ಲವನ್ನೂ ಕೊಟ್ಟಿದೆ. ಆದರೆ ಅದರ ಉಪಯೋಗವನ್ನು ನಾವು ತಿಳಿದಿರಬೇಕು. ಬಾಯಿಗೆ ರುಚಿ, ಹೊಟ್ಟೆಗೆ ತಂಪೆನಿಸುವ ಈ ಹಣ್ಣುಗಳಲ್ಲಿ ಔಷಧೀಯ ಸತ್ವವೇ ಅಡಗಿದೆ. ಮಿತಿಯರಿತು ದಿನವೂ ಬಳಸಿದರೆ ಇವು ಕಾಯಿಲೆಯನ್ನು ಗುಣಪಡಿಸಬಲ್ಲವು.

ಪಪ್ಪಾಯಿ ಒಂದು ವಿಶಿಷ್ಟ ಹಣ್ಣು. ಇದರ ವೈಜ್ಞಾನಿಕ ಹೆಸರು ಕರಿಕ ಪಪ್ಪಾಯ. ಮಲಯಾಳದಲ್ಲಿ ಪಪ್ಪಾಯಂ, ಕಪ್ಪಾಳಂ ಎಂದೂ ಕರೆಯಲ್ಪಡುತ್ತದೆ. ಈ ಗಿಡವು 6ರಿಂದ 7ಅಡಿ ಎತ್ತರವಿದ್ದು ಯಾವುದೇ ರೆಂಬೆಗಳನ್ನು ಹೊಂದಿರುವುದಿಲ್ಲ. ಕಾಯಿಯು ಹಸಿರಾಗಿದ್ದು ಹಣ್ಣಾದಾಗ ಹಳದಿ ಬಣ್ಣಕ್ಕೆ ತಿರುಗುತ್ತದೆ. ಹೆಣ್ಣು ಮತ್ತು ಗಂಡು ಹೂಗಳು ಒಂದೇ ಗಿಡದಲ್ಲಿ ಅಥವಾ ಬೇರೆ ಬೇರೆ ಗಿಡಗಳಲ್ಲಿ ಕಂಡು ಬರುತ್ತವೆ. ಹಣ್ಣಿನ ತಿರುಳು ಹಳದಿ ಅಥವಾ ಕೆಂಪುಮಿಶ್ರಿತ ಹಳದಿ ಬಣ್ಣವನ್ನು ಹೊಂದಿರುತ್ತದೆ. ಪಪ್ಪಾಯಿಯಲ್ಲಿ ಪ್ರೊಟೀನ್, ಕೊಬ್ಬು, ಸಸಾರಜನಕ 'ಸಿ' ಅನ್ನಾಂಗ 'ಎ' ಜೀವಸತ್ವ ಫಾಸ್ಪರಸ್, ಕಬ್ಬಿನ ಕಾರ್ಬೋಹೈಡ್ರೇಡ್ ನಿಯಾಸಿನ್ ಖನಿಜಾಂಶಗಳು ಹೇರಳವಾಗಿವೆ. ತಂಪಾದ ಈ ಹಣ್ಣು ತಿಂದೊಡನೆ ದೇಹದಲ್ಲಿ ಹೊಸ ಲವಲವಿಕೆ ಮೂಡುತ್ತದೆ. ಕರುಳು ಹಾಗೂ ಜೀರ್ಣಾಂಗಕ್ಕೆ ಸಂಬಂಧಿಸಿದ ಯಾವುದೇ ತೊಂದರೆಯನ್ನು ಇದು ನಿವಾರಿಸಬಲ್ಲದು. ಗ್ಯಾಸ್ಟ್ರಿಕ್ ಸಮಸ್ಯೆಗಿದು ಉತ್ತಮ ಔಷಧ. ಪಪ್ಪಾಯಿಯು ಅದ್ಭುತವಾದ ಬೊಜ್ಜು ನಿವಾರಕ. ನಮ್ಮ ದೇಹದ ಬೆಳವಣಿಗೆಗೆ ಕ್ಯಾಲ್ಸಿಯಂ, ಮೆಗ್ನೇಶಿಯಂ, ಕಬ್ಬಿಣಾಂಶ, ಇತರ ಹಲವು ಬಗೆಯ ಅನ್ನಾಂಗಗಳ ಆವಶ್ಯಕತೆಯಿದೆ. ಈ ಎಲ್ಲ ಜೀವಸತ್ವಗಳೂ ಈ ಹಣ್ಣಿನಲ್ಲಿ ಸಮೃದ್ಧವಾಗಿವೆ.

ಇಂತಹ ನಿಸರ್ಗದ ಕೊಡುಗೆಗಳಲ್ಲೊಂದಾದ ಪಪ್ಪಾಯಿಯನ್ನು ಉಳಿಸಿ ಬೆಳೆಸಬೇಕು. ಕೆಲವರು ಇದರ ಬಗ್ಗೆ 'ಇದೇನು ಪಪ್ಪಾಯಿ ಪದಾರ್ಥವಾ?' ಎಂದು ಹಗುರವಾಗಿ ಮಾತಾಡುವುದುಂಟು. ಇದರ ಬಗ್ಗೆ ಅನಾದರ ಸಲ್ಲದು. ಇದರ ಅದ್ಭುತವಾದ ಗುಣಗಳನ್ನರಿತರೆ ಇದನ್ನು ಉಪಯೋಗಿಸಿಯಾರು. ಪಪ್ಪಾಯಿ ಔಷಧೀಯ ಗುಣಗಳ ಗಣಿಯೇ ಹೌದು! **(ಉದಯವಾಣಿ 20–11–2015)**

## ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ..........

**ಸಂಪಾದಕರಿಗೆ ಪತ್ರ**

## (ಡಿಸೆಂಬರ್ 1977ರ ಸಂಚಿಕೆಯಿಂದ)

ಮಾನ್ಯರೆ,

ವಂದನೆಗಳು, ತಮ್ಮ ಪತ್ರಿಕೆ ಯುಗರಶ್ಮಿ ತಲುಪುತ್ತಿದೆ. ಇದುವರೆಗೆ ಪತ್ರ ಬರೆದು ವೈಯಕ್ತಿಕ ಕೃತಜ್ಞತೆ ಸಲ್ಲಿಸಲಾಗದಿದ್ದುದನ್ನು ಈಗ ಮಾಡುತ್ತಿದ್ದೇನೆ.

ಮುಸ್ಲಿಂ ಬಾಂಧವರ ಧರ್ಮ, ಆಚಾರ ವಿಚಾರಗಳ ಬಗೆಗೆ ತಿಳಿದುಕೊಂಡು ಅವರೊಡನೆ ಆತ್ಮೀಯವಾಗಿರಬಯಸುವ ಜಾತ್ಯತೀತ, ಧರ್ಮಾತೀತ ಭಾರತದ ನನ್ನಂತಹ ಪೌರರಿಗೆ ತಮ್ಮ ಪತ್ರಿಕೆ ಉಪಯುಕ್ತ.

ಗೆಳೆಯರೆ ಒಂದು ಸಲಹೆ, ಯಾವುದೇ ಧರ್ಮದಲ್ಲಿ ದೇವರ ಹೆಸರಿನಲ್ಲಿ ಮಧ್ಯವರ್ತಿ ದಳ್ಳಾಳಿಗಳು ಸೃಷ್ಟಿಸಿದ ನಿಯಮಗಳು, ಆಚಾರಗಳು ಮೂಢನಂಬಿಕೆಗಳಾಗಿ ಮುಂದುವರಿಯುತ್ತಿರುತ್ತವೆ. ಅಂತಹ ಕಂದಾಚಾರ ನಿಯಮಗಳು, ಮುಸ್ಲಿಂ ಧರ್ಮದಲ್ಲಿ ಇಲ್ಲವೆಂದಿಲ್ಲ. ಅಂತಹವುಗಳನ್ನು ಪತ್ತೆಹಚ್ಚಿ ಆ ಬಗೆಗೆ ತಿಳಿಸುವತ್ತ ನಿಮ್ಮ ಪರಿಸ್ಥಿತಿಯಲ್ಲಿ ನಿಮಗೆ ಸಾಧ್ಯವಾದಷ್ಟು ಪ್ರಯತ್ನಿಸಿ. ಕೆಲವು ವೇಳೆ ಖಂಡಿಸಿ ಹೇಳಲಾಗದಿದ್ದರೂ ವಿವರಿಸಿ ತೀರ್ಮಾನವನ್ನು ಜನರಿಗೆ ಬಿಟ್ಟುಕೊಡಿ. ಇದರಿಂದ ಮುಸ್ಲಿಂ ಬಾಂಧವರಲ್ಲಿ ವೈಜ್ಞಾನಿಕ, ವೈಚಾರಿಕ ಸುಧಾರಣೆ ಆದಂತಾಗುತ್ತದೆ.

ವಿ. ಸೂ: ಸುಧಾರಣೆ, ವೈಚಾರಿಕತೆ ಎಂದಾಗ ದೇವರು, ಧರ್ಮ ಧಿಕ್ಕರಿಸಿ ಹೊರಡುವುದಲ್ಲ. ಅವುಗಳನ್ನು ಉಳಿಸಿ, ಬೆಳೆಸಿಕೊಂಡು ಸಾಮಾಜಿಕ ಲಾಭಕ್ಕಾಗಿ ಸರಿ, ತಪ್ಪುಗಳನ್ನು ಹುಡುಕಿಕೊಳ್ಳುವುದು.

ಇಂತು,

**ರಾಮಲಿಂಗಯ್ಯ ಉಪ್ಪಿನಕೆರೆ,**

ಸಂಪಾದಕರು, ಆರೋಗ್ಯನಿಧಿ.

ಮೈಸೂರು.

---

## (ಮಾರ್ಚ್ 1978ರ ಸಂಚಿಕೆಯಿಂದ)

....ಯುಗರಶ್ಮಿಯಲ್ಲಿನ ತಮ್ಮ ಬರೆಹ **"ಈದ್ ಆಚರಣೆ"** ನನ್ನನ್ನು ಓದಿಸಿತು. ಹಾಗೆಯೇ ಬುದ್ಧ, ಪೈಗಂಬರ, ಯೇಸು ಮಹಾತ್ಮರ ಲೇಖನಗಳೂ ಯುಗರಶ್ಮಿಯಲ್ಲಿವೆ. ಹೀಗೆ ಧರ್ಮ ಯಾವುದೇ ಇರಲಿ, ಅದರಲ್ಲಿನ ತತ್ತ್ವ, ಆದರ್ಶಾದಿ ಮೂಲೋದ್ದೇಶಗಳನ್ನು ಅರ್ಥಮಾಡಿಕೊಂಡಾಗ ನಮ್ಮಲ್ಲಿರಬಹುದಾದ ಸಂಕುಚಿತ ದೃಷ್ಟಿ ದೂರವಾಗುತ್ತದೆ. ನಮ್ಮ ನಂಬಿಕೆಗಳಿಗೆ ಹೆಚ್ಚು ಅರ್ಥ ಬರುತ್ತದೆ.

**ವಾಮನ ನಂದಾವರ.**

ಕಾರ್ಯದರ್ಶಿ, ಸಾಹಿತ್ಯ ಸಂಘ.

ಕೋಟೆಕಾರು.

---

....ತಮ್ಮ ಪತ್ರಿಕೆ ಧರ್ಮಗಳ ತುಲನಾತ್ಮಕ ಅಧ್ಯಯನಕ್ಕೆ ತುಂಬಾ ಅನುಕೂಲವಾಗಿದೆ. ಯೇಸುಕ್ರಿಸ್ತರು ಮೃತರಾದುದು ಎಲ್ಲಿ? ಎಂಬ ಪುಸ್ತಕ ವಿಭಾಗ ವಿಶೇಷ ಅಧ್ಯಯನಕ್ಕೆ ತೀರ ಅಗತ್ಯವಿದೆ.

**ಜಿ. ಯಂ. ವೇದೇಶ್ವರ**

Honorary Director & General Secretary,
Study Circle.

ಗೋಕರ್ಣ.

---

ನಿಮ್ಮ ಯುಗರಶ್ಮಿ ತ್ರೈಮಾಸಿಕವನ್ನು ಓದಿ ಸಂತೋಷವಾಯಿತು. ನನಗೆ ಮೊದಲಿನಿಂದಲೂ ಇಸ್ಲಾಂ ಧರ್ಮದ ಬಗ್ಗೆ ತಿಳಿಯುವ ಕುತೂಹಲವಿತ್ತು. ಆದರೆ ಉರ್ದುವಿನಲ್ಲಿ ಮಾತ್ರ ಓದಬೇಕೇನೋ ಎಂದುಕೊಂಡಿದ್ದೆ. ನೀವು ನಿಮ್ಮ ಪವಿತ್ರ ಖುರ್‌ಆನಿನ ಭಾಗಗಳನ್ನು ಸರಳವಾದ ಕನ್ನಡದಲ್ಲಿ ತಿಳಿಸುತ್ತಿರುವುದು ಸಂತೋಷ. ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ ಪ್ರಕಟಿಸುತ್ತಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಇನ್ನೊಬ್ಬರ ಆಸ್ತಿಯನ್ನು ಅನ್ಯಾಯದಿಂದ ಸಂಪಾದಿಸಲು ಅಧಿಕಾರಿಗಳಿಗೆ ಚಿಕ್ಕಾಸು ಲಂಚ ಕೊಡಬಾರದು ಎನ್ನುವುದು ಲಂಚಗುಳಿತನದಿಂದ ತುಂಬಿರುವ ಭಾರತಕ್ಕೆ ಅತ್ಯವಶ್ಯಕವಾದ ತತ್ವ.....

ಮುಸ್ಲಿಮರಲ್ಲಿ ಅನೇಕ ಅಂಧಶ್ರದ್ಧೆಗಳಿವೆ. ಅದಕ್ಕೆ ಧರ್ಮದ ಆಧಾರವಿದೆಯೋ ಇಲ್ಲವೋ ತಿಳಿಸಿ......

**ಪಿ. ದೇವರಾಜು.**

ಮೈಸೂರು ಜಿಲ್ಲಾ ಡಿ. ಕೆ. ಪ್ರಚಾರಕ

ಮೈಸೂರು.

---

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

ಓದಿದ್ದು

## ಐಸಿಸ್ ಸೃಷ್ಟಿಸಿದ್ದು ಅಮೆರಿಕ!

### ♦'ವಿಶ್ವದ ದೊಡ್ಡಣ್ಣ'ನ ರಹಸ್ಯ ಗುಪ್ತಚರ ದಾಖಲೆಗಳಿಂದ ಬಹಿರಂಗ

### ♦ ಹೌದೆಂದ ಅಮೆರಿಕ ಗುಪ್ತಚರ ಅಧಿಕಾರಿ

ಹೊಸದಿಲ್ಲಿ, ಆ.12: ಇರಾಕ್ ಹಾಗೂ ಸಿರಿಯಾದ ಬಹುಭಾಗವನ್ನು ಆಕ್ರಮಿಸಿಕೊಂಡು, ನೂರಾರು ಮಂದಿಯ ಶಿರಚ್ಛೇದ ಪ್ರಕರಣಗಳಿಂದ ಕುಖ್ಯಾತಿಗೀಡಾಗಿರುವ ಇಸ್ಲಾಮಿಕ್ ಸ್ಟೇಟ್ (ಐಸಿಸ್) ಉಗ್ರ ಸಂಘಟನೆಯ ಸೃಷ್ಟಿಕರ್ತರು ಯಾರು ಎಂಬ ಪ್ರಶ್ನೆಗೆ ಉತ್ತರ ಲಭಿಸಿದೆ.

ಈ ಹಿಂದೆ ಒಸಾಮಾ ಬಿನ್ ಲಾದನ್ ಹಾಗೂ ಅಲ್‌ಕಾಯಿದಾವನ್ನು ಸಾಕಿ ಸಲಹಿ, ತಿರುಗಿಬಿದ್ದಾಗ ಅದರ ಸಂಹಾರಕ್ಕೆ ತೊಡೆ ತಟ್ಟಿ ನಿಂತಿದ್ದ 'ವಿಶ್ವದ ದೊಡ್ಡಣ್ಣ' ಅಮೆರಿಕವೇ ಐಸಿಸ್‌ನ ಸೃಷ್ಟಿಕರ್ತ ಎಂಬ ಸ್ಫೋಟಕ ಮಾಹಿತಿ ಲಭಿಸಿದೆ. ಅಮೆರಿಕದ ರಕ್ಷಣಾ ಗುಪ್ತಚರ ಸಂಸ್ಥೆಯ ರಹಸ್ಯ ದಾಖಲೆಗಳು ಬಹಿರಂಗವಾಗಿದ್ದು, ಅದರಲ್ಲಿ ಈ ಮಾಹಿತಿ ಇದೆ. ಅಲ್ಲದೆ ಕೆಲ ದಿನಗಳ ಹಿಂದೆ ಅಲ್-ಜಝೀರಾ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಅಮೆರಿಕದ ರಕ್ಷಣಾ ಗುಪ್ತಚರ ಸಂಸ್ಥೆ ಮಾಜಿ ನಿರ್ದೇಶಕ ಲೆ। ಜನರಲ್ ಮೈಕಲ್ ಟಿ. ಫ್ಲಿನ್ ಅವರು ಕೂಡ ಇದನ್ನು ಖಚಿತಪಡಿಸಿದ್ದಾರೆ.

ಐಸಿಸ್ ತಲೆ ಎತ್ತಿದ್ದರ ಹಿಂದೆ ಅಮೆರಿಕ, ಟರ್ಕಿ ಹಾಗೂ ಅರಬ್ ರಾಷ್ಟ್ರಗಳ ಕೈವಾಡವಿದೆ ಎಂಬ ಶಂಕೆಯನ್ನು ಸಿರಿಯಾದ ಮಾಜಿ ಅಧ್ಯಕ್ಷ ಬಶರ್ ಅಲ್ ಅಸಾದ್ ಅವರಿಗೆ ಸಲಹೆಗಾರ್ತಿಯಾಗಿದ್ದ ಬೌಥಾಯಿನಾ ಶಾಬನ್ ಅವರು 2012ರಲ್ಲೇ ತಿಳಿಸಿದ್ದರು. ಸಿರಿಯಾ ಸರಕಾರವನ್ನು ಪತನಗೊಳಿಸುವ ಉದ್ದೇಶದಿಂದ ಅಮೆರಿಕ ಮತ್ತಿತರೆ ರಾಷ್ಟ್ರಗಳು ಉಗ್ರರಿಗೆ ಬೆಂಬಲ ನೀಡುತ್ತಿವೆ ಎಂದು ಮಾಹಿತಿ ನೀಡಿದ್ದರು. ಆದರೆ ಅದನ್ನು ಆಗ ಅಮೆರಿಕ, ಟರ್ಕಿ ಆದಿಯಾಗಿ ಆರೋಪ ಹೊತ್ತಿದ್ದ ಎಲ್ಲ ದೇಶಗಳೂ ನಿರಾಕರಿಸಿದ್ದವು. **(ಉದಯವಾಣಿ 13-8-2015)**

---

## ನಮ್ಮ ತಪ್ಪಿನಿಂದ ಐಸಿಸ್ ಜನನ: ಬ್ಲೇರ್ ವಿಷಾದ

ಲಂಡನ್: 2003ರಲ್ಲಿ ಇರಾಕ್ ಮೇಲಿನ ಆಕ್ರಮಣಕ್ಕೆ ಬ್ರಿಟನ್ ಮಾಜಿ ಪ್ರಧಾನಿ ಟೋನಿ ಬ್ಲೇರ್ ಮತ್ತೊಮ್ಮೆ ಕ್ಷಮೆ ಯಾಚಿಸಿದ್ದಾರೆ. ಇರಾಕ್‌ನಲ್ಲಿ ನಾವು ಕೈಗೊಂಡ ತಪ್ಪು ನಿರ್ಧಾರಗಳು ಐಸಿಸ್ ಉಗ್ರರ ಉಗಮಕ್ಕೆ ಕಾರಣವಾಯಿತು ಎಂಬುದನ್ನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಸಿಎನ್‌ಎನ್‌ಗೆ ಸಂದರ್ಶನ ನೀಡಿರುವ ಅವರು, 'ಸದ್ದಾಂ ಹುಸೇನ್ ಪದಚ್ಯುತಿಗೆ ನಾನು ಮರುಗುತ್ತಿಲ್ಲ. ಆದರೆ, ಗುಪ್ತಚರ ವೈಫಲ್ಯ ಮತ್ತು ಯೋಜನೆಯಲ್ಲಾದ ತಪ್ಪುಗಳಿಗೆ ಕ್ಷಮೆ ಕೋರುತ್ತೇನೆ. ಅಮೆರಿಕ ಮತ್ತು ಬ್ರಿಟನ್ ಜಂಟಿಯಾಗಿ ನಡೆಸಿದ ಆಕ್ರಮಣ ಅಂತಿಮವಾಗಿ ಸಿರಿಯಾ ಮತ್ತು ಇರಾಕ್‌ನಲ್ಲಿ ಐಸಿಸ್‌ನ ಉಗಮಕ್ಕೆ ಕಾರಣವಾಯಿತು' ಎಂದು ಹೇಳಿದ್ದಾರೆ. **(ಉದಯವಾಣಿ 26-10-2015)**

---

## ಕೇಂದ್ರ ಸರಕಾರಕ್ಕೆ 'ಹಿಂದೂ' ಪದದ ಅರ್ಥವೇ ಗೊತ್ತಿಲ್ಲ!

ಇಂದೋರ್, ಅ. 11: 'ಹಿಂದೂ' ಎಂದರೇನು ಎಂಬ ಪ್ರಶ್ನೆಯನ್ನು ಯಾರಿಗಾದರೂ ಕೇಳಿದರೆ ಅದೊಂದು ಧರ್ಮ, ನಾಗರಿಕತೆ, ಜೀವನ ಶೈಲಿ ಎಂಬ ಉತ್ತರ ಲಭಿಸುತ್ತದೆ. ಆದರೆ ಕೇಂದ್ರ ಸರಕಾರಕ್ಕೆ ಹಿಂದೂ ಎಂಬ ಪದಕ್ಕೆ ಅರ್ಥವೇ ಗೊತ್ತಿಲ್ಲ! ಅಚ್ಚರಿಯಾದರೂ ಇದು ನಿಜ. ಮಧ್ಯಪ್ರದೇಶದ ನೀಮುಚ್ ಪಟ್ಟಣದ ನಿವಾಸಿ ಚಂದ್ರಶೇಖರ್ ಗೌರ್ ಎಂಬವರು ಮಾಹಿತಿ ಹಕ್ಕು ಕಾಯ್ದೆಯಡಿ ಹಿಂದೂ ಪದದ ಅರ್ಥ ಹಾಗೂ ವಿವರಣೆ ಕೇಳಿ ಸಲ್ಲಿಸಿದ್ದ ಅರ್ಜಿಗೆ ಕೇಂದ್ರ ಗೃಹ ಸಚಿವಾಲಯ ಇಂತಹ ಉತ್ತರ ನೀಡಿದೆ. ಒಂದು ಸಮುದಾಯವನ್ನು ಯಾವ ಆಧಾರದ ಮೇಲೆ ಹಿಂದೂ ಎಂದು ಪರಿಗಣಿಸಲಾಗಿದೆ? ಹಿಂದೂಗಳನ್ನು ಬಹುಸಂಖ್ಯಾತ ಸಮುದಾಯ ಎಂದು ಏಕೆ ಪರಿಗಣಿಸಲಾಗಿದೆ? ಎಂದು ಗೌರ್ ಅವರು ಆರ್‌ಟಿಐನಡಿ ಉತ್ತರ ಬಯಸಿದ್ದರು. 'ಹಿಂದೂ ಎಂಬ ಪದದ ಅರ್ಥ ಹಾಗೂ ವಿವರಣೆ ಬಗ್ಗೆ ಗೊತ್ತಿಲ್ಲ ಎಂದು ಜು.31ರಂದು ಕೇಂದ್ರ ಸರಕಾರ ಉತ್ತರ ನೀಡಿದೆ' ಎಂದು ಗೌರ್ ತಿಳಿಸಿದ್ದಾರೆ. **(ಉದಯವಾಣಿ 12-10-2015)**

---

## ಹೆಣದೊಂದಿಗೇ 21 ಲಕ್ಷ ಹಣವನ್ನೂ ಸುಟ್ಟರು!

ವ್ಯಕ್ತಿ ಸತ್ತ ಬಳಿಕ ಏನನ್ನೂ ತೆಗೆದುಕೊಂಡು ಹೋಗುವುದು ಸಾಧ್ಯವಿಲ್ಲ. ಆದರೆ ಚೀನದ ವ್ಯಕ್ತಿಗೆ ಇದರಲ್ಲೆಲ್ಲ ನಂಬಿಕೆ ಇಲ್ಲ. ಅದಕ್ಕಿಂತ ಹೆಚ್ಚಾಗಿ ಜೀವಮಾನವಿಡೀ ತನ್ನನ್ನು ನೋಡಿಕೊಳ್ಳದ ಮಕ್ಕಳಿಗೆ ನಯಾಪೈಸೆಯೂ ಸಿಗೋದು ಬೇಡ ಎಂಬ ಹಠ. ಅದಕ್ಕಾಗಿ ಆತನ ಹೆಣದೊಂದಿಗೆ ಹಣವನ್ನೂ ಸುಟ್ಟು ಬೂದಿ ಮಾಡಲಾಗಿದೆ. ಅದೂ ಅಷ್ಟಿಷ್ಟಲ್ಲ, ಬರೋಬ್ಬರಿ 21.37 ಲಕ್ಷ ರೂ.! ಚೀನದ ಜಿಂಗಾಗ್ಸು ಪ್ರಾಂತ್ಯದ ಟಾವೋ ತನ್ನ ಜೀವಮಾನದ ಸಂಪಾದನೆ 21.37 ಲಕ್ಷ ರೂ. ಜೊತೆಗೆ ಸುಟ್ಟು ಕರಕಲಾಗಿದ್ದಾನೆ. ಆತ ಬಾಡಿಗೆ ಮನೆ ಹಿಡಿದು ನಗರದಲ್ಲಿ ಕಸ ಹೆಕ್ಕುವ ಕೆಲಸ ಮಾಡುತ್ತಿದ್ದ. ವಯಸ್ಸಾದಾಗ ನನ್ನೊಂದಿಗೆ ಇರಿ ಎಂದು ಇಬ್ಬರು ಮಕ್ಕಳಿಗೆ ಕೇಳಿಕೊಂಡಿದ್ದರೂ ಬಂದಿರಲಿಲ್ಲ. ಇದಕ್ಕಾಗಿ ಆತ ಕೋಪಗೊಂಡಿದ್ದು, ಸತ್ತರೆ ಮಕ್ಕಳಿಗೆ ನಯಾಪೈಸೆ ಕೊಡೋದಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದ. ಕೊನೆಗೊಂದು ದಿನ ಮನೆಯಲ್ಲಿ ಆತ ಮೃತಪಟ್ಟಿದ್ದು ಸ್ಥಳೀಯ ಸ್ಮಶಾನದಲ್ಲಿ ಆತನೊಂದಿಗೆ ಹಣವನ್ನೂ ಸುಡಲಾಗಿದೆ. ಈ ಕಥೆ ಇದೀಗ ಚೀನದಲ್ಲಿ ಭಾರೀ ಸುದ್ದಿಯಾಗಿದೆಯಂತೆ!

**(ಉದಯವಾಣಿ 12-10-2015)**

## ಇಸ್ಲಾಂ ನೈಜ ಚಿತ್ರಣ ತಿಳಿವ ಅಗತ್ಯ ಇದೆ: ಮೋದಿ

ಹೊಸದಿಲ್ಲಿ, ಆ.30: ಇಸ್ಲಾಂನ ನೈಜ ಚಿತ್ರಣವನ್ನು ಇಡೀ ವಿಶ್ವ ಅರಿಯುವ ಅಗತ್ಯವಿದೆ ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ಯಾವುದೇ ಸಮುದಾಯಕ್ಕೆ ಸೇರಿದವರಾಗಿದ್ದರೂ ಸೂಫೀ ಸಂಸ್ಕೃತಿಯ ಬಗ್ಗೆ ತಿಳಿಯಿರಿ ಎಂದು ಮನವಿ ಮಾಡಿದ್ದಾರೆ. 'ಮನ್ ಕೀ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲವು ದಿನಗಳ ಹಿಂದೆ ಸೂಫಿ ಸಂತರು ಹಾಗೂ ವಿದ್ವಾಂಸರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಅವರು ಆಡಿದ ಮಾತು, ಶೈಲಿ ನನ್ನ ಕಿವಿಗೆ ಇಂಪೆನಿಸುತ್ತಿತ್ತು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

**(ಉದಯವಾಣಿ 31-08-2015)**

==========================================================================

## ಮಿಲನ ಇಲ್ಲದೆ ಎರಡನೇ ಬಾರಿ ಮೊಟ್ಟೆ ಇಟ್ಟ ಹಾವು!

ಮಿಲನ ನಡೆಸದೆ ಇಲ್ಲೊಂದು ಹಾವು ಎರಡನೇ ಬಾರಿಗೆ ಮೊಟ್ಟೆ ಇಟ್ಟಿದೆ. ಹೌದು ಅಮೆರಿಕದ ಆಗ್ನೇಯ ಮಿಸೌರಿಯ ಸೆರೆಯಲ್ಲಿರುವ ಹಾವೊಂದು ಇಂಥದ್ದೊಂದು ವಿಸ್ಮಯಕಾರಿ ಸಂಗತಿಗೆ ಕಾರಣವಾಗಿದೆ. ಹಳದಿ ಬಣ್ಣದ ಈ ಹೆಣ್ಣು ನೀರಿನ ಹಾವು ಕಳೆದ ವರ್ಷ ಕೂಡ ಇದೇ ಸಮಯದಲ್ಲಿ ಮೊಟ್ಟೆ ಇಟ್ಟಿತ್ತು. ವಿಚಿತ್ರವೆಂದರೆ ಎಂಟು ವರ್ಷಗಳಿಂದ ಈ ಹಾವನ್ನು ಯಾವುದೇ ಗಂಡು ಸಂಗಾತಿ ಇಲ್ಲದೇ ಒಂಟಿಯಾಗಿಡಲಾಗಿದೆ. ಈ ಬಾರಿ ಇಟ್ಟ ಮೊಟ್ಟೆ ಉಳಿದಿಲ್ಲ. ಆದರೆ ಕಳೆದ ಬಾರಿ ಮೊಟ್ಟೆ ಇಟ್ಟದನ್ನು ದಕ್ಷಿಣ ಸೇಂಟ ಲೂಯಿಸ್ ಪ್ರಕೃತಿ ಕೇಂದ್ರದಲ್ಲಿ ಪ್ರದರ್ಶನಕ್ಕಿಡಲಾಗಿದೆ. ಕೆಲವೇ ಕೆಲವು ಹಾವುಗಳಲ್ಲಿ ಮಾತ್ರ ಇಂತಹ ಅಂಡಾಣು ಇರುತ್ತವಂತೆ. ಇವುಗಳಲ್ಲಿ ಯಾವುದೇ ಗಂಡು ಅನುವಂಶೀಯತೆ ಇರುವುದಿಲ್ಲ. ಅಂಡಾಣುವಿನಲ್ಲಿ ಗರ್ಭ ಸಂತತಿ ಅಭಿವೃದ್ಧಿ ಹೊಂದುವ ಮೂಲಕ ಮಿಲನವಿಲ್ಲದೆ ಅಲ್ಯೆಂಗಿಕತೆಯಿಂದ ಸಂತಾನೋತ್ಪತ್ತಿ ತಾಳುತ್ತದೆ. ಇಂತಹದರ ದೇಹಗಳು ಧ್ರುವವಾಗಿದ್ದು, ಮೊಟ್ಟೆ ಇಟ್ಟ ಬಳಿಕ ಅವು ಉಳಿಯುವುದು ತೀರಾ ಕಡಿಮೆ. **(ಉದಯವಾಣಿ 22-09-2015)**

==========================================================================

## ಅನುವಾದಕಿಗೆ ವೇದಿಕೆ ಮೇಲೆ ಸ್ಥಳ ನಿರಾಕರಣೆ – ಪುಸ್ತಕ ಬಿಡುಗಡೆ ಕಾರ್ಯಕ್ರಮ ರದ್ದು

ತೃಶ್ಶೂರು, ಸೆ.27: ಮಾಜಿ ರಾಷ್ಟ್ರಪತಿ ದಿ| ಡಾ| ಎ.ಪಿ.ಜೆ ಅಬ್ದುಲ್ ಕಲಾಂ ಅವರ ಕೊನೆಯ ಪುಸ್ತಕದ ಮಲಯಾಳ ಅನುವಾದ ಕೃತಿಯ ಬಿಡುಗಡೆ ಕಾರ್ಯಕ್ರಮ ಮಹಿಳೆ ವೇದಿಕೆಯಲ್ಲಿರಬಾರದು ಎಂದು ಬ್ರಹ್ಮ ವಿಹಾರಿ ದಾಸ್ ಸ್ವಾಮೀಜಿ ನಿಯಮದಿಂದಾಗಿ ರದ್ದುಗೊಂಡಿತು. ಡಾ| ಕಲಾಂ ಅವರ ಟ್ರಾನ್ಸೆಂಡೆನ್ಸ್ ಮೈ ಸ್ಪಿರಿಚುವಲ್ ಎಕ್ಸ್‌ಪೀರಿಯನ್ಸ್ ವಿದ್ ಪ್ರಮುಖ್ ಸ್ವಾಮೀಜಿ ಪುಸ್ತಕವನ್ನು ಶ್ರೀದೇವಿ ಎಸ್. ಕರ್ತಾ ಕಾಲಾತೀತಂ ಎಂಬ ಹೆಸರಿನಲ್ಲಿ ಮಲಯಾಳಕ್ಕೆ ಅನುವಾದ ಮಾಡಿದ್ದಾರೆ.

ತೃಶ್ಶೂರಿನ ಸಾಹಿತ್ಯ ಅಕಾಡೆಮಿ ಹಾಲ್‌ನಲ್ಲಿ ಈ ಪುಸ್ತಕ ಬಿಡುಗಡೆ ಕಾರ್ಯಕ್ರಮ ಇಟ್ಟುಕೊಳ್ಳಲಾಗಿತ್ತು. ಸ್ವಾಮಿ ಪ್ರಮುಖ್‌ಜಿ ಪ್ರತಿನಿಧಿಯಾಗಿ ಅಹ್ಮದಾಬಾದ್‌ನ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ್ ಸಂಸ್ಥಾದ ಬ್ರಹ್ಮ ವಿಹಾರಿ ದಾಸ್ ಸ್ವಾಮೀಜಿಯನ್ನು ಆಹ್ವಾನಿಸಲಾಗಿತ್ತು. ತಾನಿರುವ ವೇದಿಕೆಯಲ್ಲಿ ಮಹಿಳೆ ಇರಬಾರದು, ಮಾತ್ರವಲ್ಲ ಮಹಿಳೆಯರ ನೆರಳು ಕೂಡ ತನ್ನ ಮೇಲೆ ಬೀಳಬಾರದು ಎಂದು ಸ್ವಾಮೀಜಿ ಹೇಳಿದ ಕಾರಣ ಪ್ರಕಾಶಕರಾದ ಕರೆಂಟ್ ಬುಕ್ಸ್‌ನವರು ಲೇಖಕಿಯ ಹೆಸರನ್ನು ಆಹ್ವಾನಪತ್ರಿಕೆಯಲ್ಲಿ ಹಾಕಿರಲಿಲ್ಲ, ಮಾತ್ರವಲ್ಲ ಮಹಿಳೆಯರು ಸ್ವಾಮೀಜಿ ಎದುರಿಗೆ ಕಾಣಿಸಿಕೊಳ್ಳಬಾರದೆಂದು ಮುಂದಿನ ನಾಲ್ಕು ಸೀಟುಗಳನ್ನು ಸ್ವಾಮೀಜಿ ಅನುಯಾಯಿಗಳಿಗೆ ಮೀಸಲಿಟ್ಟಿದ್ದರು. ಹಿರಿಯ ಸಾಹಿತಿ ಎಂ.ಟಿ. ವಾಸುದೇವನ್ ನಾಯರ್ ಪುಸ್ತಕ ಬಿಡುಗಡೆಗೊಳಿಸಬೇಕಿತ್ತು. ಶ್ರೀದೇವಿ ಈ ವಿಷಯವನ್ನು ಫೇಸ್‌ಬುಕ್‌ನಲ್ಲಿ ಬಹಿರಂಗಪಡಿಸಿದ ಬಳಿಕ ಕೇರಳಾದ್ಯಂತ ಭಾರೀ ಪ್ರತಿಭಟನೆ ವ್ಯಕ್ತವಾಯಿತು. ಪ್ರತಿಭಟನಕಾರರು ಕಾರ್ಯಕ್ರಮ ನಡೆಯುವ ಸಭಾಗೃಹದ ಸುತ್ತ ಜಮಾಯಿಸಿದ ಕಾರಣ ಅತಿಥಿಗಳ್ಯಾರೂ ಬರಲಿಲ್ಲ. ಕೊನೆಗೆ ಕಾರ್ಯಕ್ರಮವನ್ನೇ ರದ್ದು ಮಾಡಬೇಕಾಯಿತು. **(ಉದಯವಾಣಿ 28-09-2015)**

==========================================================================

## ಪಾಕ್‌ನಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ – ಅಮೆರಿಕದ ವಿದೇಶಾಂಗ ವರದಿ ಬಹಿರಂಗ

ವಾಶಿಂಗ್ಟನ್, ಅ.15: ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಿದವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಲು ವಿಫಲವಾಗಿರುವುದಕ್ಕಾಗಿ ಪಾಕ್ ಸರಕಾರವನ್ನು ಬುಧವಾರ ಅಮೆರಿಕವು ತರಾಟೆಗೆ ತೆಗೆದುಕೊಂಡಿದೆ. ಇಂತಹ ವಾತಾವರಣವು ಅಸಹಿಷ್ಣುತೆ ಹಾಗೂ ಹಿಂಸಾಕೃತ್ಯಗಳಿಗೆ ಪ್ರೇರಣೆ ನೀಡುತ್ತವೆಯೆಂದು ಅದು ಅಸಮಾಧಾನ ವ್ಯಕ್ತಪಡಿಸಿದೆ.

"ಪಾಕಿಸ್ತಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಿದವರ ವಿಚಾರಣೆ ನಡೆಸಲು ಅಥವಾ ಅವರನ್ನು ಬಂಧಿಸುವಲ್ಲಿ ಪಾಕ್ ಸರಕಾರದ ವೈಫಲ್ಯವು, ಸ್ವೇಚ್ಛಾಚಾರದ ವಾತಾವರಣವನ್ನು ಸೃಷ್ಟಿಸಿದೆ. ಈ ವಾತಾವರಣವು ಇನ್ನಷ್ಟು ಅಸಹಿಷ್ಣುತೆ ಹಾಗೂ ಹಿಂಸಾಕೃತ್ಯಗಳಿಗೆ ಪ್ರೇರೇಪಣೆ ನೀಡಿದೆ" ಎಂದು 2014ನೆ ವರ್ಷದ ಅಂತರ್‍ರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕದ ವಾರ್ಷಿಕ ವರದಿ ಹೇಳಿದೆ. ಸರಕಾರದ ನೀತಿಗಳು ಕೂಡಾ ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತ ಧಾರ್ಮಿಕ ಗುಂಪುಗಳ ಸದಸ್ಯರನ್ನು ರಕ್ಷಿಸಲು ವಿಫಲವಾಗಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಜಾನ್ ಕೆರ್ರಿ ಬಿಡುಗಡೆಗೊಳಿಸಿದ ಈ ವರದಿ ಹೇಳಿದೆ.

"ಇದರ ಜೊತೆಗೆ ದೇವನಿಂದನೆಯ ಕುರಿತಾದ ಹುಸಿ ಆರೋಪಗಳ ವಿರುದ್ಧ ಕ್ರಮಕೈಗೊಳ್ಳಲು ಸರಕಾರದ ವೈಫಲ್ಯ ಹಾಗೂ ಅಹ್ಮದಿಯಾ ಮುಸ್ಲಿಂ ಸಮುದಾಯವನ್ನು ಅಸಿಂಧುಗೊಳಿಸುವ ಉದ್ದೇಶದಿಂದ ರೂಪಿಸಲಾದ ಕಾನೂನುಗಳಿಂದಾಗಿ ತಮ್ಮ ಧಾರ್ಮಿಕ ನಂಬಿಕೆಗಳನ್ನು

ಮುಕ್ತವಾಗಿ ಆಚರಿಸಲು ಅಲ್ಪಸಂಖ್ಯಾತರು ಭೀತಿಪಡುತ್ತಿದ್ದಾರೆ" ಎಂದು ವರದಿ ತಿಳಿಸಿದೆ. ಜೂನ್ 20ರಂದು ಅಲ್ಪಸಂಖ್ಯಾತರ ಹಕ್ಕುಗಳ ಕುರಿತಾಗಿ ಸುಪ್ರೀಂಕೋರ್ಟ್ ಪ್ರಕಟಿಸಿದ್ದ ವಿಸ್ತೃತವಾದ ತೀರ್ಪಿಗೆ ಅನುಗುಣವಾಗಿ, ಸರಕಾರವು ವಿವಿಧ ಧಾರ್ಮಿಕ ಗುಂಪುಗಳ ಪ್ರತಿನಿಧಿಗಳನ್ನೊಳಗೊಂಡ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವನ್ನು ರಚಿಸಿತ್ತು. **(ವಾರ್ತಾ ಭಾರತಿ 16–10–2015)**

================================================================

## ಅಭಿಮತ

**♦ಮುಜಫರ್ ಹುಸೇನ್**

ವಿಭಜನೆಯ ನಂತರ ಪಾಕಿಸ್ಥಾನದಲ್ಲಿ ಅಲ್ಪಸಂಖ್ಯಾತ ಸಮುದಾಯವು ದಿನೇ ದಿನೇ ಅತಿವೇಗದಿಂದ ಇಳಿಮುಖವಾಗುತ್ತಲಿದೆ. ಇದು ಕೇವಲ ಅಲ್ಲಿನ ಹಿಂದುಗಳಿಗೆ ಸಂಬಂಧಿತ ವಿಷಯವಲ್ಲ. ಪಾಕಿಸ್ಥಾನದಲ್ಲಿ ಕಾದಿಯಾನಿಗಳೊಂದಿಗೆ ಹೇಗೆ ವರ್ತಿಸುತ್ತಾರೆಂದು ತಿಳಿಸುವ ಅಗತ್ಯವೇನಿಲ್ಲ. ಪಂಜಾಬ್ ಹಾಗೂ ಇತರ ಪರಿಸರಗಳಲ್ಲಿ ಅವರ ಹತ್ಯೆಗಳಿಂದೂ ಸರ್ವೇ ಸಾಮಾನ್ಯವೆಂಬಂತಾಗಿವೆ. 'ಕಾದಿಯಾನಿ'ಗಳು ನಿಜವಾದ ಮುಸ್ಲಿಮರಾಗಿದ್ದಾರೆ. ಆದರೆ ಅಲ್ಲಿನ ಸರಕಾರವು ಇದನ್ನೊಪ್ಪಲು ಸಿದ್ಧವಿಲ್ಲ! ಆದಕಾರಣ ಪದೇ ಪದೇ ಸುನ್ನಿ – ಕಾದಿಯಾನಿಗಳ ಘರ್ಷಣೆ ತಲೆಯೆತ್ತುತ್ತಿರುತ್ತದೆ. ಪಾಕಿಸ್ಥಾನದಲ್ಲಿ ವಿಭಜನೆಯ ನಂತರ ಪಲಾಯನ ಮಾಡುವ ಮುಸ್ಲಿಮ್ ಮತ್ತು ಉರ್ದು ಭಾಷಿಕರನ್ನು ಮಾತ್ರ ನಿಜವಾದ, ಪ್ರಾಮಾಣಿಕ ಮುಸ್ಲಿಂ ಎಂದು ಭಾವಿಸುತ್ತಾರೆ. ಅಂತೆಯೇ ಬಂಗಾಳ ಮಾತನಾಡುವ ಹಾಗೂ ಅದರ ಸಾಂಸ್ಕೃತಿಕ ಧಾರೆಯಲ್ಲೇ ನೆಲೆಸುವವರನ್ನು ಅವರು ಮುಸ್ಲಿಮರೆಂದು ಒಪ್ಪಿಕೊಳ್ಳುವುದಿಲ್ಲ! ಮಾತ್ರವಲ್ಲ ಇಂದೀಗ ಸಿಂಧಿ, ಬಲೂಚ, ಪಂಜಾಬಿ ಹಾಗೂ ಕಾಶ್ಮೀರಿ ಮಾತನಾಡುವವರನ್ನೂ ಅವರು ನಿಜವಾದ ಮುಸ್ಲಿಮರೆಂದು ಒಪ್ಪುವುದಿಲ್ಲ. ಅರಬ್ಬಿ ಲಿಪಿಯನ್ನು ಪ್ರೋತ್ಸಾಹಿಸುವವರನ್ನಷ್ಟೇ ಪಾಕಿಸ್ಥಾನಿಗಳೆಂದು ಒಪ್ಪಿಕೊಳ್ಳುವಂಥ ಮನೋಭಾವವು ಈಗ ಹೆಚ್ಚಾಗಿದೆ. ಸೇನೆ ಹಾಗೂ ಅಲ್ಲಿನ ಕೋಮುವಾದಿ ಉರ್ದು ಭಾಷಿಕ ಸುನ್ನಿಗಳು ಸೇರಿ ಇಂಥವರನ್ನೆಲ್ಲ ಸಾಯಿಸುತ್ತಿದ್ದಾರೆ. ಅಲ್ಲಿ ಶಿಯಾ ಪಂಗಡದವರ ಸ್ಥಿತಿಯೂ ಹಿತಕರವಾಗಿಲ್ಲ. ಮೊಹರಮ್ ಸಂದರ್ಭವಿದು. ಇನ್ನೀಗ ಅಲ್ಲಿ ಶಿಯಾಗಳೊಂದಿಗೆ ಸರಕಾರ ಹಾಗೂ ಈ ಕಟ್ಟಾ ಕೋಮುವಾದಿಗಳ ವ್ಯವಹಾರ ಇನ್ನಾವ ತೆರನಾಗಿರಬಹುದೋ! ಶಿಯಾ ಹಾಗೂ ಕಾದಿಯಾನಿಗಳು ಮುಸ್ಲಿಮರಾಗಿದ್ದಾಗ್ಯೂ ಅಲ್ಲಿನ ಜನಸಂಖ್ಯಾ ಬಾಹುಳ್ಯದ ಸುನ್ನಿ ವರ್ಗವು ಇವರ ಮೇಲೆ ಅದೆಂತಹ ದೌರ್ಜನ್ಯ ಮಾಡುತ್ತದೆಂದು ಹೇಳಲಸಾಧ್ಯ. **(ಹೊಸ ದಿಗಂತ 24–10–2015)**

================================================================

## ಬಕ್ರೀದ್‌ಗೆ ಗೋಮಾಂಸ ಬೇಡ: ಮುಸ್ಲಿಂ ಪಂಡಿತರ ಮನವಿ

ಹೈದರಾಬಾದ್, ಸೆ.18: ದೇಶಾದ್ಯಂತ ಗೋಮಾಂಸ ಮಾರಾಟದ ಬಗ್ಗೆ ವಿವಾದ ಎದ್ದಿರುವಾಗಲೇ 'ಈ ಬಕ್ರೀದ್ ಹಬ್ಬಾಚರಣೆ ವೇಳೆ ಮುಸ್ಲಿಮರು ಗೋವು ಮತ್ತು ಎತ್ತುಗಳನ್ನು ವಧಿಸಬಾರದು' ಎಂದು ಮುಸ್ಲಿಂ ಪಂಡಿತರ ಸಮೂಹವೊಂದು ಮುಸ್ಲಿಮರಲ್ಲಿ ಮನವಿ ಮಾಡಿದೆ. ಬಹುಸಂಖ್ಯಾತ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು, ಶರಿಯಾದಲ್ಲಿ ಅನುಮತಿಸಲಾಗಿರುವ ಇತರ ಪರ್ಯಾಯ ಪ್ರಾಣಿಗಳನ್ನು ಆಯ್ಕೆ ಮಾಡಿಕೊಳ್ಳಿ ಎಂದು ಈ ಸಮೂಹವು ಸಾಮಾಜಿಕ ಜಾಲತಾಣಗಳು, ಸಭೆಗಳು ಮತ್ತು ಕರಪತ್ರ, ಶುಕ್ರವಾರದ ನಮಾಜಿನ ಮೂಲಕ ಜಾಗೃತಿ ಆಂದೋಲನ ಆರಂಭಿಸಿದೆ ಎಂದು ಇದರ ನೇತೃತ್ವ ವಹಿಸಿರುವ ಇಸ್ಲಾಂ ಪಂಡಿತ ಸಯ್ಯದ್ ಹುಸೇನ್ ಮದನಿ ಹೇಳಿದ್ದಾರೆ. **(ಉದಯವಾಣಿ 19–09–2015)**

================================================================

## ಗೋಮಾಂಸ ತಿಂದರೆ ದೇಹಕ್ಕೆ ಕಬ್ಬಿಣಾಂಶ: ಹರ್ಯಾಣ ಸರ್ಕಾರ

ಚಂಡಿಗಢ: ಗೋಮಾಂಸ ಕುರಿತು ದೇಶದಲ್ಲಿ ಕಾವೇರಿದ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲೇ ಹರ್ಯಾಣ ಶಿಕ್ಷಣ ಇಲಾಖೆ ಹೊರತಂದಿರುವ ನಿಯತಕಾಲಿಕೆಯೊಂದು ಗೋವು ಹಾಗೂ ಅದರ ಕರುವಿನ ಮಾಂಸ ಭಕ್ಷಣೆಯಿಂದ ಮಾನವ ದೇಹಕ್ಕೆ ಕಬ್ಬಿಣಾಂಶ ಲಭ್ಯವಾಗುತ್ತದೆ ಎಂದಿದೆ. ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪ್ರಕಟಗೊಳ್ಳುವ 'ಶಿಕ್ಷಾ ಭಾರತಿ'ಯಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಈ ಮಾಹಿತಿ ನೀಡಲಾಗಿದೆ. ಇದು ವಿವಾದವಾಗಿದ್ದು, ಇದರ ಬೆನ್ನಲ್ಲೇ ನಿಯತಕಾಲಿಕೆ ಸಂಪಾದಕರನ್ನು ಸರ್ಕಾರ ವಜಾಗೊಳಿಸಿದೆ.

'ಶಕ್ತಿಗೆ ಕಬ್ಬಿಣಾಂಶ ಪ್ರಮುಖ' ಎಂಬ ಶೀರ್ಷಿಕೆಯಡಿ ಪ್ರಕಟಗೊಂಡಿರುವ ಲೇಖನದಲ್ಲಿ ಕುರಿ, ಹಂದಿ, ಕರುವಿನ ಮಾಂಸ ಶಕ್ತಿವರ್ಧಕಗಳು ಎಂದು ಉಲ್ಲೇಖಿಸಲಾಗಿದೆ. ಮುಸ್ಲಿಮರು ಭಾರತದಲ್ಲಿ ಬಾಳಬೇಕು ಎಂದರೆ ಗೋಮಾಂಸ ತ್ಯಜಿಸಬೇಕು ಎಂದು ಹರ್ಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಹೇಳಿಕೆ ನೀಡಿ ಇತೀಚೆಗಷ್ಟೇ ವಿವಾದ ಸೃಷ್ಟಿಸಿದ್ದರು. ಇದರ ಬೆನ್ನಲ್ಲೇ ಅವರ ಸರ್ಕಾರದ ನಿಯತಕಾಲಿಕೆಯಲ್ಲಿ ಈ ಮಾಹಿತಿ ಇರುವುದು ಪತ್ತೆಯಾಗಿದೆ. **(ಉದಯವಾಣಿ 30–10–2015)**

================================================================

## 'ಆಯುರ್ವೇದದಲ್ಲೂ ಗೋಮಾಂಸ ಶಿಫಾರಸು'

ಚೆನ್ನೈ, ನ.11: ಗೋಮಾಂಸದ ಸೇವನೆ ಬಗ್ಗೆ ಹಿಂದೂ ಸಂಘಟನೆಗಳು ಆಕ್ಷೇಪ ಎತ್ತಿ ಪ್ರತಿಭಟಿಸುತ್ತಿರಬಹುದು. ಆದರೆ, ಗೋಮಾಂಸ ಸೇವನೆಯ ಬಗ್ಗೆ ಆಯುರ್ವೇದವೇ ಶಿಫಾರಸು ಮಾಡುತ್ತದೆ ಎಂದು ಅಸಹಿಷ್ಣುತೆ ವಾತಾವರಣ ಖಂಡಿಸಿ ಇತ್ತೀಚೆಗೆ ಪದ್ಮಭೂಷಣ ಪ್ರಶಸ್ತಿ ಮರಳಿಸಿದ ಜೈವಿಕ ವಿಜ್ಞಾನಿಯೊಬ್ಬರು ಹೇಳಿದ್ದಾರೆ. ಪ್ರಶಸ್ತಿ ಮರಳಿಸಿ ರಾಷ್ಟ್ರಪತಿಗೆ ಬರೆದ ಪತ್ರದಲ್ಲಿ ಅವರು ಈ ಸಂಗತಿ ಉಲ್ಲೇಖಿಸಿದ್ದಾರೆ. ಆಚಾರ್ಯ ಚರಕ ಅವರ ಆಯುರ್ವೇದ ಚರಕ ಸಂಹಿತೆಯನ್ನು ಜೀವ ವಿಜ್ಞಾನಿ ಪಿ.ಎಂ. ಭಾರ್ಗವ ಉಲ್ಲೇಖಿಸಿದ್ದಾರೆ. ವಾಯು, ಅನಿಯಮಿತ ಜ್ವರ, ಒಣ ಕೆಮ್ಮು, ಆಯಾಸ, ವಿಪರೀತ ಹಸಿವಾಗುವುದು, ಮೂಗು ಸೋರುವಿಕೆ, ಇತ್ಯಾದಿ ತೊಂದರೆಗಳಿಗೆ ಗೋಮಾಂಸ ಸೇವನೆ ರಾಮಬಾಣ ಎಂದು ಚರಕ ಸಂಹಿತೆಯಲ್ಲಿ ತಿಳಿಸಲಾಗಿದೆ ಎಂದು ಭಾರ್ಗವ ವಿವರಿಸಿದ್ದಾರೆ. **(ಉದಯವಾಣಿ 12–11–2015)**

## ಒಂದೇ ಮಗು: ಚೀನಾ ನೀತಿ ರದ್ದು

ಬೀಜಿಂಗ್: 'ದಂಪತಿಗೆ ಒಂದೇ ಮಗು' ಎಂಬ ತೀವ್ರ ವಿವಾದಿತ ನೀತಿಯನ್ನು ಚೀನಾ ಕೊನೆಗೂ ಹಿಂಪಡೆದುಕೊಂಡಿದೆ. ಹೀಗಾಗಿ ಚೀನಿ ದಂಪತಿಗಳು ಇನ್ನು ಮುಂದೆ ಎರಡು ಮಕ್ಕಳನ್ನು ಪಡೆಯಬಹುದಾಗಿದೆ. ಜನಸಂಖ್ಯೆ ಸಮತೋಲನ ಮತ್ತು ವೃದ್ಧರ ಸಂಖ್ಯೆ ಏರಿಕೆ ಸಮಸ್ಯೆಯನ್ನು ನಿಭಾಯಿಸುವ ಸಲುವಾಗಿ ಈ ನೀತಿಯನ್ನು ಹಿಂಪಡೆಯಲಾಗಿದೆ. ಸರ್ಕಾರದ ಈ ಕ್ರಮವನ್ನು ಮಾನವ ಹಕ್ಕು ಸಂಘಟನೆಗಳು ಸ್ವಾಗತಿಸಿವೆ.

ಜನಸಂಖ್ಯೆ ಏರಿಕೆಗೆ ಕಡಿವಾಣ ಹಾಕುವ ಸಲುವಾಗಿ 1979ರಲ್ಲಿ ದಂಪತಿಗೆ ಒಂದೇ ಮಗು ಎಂಬ ಯೋಜನೆಯನ್ನು ಚೀನಾದ ಸರ್ಕಾರ ಜಾರಿಗೊಳಿಸಿತ್ತು 3 ದಶಕಗಳಿಂದ ಈ ನೀತಿಯನ್ನು ಚೀನಾದಲ್ಲಿ ಕಠಿಣವಾಗಿ ಪಾಲಿಸಿಕೊಂಡು ಬರಲಾಗಿತ್ತು. ಎರಡು ಮಗುವನ್ನು ಪಡೆಯುವ ದಂಪತಿಗೆ ಭಾರೀ ಮೊತ್ತದ ದಂಡ ಮತ್ತು ಉದ್ಯೋಗದಿಂದ ತೆಗೆಯುವ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಈ ನೀತಿ ಜಾರಿಯಿಂದ ಚೀನಾದಲ್ಲಿ 40 ಕೋಟಿ ಮಗುವಿನ ಜನನಕ್ಕೆ ಕಡಿವಾಣ ಬಿದ್ದಿದೆ ಎಂದು ಅಂದಾಜಿಸಲಾಗಿದೆ. ಆದರೆ, ಇದರಿಂದ ಚೀನಾದಲ್ಲಿ ವೃದ್ಧರ ಸಂಖ್ಯೆ ಹೆಚ್ಚಳ, ಉದ್ಯೋಗಕ್ಕೆ ಯುವಕರ ಅಲಭ್ಯತೆ ಪರಿಣಾಮ ಅಭಿವೃದ್ಧಿ ದರ ಇಳಿಕೆಗೆ ಕಾರಣವಾಗಿತ್ತು. ಈ ನೀತಿ ವಿರುದ್ಧ ಹಲವಾರು ಸಂಘ– ಸಂಸ್ಥೆ ಮತ್ತು ಹೋರಾಟಗಾರರು ಪ್ರತಿಭಟಿಸುತ್ತಿದ್ದರು.

137 ಕೋಟಿ ಜನಸಂಖ್ಯೆ ಹೊಂದಿರುವ ಚೀನಾದಲ್ಲಿ ಶೇ.30ರಷ್ಟು ಮಂದಿ 50ವರ್ಷ ಮೀರಿದವರಾಗಿದ್ದಾರೆ. ಲಿಂಗ ಅಸಮಾನತೆ ಗಂಭೀರ ಸ್ವರೂಪ ಪಡೆದಿದೆ. ಹೀಗಾಗಿ ಯೋಜನೆಯನ್ನು ಹಿಂಪಡೆಯಬೇಕಾದ ತೀವ್ರ ಒತ್ತಡಕ್ಕೆ ಸರ್ಕಾರ ಒಳಗಾಗಿತ್ತು.

**(ಉದಯವಾಣಿ 30–10–2015)**

==========================================================

## ಟಿಪ್ಪು ದೇಶದ್ರೋಹಿ ಅಲ್ಲ; ದೇಶಭಕ್ತ: ಡಾ। ಪರಮೇಶ್ವರ್

ಉಡುಪಿ, ನ.8: ಟಿಪ್ಪು ಸುಲ್ತಾನ್ ದೇಶದ್ರೋಹಿ ಅಲ್ಲ, ಆತನೊಬ್ಬ ದೇಶಭಕ್ತ ಎಂದು ರಾಜ್ಯದ ಗೃಹಸಚಿವ ಡಾ। ಪರಮೇಶ್ವರ್ ಅವರು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ರವಿವಾರ ಪತ್ರಿಕಾಗೋಷ್ಠಿಯಲ್ಲಿ ಟಿಪ್ಪು ಜಯಂತಿ ಆಚರಣೆ ಕುರಿತ ವಿವಾದದ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

ಟಿಪ್ಪು ಬ್ರಿಟಿಷರ ವಿರುದ್ಧ ದೇಶಕ್ಕಾಗಿ ಹೋರಾಟ ನಡೆಸಿದ್ದ ವ್ಯಕ್ತಿ. ಶಾಂತಿಯಿಂದ ಎಲ್ಲರೂ ಬಾಳೋದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಶೃಂಗೇರಿ ಜಗದ್ಗುರುಗಳಿಗೆ ಟಿಪ್ಪು ಸಹಕಾರ ನೀಡಿದ್ದರು. ಅವರವರ ಧರ್ಮ ಪಾಲನೆಗೆ ಅವಕಾಶ ನೀಡಿದ್ದರು. ಆ ದೃಷ್ಟಿಯಿಂದ ಅವರನ್ನು ಗೌರವಿಸಿ ಜಯಂತಿ ಆಚರಿಸೋದ್ರಲ್ಲಿ ತಪ್ಪೇನಿದೆ. ಜಯಂತಿಯ ವಿರುದ್ಧ ಹೇಳಿಕೆ ಕೊಡೋದು ಸಂವಿಧಾನಾತ್ಮಕವಾಗಿ ತಪ್ಪಲ್ಲ. ಅದು ಬಿಟ್ಟು ಸಾಮಾಜಿಕ ಶಾಂತಿಯನ್ನು ಕದಡಲು ಕಾನೂನು ಕೈಗೆತ್ತಿಕೊಂಡರೆ ಪೊಲೀಸ್ ಇಲಾಖೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಿದೆ ಎಂದರು. **(ಉದಯವಾಣಿ 09–11–2015)**

==========================================================

## 'ಟಿಪ್ಪು – ಸರ್ವ ಧರ್ಮ ಪ್ರೇಮಿ'

ಟಿಪ್ಪುಸುಲ್ತಾನ್ ಎಲ್ಲ ಧರ್ಮೀಯರನ್ನು ಒಂದೇ ಸಮನಾಗಿ ಕಂಡವ. ದೇವಸ್ಥಾನ, ಚರ್ಚ್ ನಿರ್ಮಿಸಿದ್ದ ಸರ್ವಧರ್ಮ ಪ್ರೇಮಿ. ಶೃಂಗೇರಿ ಮಠ ಪುನರುಜ್ಜೀವನ ಗೊಳಿಸಿದ್ದ. ದಾಖಲೆ, ಇತಿಹಾಸದ ಪ್ರಕಾರ ಈ ಎಲ್ಲ ಸಂಗತಿಗಳು ಕಂಡುಬರುತ್ತವೆ. ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದ ಪ್ರಥಮ ಸ್ವಾತಂತ್ರ್ಯ ಸೇನಾನಿ ಟಿಪ್ಪು. ಒಗ್ಗಟ್ಟು ಸಹಿಸಲಾಗದೆ ಬ್ರಿಟಿಷರು ಪಿತೂರಿಯಿಂದ ಟಿಪ್ಪು ಸುಲ್ತಾನ್‌ನನ್ನು ಕೊಂದರು. ಬಳಿಕ ಒಗ್ಗಟ್ಟು ಮುರಿದು ಪ್ರದೇಶಗಳ ವಿಭಜನೆ ಮಾಡಿದರು. ಬ್ರಿಟಿಷರ ಕುಮ್ಮಕ್ಕಿನಿಂದ ಊಹಾಪೋಹ, ತಪ್ಪು ತಿಳುವಳಿಕೆ ಜನರಲ್ಲಿ ಮೂಡಿದೆ ಎಂದು ಡಾ। ಎಂ. ವೀರಪ್ಪ ಮೊಯ್ಲಿ ತಿಳಿಸಿದರು. **(ಉದಯವಾಣಿ 10–11–2015)**

==========================================================

## ಟಿಪ್ಪು ತ್ಯಾಗ – ಬಲಿದಾನ ಅಜರಾಮರ: ಸಚಿವ ಸೊರಕೆ

ಉಡುಪಿ, ನ.11: ದೇಶದ ನೆಲ, ಜಲ, ಸಂಪತ್ತಿನ ರಕ್ಷಣೆಗಾಗಿ ಟಿಪ್ಪು ಸುಲ್ತಾನರು ನಡೆಸಿದ ಹೋರಾಟ, ತ್ಯಾಗ, ಬಲಿದಾನ ದೇಶದ ಇತಿಹಾಸದಲ್ಲಿ ಅಜರಾಮರವಾಗಿದೆ ಎಂದು ಸಚಿವ ವಿನಯ ಕುಮಾರ್ ಸೊರಕೆ ಹೇಳಿದ್ದಾರೆ.

ಅವರು ಜಿಲ್ಲಾಡಳಿತ, ಜಿ.ಪಂ. ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಬನ್ನಂಜೆ ನಾರಾಯಣಗುರು ಸಭಾಭವನದಲ್ಲಿ ಆಯೋಜಿಸಿದ್ದ ಟಿಪ್ಪುಸುಲ್ತಾನ್ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

**ಧರ್ಮ ಸಹಿಷ್ಣು:** ಹೇಡಿಯಾಗಿ ಬದುಕುವ ಬದಲು ಸಾಯುವುದೇ ಮೇಲು ಎಂದು ನಂಬಿದ್ದ ಟಿಪ್ಪು ಸುಲ್ತಾನ್, ಬ್ರಿಟಿಷ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ನಾಯಕ. ಆದರೆ ಆತನ ವ್ಯಕ್ತಿತ್ವವನ್ನು ಬೇರೆ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ಧಾರ್ಮಿಕ ಸಹಿಷ್ಣುವಾಗಿದ್ದ ಟಿಪ್ಪು ಕಾಪು ಮಾರಿಗುಡಿಯ ನಿರ್ಮಾಣಕ್ಕೆ ಉದಾರ ದಾನ ನೀಡಿದ್ದ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಈಗಲೂ ಸಹ ಪ್ರತಿದಿನ ಸಲಾಂ ಪ್ರಾರ್ಥನೆ ನಡೆಯುತ್ತಿದೆ. ಮರಾಠರು ಮತ್ತು ಮೊಘಲರ ದಾಳಿಯಿಂದ ಶಿಥಿಲಗೊಂಡಿದ್ದ ಶೃಂಗೇರಿ ದೇವಾಲಯದ ಪುನರ್‌ನಿರ್ಮಾಣ ಕಾರ್ಯದಲ್ಲಿ ಟಿಪ್ಪು ನೀಡಿದ್ದ ನೆರವು ಆತನ ಧಾರ್ಮಿಕ ಸಹಿಷ್ಣುತೆಗೆ ಸಾಕ್ಷಿಯಾಗಿದೆ ಎಂದರು.

ಟಿಪ್ಪು ಜೀವನ ಮತ್ತು ಸಾಧನೆ ಕುರಿತ ವಾರ್ತಾ ಇಲಾಖೆಯ ಕಿರುಹೊತ್ತಗೆಯನ್ನು ಸಚಿವರು ಬಿಡುಗಡೆಗೊಳಿಸಿ ಟಿಪ್ಪು ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. **(ಉದಯವಾಣಿ 12–11–2015)**

## 6 ಜಿಲ್ಲೆಗಳಲ್ಲಿ ದಲಿತರಿಗೆ ದೇವಾಲಯ ಪ್ರವೇಶ ನಿಷೇಧ: ದೂರು

ಬೆಂಗಳೂರು, ಅ.16: ರಾಜ್ಯದ ಆರು ಜಿಲ್ಲೆಗಳಲ್ಲಿ ದಲಿತರು ದೇವಾಲಯದೊಳಗೆ ಪ್ರವೇಶಿಸಲು ನಿರಾಕರಿಸಲಾಗುತ್ತಿದೆ ಎಂಬ ದೂರುಗಳು ಬಂದಿವೆ ಎಂದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷ ಡಾ। ಪಿ.ಎಲ್. ಪುನಿಯಾ ತಿಳಿಸಿದ್ದಾರೆ.

ಬೆಂಗಳೂರು, ಹಾಸನ, ರಾಮನಗರ, ಮಂಡ್ಯ, ದಾವಣಗೆರೆ, ಬೆಳಗಾವಿ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರನ್ನು ಅಲ್ಲಿನ ಕೆಲವು ದೇವಾಲಯಗಳಿಗೆ ಪ್ರವೇಶಿಸಲು ನಿರಾಕರಿಸಿದ ಬಗ್ಗೆ ದೂರುಗಳು ಬಂದಿವೆ. ಈ ಸಂಬಂಧ ಆಯಾ ಜಿಲ್ಲಾಡಳಿತಗಳಿಗೆ ಸೂಕ್ತ ನಿರ್ದೇಶನ ನೀಡುವ ಮೂಲಕ ಗಮನ ಹರಿಸುವಂತೆ ಮುಖ್ಯಮಂತ್ರಿಗಳಿಗೂ ವಿವರಿಸಲಾಗಿದೆ ಎಂದರು.

ಆಯೋಗದ ಸದಸ್ಯರೂ ರಾಜ್ಯದ ವಿವಿಧೆಡೆ ಪ್ರವಾಸ ನಡೆಸಿ ಪರಿಶಿಷ್ಟರ ಪರಿಸ್ಥಿತಿ ಬಗ್ಗೆ ಅವಲೋಕನ ನಡೆಸಿದ್ದಾರೆ. ಕರ್ನಾಟಕ ಪ್ರಗತಿಪರ ರಾಜ್ಯವಾಗಿದ್ದು, ಇಲ್ಲಿನ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಹೆಚ್ಚಿನ ಒತ್ತು ನೀಡಲಾಗಿದೆ. ಪರಿಶಿಷ್ಟ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ಮತ್ತು ವಿದ್ಯಾರ್ಥಿ ನಿಲಯಗಳನ್ನು ಒದಗಿಸಿರುವುದು ಪ್ರಶಂಸಾರ್ಹ ಎಂದರು. **(ಉದಯವಾಣಿ 17–10–2015)**

==========================================================================

## ದಲಿತರ ಮನೆಗಳಿಗೆ ಬೆಂಕಿ

ಮುಳಬಾಗಿಲು, ಅ.24: ಹರಿಯಾಣದಲ್ಲಿ ದಲಿತರ ಮನೆಗೆ ಬೆಂಕಿ ಹಚ್ಚಿದ ಘಟನೆ ದೇಶಾದ್ಯಂತ ಕಿಚ್ಚು ಹೊತ್ತಿಸಿರುವಾಗಲೇ, ಕೋಲಾರ ಜಿಲ್ಲೆಯಲ್ಲಿ ದಲಿತರ ಮನೆಗಳಿಗೆ ಶನಿವಾರ ಕೊಳ್ಳಿ ಇಡಲಾಗಿದೆ.

ಕೆರೆಯ ನೀರನ್ನು ಆಲೂಗಡ್ಡೆ ಬೆಳೆಗೆ ಬಳಸಿಕೊಳ್ಳಲು ಮುಂದಾದ ಎರಡು ದಲಿತ ಕುಟುಂಬಗಳ ಮನೆಗಳಿಗೆ ಸವರ್ಣೀಯರು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಘಟನೆ ಕೋಲಾರ ಜಿಲ್ಲೆ ಮುಳಬಾಗಿಲು ತಾಲೂಕಿನ ಮನ್ನೇನಹಳ್ಳಿಯಲ್ಲಿ ನಡೆದಿದೆ. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು, 15 ಮಂದಿ ಸವರ್ಣೀಯರ ವಿರುದ್ಧ ಪ್ರಕರಣ ದಾಖಲಾಗಿದೆ.

**ನೀರಿನ ವಿಚಾರವಾಗಿ ಗಲಾಟೆ:** ಆಲೂಗಡ್ಡೆ ಬೆಳೆಗೆ ನೀರಿನ ಅಭಾವ ತಲೆದೋರಿದ್ದರಿಂದ ಸೀನಪ್ಪ ಮತ್ತು ಅವರ ಭಾವ ಮೋಹನ್ ಅವರು ಕೆರೆಯಲ್ಲಿ ಹಳ್ಳ ತೋಡಿ ನೀರು ಬಳಸಿಕೊಳ್ಳಲು ಮುಂದಾಗಿದ್ದರು. ಆದರೆ ಶನಿವಾರ ಮುಂಜಾನೆ ಕೆರೆ ನೀರು ಬಳಸಿಕೊಳ್ಳಬಾರದೆಂದು ಗ್ರಾಮದ ಸವರ್ಣೀಯರಾದ ಚಂಗಲರಾಯ ರೆಡ್ಡಿ ಕುಟುಂಬದ 15 ಜನರು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. ಬಳಿಕ ಪಂಪ್‌ಸೆಟ್ ಅನ್ನು ಕೆರೆ ನೀರಿಗೆ ಹಾಕಿ, ಆಲೂಗಡ್ಡೆ ಬೆಳೆ ಹಾಳು ಮಾಡಿದ್ದಾರೆ. ಅನಂತರ ಗ್ರಾಮಕ್ಕೆ ತಮ್ಮ ಬಂದು ತಮ್ಮಿಬ್ಬರ ಮನೆಗೆ ಬೀಗ ಹಾಕಿ ಪೆಟ್ರೋಲ್ ಸುರಿದು ಕಿಟಕಿ ಬಾಗಿಲುಗಳಿಗೆ ಬೆಂಕಿ ಹಚ್ಚಿದ್ದಾರೆ. ಘಟನೆಯಲ್ಲಿ ತಮ್ಮ ಇಬ್ಬರು ಮಕ್ಕಳಾದ ಮನೋಜ್(22) ಮತ್ತು ಅನುಪಮಾ(20) ಗಾಯಗೊಂಡು ಮುಳಬಾಗಿಲು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಸೀನಪ್ಪ ಅವರು ನಂಗಲಿ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸಿಬಂದಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ. **(ಉದಯವಾಣಿ 25–10–2015)**

==========================================================================

## 300 ಮಂದಿ ಬೌದ್ಧ ಧರ್ಮಕ್ಕೆ ಮತಾಂತರ

### * ಕಾಂಞಂಗಾಡಿನಲ್ಲಿ ಮತಾಂತರ * ದಲಿತ ಸಮುದಾಯದ 300 ಮಂದಿ ಬೌದ್ಧ ಧರ್ಮಕ್ಕೆ

ಕಾಂಞಂಗಾಡ್, ನ.23: ಸಂಘ ಪರಿವಾರ, ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳಿಗೆ ಹೋದವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತರಲು ಘರ್ ವಾಪಸಿ ಕಾರ್ಯಕ್ರಮವನ್ನು ಬಿರುಸಿನಿಂದ ನಡೆಸುತ್ತಿರುವಾಗಲೇ ಕಾಸರಗೋಡು ಸಮೀಪದ ಕಾಂಞಂಗಾಡಿನಲ್ಲಿ 300ಕ್ಕೂ ಅಧಿಕ ದಲಿತ ಸಮುದಾಯದವರು ಸದ್ದಿಲ್ಲದೆ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದಾರೆ.

ಅಖಿಲ ಭಾರತ ಮೂಲನಿವಾಸಿ ಬಹುಜನ ಸಮಾಜ ಸೆಂಟ್ರಲ್ ಸಂಘ ಮತ್ತು ಪ್ರಬುದ್ಧ ಭಾರತ ಸಂಘದ ಆಶ್ರಯದಲ್ಲಿ ರವಿವಾರ ಕಾಂಞಂಗಾಡಿನಲ್ಲಿ ನಡೆದ ಈ ಧರ್ಮ ದೀಕ್ಷೆ ಕಾರ್ಯಕ್ರಮದಲ್ಲಿ ಕೇರಳ ಮಾತ್ರವಲ್ಲದೆ ನೆರೆಯ ಕರ್ನಾಟಕ ಮತ್ತು ತಮಿಳುನಾಡಿನ ಅನೇಕ ಮಂದಿ ಪಾಲ್ಗೊಂಡಿದ್ದರು.

ದಲಿತ ಸಮುದಾಯಕ್ಕೆ ಸೇರಿದ ಮಲವೇಟುವ, ಮಾವಿಲ ಮತ್ತು ಮುಗರ್ ಜಾತಿಗಳ ಹಿಂದೂಗಳು ಧರ್ಮ ದೀಕ್ಷೆ ಪಡೆದು ಬೌದ್ಧ ಧರ್ಮಕ್ಕೆ ಸೇರ್ಪಡೆಯಾಗಿದ್ದಾರೆ.

ಶ್ರೀ ನಾರಾಯಣ ಗುರು ಧರ್ಮಪರಿಪಾಲನ ಯೋಗಂ ಕಾರ್ಯದರ್ಶಿ ವೆಲ್ಲಪ್ಪಳ್ಳಿ ನಟೇಶನ್ ಹಿಂದೂ ಸಮುದಾಯವನ್ನು ಸಂಘಟಿಸುವ ಸಲುವಾಗಿ ಸಮತ್ವ ಮುನ್ನಡೆ ಯಾತ್ರೆ ಕೈಗೊಂಡಿರುವಾಗಲೇ ಹಿಂದೂಗಳು ಬೌದ್ಧ ಧರ್ಮಕ್ಕೆ ಮತಾಂತರಗೊಂಡಿರುವುದು ಮಹತ್ವದ ಘಟನೆಯಾಗಿದೆ. ದಕ್ಷಿಣ ಭಾರತದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಜನರು ತ್ರಿಶರಣ ಮತ್ತು ಪಂಚಶೀಲ ಪಠಿಸಿ ಬೌದ್ಧ ಧರ್ಮಕ್ಕೆ ಬಂದಿರುವುದು ಇದೇ ಮೊದಲು. ಅವರೆಲ್ಲ ಅಂಬೇಡ್ಕರ್ ತತ್ವದ 22 ಅಂಶಗಳನ್ನು ಪಾಲಿಸುವ ಪ್ರತಿಜ್ಞೆ ಮಾಡಿದ್ದಾರೆ ಎಂದು ಮತಾಂತರ ಕಾರ್ಯಕ್ರಮವನ್ನು ಸಂಘಟಿಸಿದ್ದ ಸಿ.ಜೆ. ಕೃಷ್ಣನ್ ಹೇಳಿದ್ದಾರೆ.

ಧರ್ಮ ದೀಕ್ಷೆ ಕಾರ್ಯಕ್ರಮದ ಕುರಿತು ಹಾಕಿದ್ದ ಫ್ಲೆಕ್ಸ್, ಪೋಸ್ಟರ್, ಬಂಟಿಂಗ್ ಇತ್ಯಾದಿ ಪ್ರಚಾರ ಸಾಮಗ್ರಿಗಳನ್ನು ಕಿಡಿಗೇಡಿಗಳು ಕಿತ್ತೆಸೆದ ಪರಿಣಾಮವಾಗಿ ಉದ್ವಿಗ್ನ ವಾತಾವರಣ ಉಂಟಾಗಿತ್ತು. ಭಾರೀ ಪೊಲೀಸ್ ಬಂದೋಬಸ್ತಿನ ನಡುವೆ ಮತಾಂತರ ಕಾರ್ಯಕ್ರಮ ನಡೆದಿದೆ. ಜಾತಿ ವ್ಯವಸ್ಥೆಯಲ್ಲಿ ಆಗಿರುವ ಘೋರ ಅನುಭವಗಳು ತಮ್ಮನ್ನು ಬೌದ್ಧ ಧರ್ಮಕ್ಕೆ ಸೇರಲು ಪ್ರೇರೇಪಿಸಿವೆ ಎಂದು ಮತಾಂತರಗೊಂಡವರು ಹೇಳಿದ್ದಾರೆ. **(ಉದಯವಾಣಿ 24–11–2015)**

## '2005ಕ್ಕೂ ಮುಂಚೆ ತಂದೆ ಕಳಕೊಂಡ ಹೆಣ್ಮಕ್ಕಳಿಗೆ ಪಾಲಿಲ್ಲ'

ಹೊಸದಿಲ್ಲಿ, ನ.3: ತಂದೆಯ ಆಸ್ತಿಯಲ್ಲಿ ಪಾಲು ಕೇಳುವ ಹೆಣ್ಣು ಮಕ್ಕಳಿಗೆ ಸುಪ್ರೀಂಕೋರ್ಟ್ ಆಘಾತ ನೀಡಿದೆ. 2005ರ ಸೆ.9ರವರೆಗೆ ತಂದೆ ಬದುಕಿದ್ದರೆ ಮಾತ್ರ ಪುತ್ರಿಯರಿಗೆ ಪಾಲು. ಅದಕ್ಕೂ ಮೊದಲೇ ತಂದೆ ನಿಧನರಾಗಿದ್ದರೆ ಯಾವುದೇ ಪಾಲು ಕೊಡಬೇಕಿಲ್ಲ ಎಂದು ಹೇಳಿದೆ.

ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಕಾಯ್ದೆ– 2005 ಸಾಮಾಜಿಕ ಶಾಸನವೇ ಆಗಿದ್ದರೂ, ಅದು ಪೂರ್ವಾನ್ವಯವಾಗುವುದಿಲ್ಲ. ಹೀಗಾಗಿ ಗಂಡು ಮಕ್ಕಳ ಜತೆ ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಪಾಲು ಸಿಗಬೇಕು ಎಂದಾದಲ್ಲಿ ಕಾಯ್ದೆ ಜಾರಿಗೆ ಬಂದ ದಿನವಾದ 2005ರ ಸೆ.9ರಂದು ತಂದೆ ಜೀವಂತವಾಗಿರಬೇಕು ಎಂದು ನ್ಯಾಯಾಲಯ ಹೇಳಿದೆ. 1956ರ ಹಿಂದೂ ಉತ್ತರಾಧಿಕಾರ ಕಾಯ್ದೆಯಲ್ಲಿ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲು ನೀಡುವ ಪ್ರಸ್ತಾವವೇ ಇರಲಿಲ್ಲ, ಒಂದು ವೇಳೆ, ಜಂಟಿ ಹಿಂದೂ ಕುಟುಂಬವಾಗಿದ್ದ ಪಕ್ಷದಲ್ಲಿ ಹೆಣ್ಣು ಮಕ್ಕಳು ತಮ್ಮ ಜೀವನಾಧಾರಕ್ಕೆ ಹಕ್ಕು ಕೇಳಬಹುದಿತ್ತು. 2005ರ ಸೆ.9ರಂದು ಜಾರಿಗೆ ಬಂದ ಕಾಯ್ದೆಯಲ್ಲಿ ಈ ತಾರತಮ್ಯವನ್ನು ಹೋಗಲಾಡಿಸಲಾಗಿತ್ತು. ಆದರೆ ಕಾಯ್ದೆ ಪೂರ್ವಾನ್ವಯವಾಗುವುದಿಲ್ಲ ಎಂಬ ಅಂಶವನ್ನು ಒತ್ತಿ ಹೇಳುವ ಮೂಲಕ ಸುಪ್ರೀಂ ಕೋರ್ಟ್ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೇಳುವ ಅವಕಾಶವನ್ನು ನಿರಾಕರಿಸಿದೆ.

**(ಉದಯವಾಣಿ 04–11–2015)**

## ಬಾಂಗ್ಲಾ: ಇಬ್ಬರು ಯುದ್ಧಾಪರಾಧಿಗಳಿಗೆ ಗಲ್ಲು

ಢಾಕಾ: 1971ರ ಪಾಕಿಸ್ಥಾನ ವಿರುದ್ಧದ ಸ್ವಾತಂತ್ರ್ಯ ಹೋರಾಟದ ವೇಳೆ ದೇಶವಾಸಿಗಳ ವಿರುದ್ಧ ದೌರ್ಜನ್ಯ ಎಸಗಿದ್ದ ಕಾರಣ ಬಾಂಗ್ಲಾದೇಶ ಸರಕಾರ ಪ್ರತಿಪಕ್ಷದ 2 ನಾಯಕರನ್ನು ರವಿವಾರ ಗಲ್ಲಿಗೇರಿಸಿದೆ. ಇದನ್ನು ವಿರೋಧಿಸಿ ಅವರ ಬೆಂಬಲಿಗರು ಬಾಂಗ್ಲಾದ ಹಲವೆಡೆ ಹಿಂಸಾತ್ಮಕ ಕೃತ್ಯದಲ್ಲಿ ತೊಡಗಿದ್ದಾರೆ. ಜಮಾತ್–ಇ–ಇಸ್ಲಾಮ್ ಕಾರ್ಯದರ್ಶಿ ಅಲಿ ಅಸನ್ ಮೊಹಮ್ಮದ್ ಮುಜಾಹಿದ್(67) ಮತ್ತು ಬಿಪಿಎನ್ ನಾಯಕ ಸಲಾಹುದ್ದೀನ್ ಖಾದರ್ ನೇಣಿಗೇರಿದ ನಾಯಕರು. ಮುಜಾಹಿದ್ ಜಮಾತ್‌ನ 2ನೇ ಮುಖ್ಯ ನಾಯಕ. 1971ರ ಡಿ.16ರ ಸ್ವಾತಂತ್ರ್ಯ ವಿಜಯದ ಕೆಲ ದಿನಗಳ ಹಿಂದೆ ನಡೆದ ದೇಶದ ಬುದ್ಧಿಜೀವಿಗಳ ಹತ್ಯೆಯ ರೂವಾರಿಯಾಗಿದ್ದರು ಮತ್ತು ಚೌಧರಿ ಚಿತ್ತಗಾಂಗ್‌ನಲ್ಲಿ ಹಿಂಸಾತ್ಮಕ ಪ್ರಚಾರ ಮಾಡಿದ್ದ ದೋಷದ ಕಾರಣ ಗಲ್ಲಿಗೇರಿಸಲಾಯಿತು. **(ಉದಯವಾಣಿ 23–11–2015)**

## 'ತಾಜ್ ಹಿಂದೂ ದೇಗುಲ ಅನ್ನುವುದಕ್ಕೆ ಸಾಕ್ಷ್ಯವಿಲ್ಲ'

ಹೊಸದಿಲ್ಲಿ, ಡಿ.1: 17ನೇ ಶತಮಾನದ ಮೊಘಲ್ ರಚನೆ, ಪ್ರೇಮದ ಸಂಕೇತ ಎಂದೇ ಬಿಂಬಿತವಾಗಿರುವ 'ತಾಜ್ ಮಹಲ್' ಒಂದೊಮ್ಮೆ ಹಿಂದೂ ದೇವಸ್ಥಾನವಾಗಿತ್ತು ಎಂದು ಸಾಬೀತುಪಡಿಸುವುದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಕೇಂದ್ರ ಸರಕಾರ ಸ್ಪಷ್ಟಪಡಿಸಿದೆ. ಕೇಂದ್ರ ಸಂಸ್ಕೃತಿ ಸಚಿವ ಮಹೇಶ್ ಶರ್ಮಾ ಲೋಕಸಭೆಗೆ ಈ ಕುರಿತು ಮಾಹಿತಿ ನೀಡಿದ್ದಾರೆ. ಆಗ್ರಾದ ಕೆಲ ವಕೀಲರು ತಾಜ್‌ಮಹಲ್ ಮೂಲತಃ ಶಿವಾಲಯವಾಗಿತ್ತು. ಈ ಹಿನ್ನೆಲೆಯಲ್ಲಿ ತಾಜ್‌ಮಹಲ್ ಮಾಲೀಕತ್ವವನ್ನು ಹಿಂದೂಗಳಿಗೆ ಹಸ್ತಾಂತರಿಸಬೇಕು ಎಂದು ಕೆಲ ದಿನಗಳ ಹಿಂದೆ ಆಗ್ರಾದ ವಕೀಲರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಈ ಹಿನ್ನೆಲೆಯಲ್ಲಿ ಸಚಿವ ಶರ್ಮಾ ಲೋಕಸಭೆಗೆ ಈ ಮಾಹಿತಿ ನೀಡಿದ್ದಾರೆ.

**(ಉದಯವಾಣಿ 02–12–2015)**

## ದಿಲ್ಲಿ ಶಾಸಕರು ಇನ್ನು ವರದಕ್ಷಿಣೆ ಇರುವ ಮದುವೆಗಳಿಗೆ ಹೋಗಲ್ಲ.

ವರದಕ್ಷಿಣೆಯಿರುವ ಮದುವೆಗಳಲ್ಲಿ ಶಾಸಕರು ಭಾಗವಹಿಸುವುದನ್ನು ದಿಲ್ಲಿ ಸರಾಕಾರ ನಿಷೇಧಿಸಿದೆ. ಶಾಸಕರು ತಮ್ಮ ಮಕ್ಕಳ ಅಥವ ಸಂಬಂಧಿಕರ ಮದುವೆಗೆ ವರದಕ್ಷಿಣೆ ಕೊಡುಕೊಳ್ಳುವ ವ್ಯವಹಾರ ಮಾಡಬಾರದು ಹಾಗೂ ವರದಕ್ಷಿಣೆ ತೆಗೆದುಕೊಂಡು ಆಗುವ ಮದುವೆಗಳಲ್ಲಿ ಭಾಗವಹಿಸಬಾರದು ಎಂದು ಹೇಳುವ ನಿರ್ಣಯ ಮಸೂದೆ ವಿಧಾನಸಭೆಯಲ್ಲಿ ಧ್ವನಿಮತದಿಂದ ಮಂಜೂರಾಗಿದೆ. ಶಾಸಕರು ತಮ್ಮ ಮಕ್ಕಳ ಮದುವೆಯಲ್ಲಿ ವರದಕ್ಷಿಣೆ ಕೊಡುಕೊಳ್ಳುವ ವ್ಯವಹಾರ ಮಾಡುವುದಿಲ್ಲ ಮತ್ತು ವರದಕ್ಷಿಣೆ ತೆಗೆದುಕೊಂಡು ನಡೆಯುವ ಮದುವೆಯಲ್ಲಿ ಭಾಗವಹಿಸುವುದಿಲ್ಲ ಎಂದು ಪ್ರತಿಜ್ಞೆ ಸ್ವೀಕರಿಸುವ ಪ್ರಸ್ತಾವವನ್ನು ಪ್ರವಾಸೋದ್ಯಮ ಮತ್ತು ಜಲವಿತರಣೆ ಸಚಿವ ಕಪಿಲ್ ಮಿಶ್ರ ಮಂಡಿಸಿದರು. ಗೃಹ ಸಚಿವ ಸತ್ಯೇಂದ್ರ ಜೈನ್ ಅದನ್ನು ನಿರ್ಣಯ ರೂಪದಲ್ಲಿ ಮಂಡಿಸಿದಾಗ ಧ್ವನಿ ಮತದಿಂದ ಮಂಜೂರಾಯಿತು. ಜನಪ್ರತಿನಿಧಿಗಳು ಕೈಗೊಂಡಿರುವ ನಿರ್ಣಯದ ಬಗ್ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. **(ಉದಯವಾಣಿ 04–12–2015)**

ನಿಧನ ವಾರ್ತೆ

## ಜನಾಬ್ ಎಂ.ಇ. ಮುಹಮ್ಮದ್ ಸಾಹೇಬ್

ಮಡಿಕೇರಿಯ ಹೆಸರಾಂತ ಪೀಠೋಪಕರಣ ಮಳಿಗೆಯ ಮಾಲಕ ಜನಾಬ್ ಎಂ.ಇ. ಮುಹಮ್ಮದ್ ಸಾಹೇಬರು ದಿನಾಂಕ 20–08–2015 ರಂದು ತನ್ನ 78ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅವರು 1951ರಲ್ಲಿ ಅಹ್ಮದಿಯಾ ಜಮಾಅತ್‌ಗೆ ಪ್ರವೇಶಿಸಿದರು. ಮಡಿಕೇರಿಯ ಗಣ್ಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಅವರು ಜನಪ್ರಿಯರಾಗಿದ್ದರು. ಅವರ ಪತ್ನಿ: ಫಾತಿಮ. ಪುತ್ರರು: ಮುಸ್ತಫಾ, ಕಲೀಮ್ ಅಹ್ಮದ್. ಪುತ್ರಿಯರು: ಆಯಿಶ, ನೂರುನ್ನಿಸಾ. ಮೃತರಿಗೆ ಅಲ್ಲಾಹನು ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ ಮತ್ತು ಅವರ ಬಂಧುಗಳಿಗೂ ಮಿತ್ರರಿಗೂ ಸಹನೆಯನ್ನು ಕರುಣಿಸಲಿ – ಆಮೀನ್.

# ಸೌಹಾರ್ದ ಗೀತೆ

ಕೆ. ಎಂ. ಉಮರ್, ಮಡಿಕೇರಿ.

ಭಾರತ ಮಾತೆಯ ಪ್ರೀತಿಯ ಪುತ್ರರೆ
ಒಂದಾಗುವ ನಾವೆಂದೆಂದೂ
ಭಾರತ ಮಾತೆಗೆ ನೋವನು ತರುವ
ಕೆಲಸವ ತೊರೆಯುವ ಎಂದೆಂದೂ॥

ಶಾಂತಿಯ ಸಾರುತ ಜನರೆಡೆ ಬಂದ
ಬಾಪೂಜಿಯವರ ಘನತೆಯನು
ಶಾಶ್ವತ ಉಳಿಸಲು ಶ್ರಮಿಸುತ
ಸಾರುವ ಭಾವೈಕ್ಯದಲಿ ಒಂದಾಗಿ॥

ಹಿಂದೂ, ಮುಸ್ಲಿಂ, ಕ್ರೈಸ್ತರು ಎಂಬ
ಭೇದವ ಮರೆಯುವ ನಾವೆಲ್ಲ
ಹಿಂದೂಸ್ತಾನದ ಘನತೆಯನುಳಿಸಲು
ಬಾಳುವ ಶಾಂತಿಯಲಿ ನಾವೆಲ್ಲ॥

ಬಲವಿದೆ ಒಗ್ಗಟ್ಟಿದ್ದರೆ ನಮ್ಮ
ಪುಣ್ಯ ಭಾರತ ದೇಶಕ್ಕೆ
ಬಲ್ಲವರು ಹೇಳಿದ ಮಾತನು ಮರೆಯದೆ
ಪಾಲಿಸಿ ನಡೆಯುವ ಮುಂದಕ್ಕೆ॥

ರಾಮ ರಹೀಮ ಏಸುವ ಕರೆದರೂ
ಸರ್ವೇಶ್ವರನಿಗೆ ಸಲ್ಲುವುದು
ಸಜ್ಜನರಾಗಿ ಬಾಳಿದರೆ ನಮ್ಮ
ಘನತೆಯು ಮುಂದೆ ಹೆಚ್ಚುವುದು॥

ಸೂರ್ಯನಿಗೆಲ್ಲಿದೆ ಭೇದ ಭಾವನೆ
ಬೆಳಕನು ಚೆಲ್ಲುವನೆಲ್ಲರಿಗೂ
ವರುಣನ ನೀರು ಭೂಮಿಗೆ ಸುರಿವುದು
ಭೇದಗಳಿಲ್ಲದೆ ಎಲ್ಲರಿಗೂ॥

ರಾತ್ರಿಯು ಹಗಲು ಪ್ರಭಾತ ಮುಸ್ಸಂಜೆ
ಎಲ್ಲರಿಗೊಂದೇ ರೀತಿಯಿದೆ
ರಾಮ, ರಹೀಮರ ಪ್ರಾರ್ಥನೆ ಮಾಡುತ
ಬಾಳಲು ನಮಗೆ ದಾರಿಯಿದೆ॥

ನರನಾಡಿಗಳಲ್ಲಿ ಓಡುತಲಿರುವ
ರಕ್ತವು ಕೆಂಪು ಎಲ್ಲರದು
ನರರಿಗೆ ಹಸಿವು ನಿದ್ರೆಯು ತಂಪು
ಇರುವುದು ಒಂದೇ ಎಲ್ಲರಿಗೂ॥

ಏನಿದೆ ಲಾಭ ನಮ್ಮೊಳ ಜಗಳ
ದೇಶಕೆ ಇದರಲಿ ಬಲು ನಷ್ಟ
ಎಲ್ಲರೂ ಸೇರಿ ಒಟ್ಟಿಗೆ ಬಾಳಿ
ಪ್ರೀತಿಯಲಿ ನಡೆದರೆ ಸುಖ ಸ್ಪಷ್ಟ॥

ದೇಶ ದ್ರೋಹಿಗಳ ನಾಶಪಡಿಸಲು
ಸಜ್ಜನರಾಗಿ ಬಾಳೋಣ
ದೇಶದ ಸೇವೆಯ ಮಾಡುತ ನಾವು
ಸೋದರರಾಗಿ ನಡೆಯೋಣ॥

ಭಾರತ ಮಾತೆಯ ಒಡಲಲಿ ಜನಿಸಿದ
ಗಣ್ಯ ವ್ಯಕ್ತಿಗಳ ನುಡಿಮುತ್ತು
ಪಾಲಿಸಿ ನಡೆದರೆ ನೆಮ್ಮದಿಯೊಂದಿಗೆ
ದೂರವಾಗುವುದು ಆಪತ್ತು॥

ಒಬ್ಬರ ನೋವಿನ್ನೊಬ್ಬರು ಅರಿತು
ಬಾಳಿದರೆ ಸುಖ ನೆಮ್ಮದಿಯು
ಸ್ವಾರ್ಥಿಗಳಾಗುತ ಪ್ರೀತಿಯ ತೊರೆದರೆ
ಜೀವನ ನರಕಕೆ ಆಹುತಿಯು॥

ಸರ್ವ ಧರ್ಮವನು ಗೌರವದಿಂದ
ಕಾಣುತ ನಾವು ಬಾಳೋಣ
ಸರ್ವರ ಜೊತೆಯಲಿ ಪ್ರೀತಿಯ ಹಂಚುತ
ನೀತಿಯ ಮಾರ್ಗದಿ ನಡೆಯೋಣ॥

ಪ್ರೀತಿಯು ಇರಲಿ ಎಲ್ಲರ ಜೊತೆಯಲಿ
ದ್ವೇಷವು ಬೇಡ ಯಾರಲ್ಲೂ
ಪ್ರೀತಿಯ ಕಡಲಲಿ ಸ್ನೇಹದ
ಮೀನುಗಳಾಗುತ ನಲಿಯುವ ನಾವಿಲ್ಲಿ॥

ಮಾನವೀಯತೆಯು ಉಳಿಯಲಿ ಶಾಶ್ವತ
ಭಾರತ ಪುತ್ರರ ಮನದಲ್ಲಿ
ಮಾದರಿಯಾಗಲಿ ಭಾರತ ದೇಶವು
ಉನ್ನತಿಗಳಿಸುತ ಲೋಕದಲ್ಲಿ॥

ಭಾರತ ಮಾತೆಯ ಪ್ರೀತಿಯ ಪುತ್ರರೆ
ಒಂದಾಗುವ ನಾವೆಂದೆಂದೂ
ಭಾರತ ಮಾತೆಗೆ ನೋವನು ತರುವ
ಕೆಲಸವ ತೊರೆಯುವ ಎಂದೆಂದೂ॥

**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**